ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 6 ಗುರುವಾರ 2024

45

₹4

ಸಂಪುಟ: 45 | ಸಂಚಿಕೆ: 51 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಜೂನ್ 6 ಗುರುವಾರ 2024

45

ಸಂಪುಟ: 45 | ಸಂಚಿಕೆ: 51 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಕೇಂದ್ರ ಸಂಪುಟ ಸೇರಲು ಸಾಲುಗಟ್ಟಿ ನಿಂತಿರುವ ರಾಜ್ಯದ ಎನ್‌ಡಿಎ ಸಂಸದರು!

ಬೆಂಗಳೂರು, ಜೂನ್ 5(ಕೆಎಂಶಿ)– ನರೇಂದ್ರ ಮೋದಿ ಹೊಸ ಸರ್ಕಾರ ರಚನೆಗೆ ಮುಂದಾಗಿರುವ ಬೆನ್ನಲ್ಲೇ ಅವರ ಸಂಪುಟ ಸೇರ್ಪಡೆಗೆ ರಾಜ್ಯದ ಎನ್‌ಡಿಎ ಸಂಸದರು ಸಾಲುಗಟ್ಟಿ ನಿಂತಿದ್ದಾರೆ ಕರ್ನಾಟಕದಿಂದ ಇಬ್ಬರು ಜೆಡಿಎಸ್ ಸದಸ್ಯರು ಸೇರಿ ಎನ್‌ಡಿಎಯಿಂದ 19 ಸದಸ್ಯರು ಆಯ್ಕೆಯಾಗಿದ್ದಾರೆ.

ಇವರಲ್ಲಿ ಇಬ್ಬರು ಕೇಂದ್ರ ಸಚಿವರು, ಮೂವರು ಮಾಜಿ ಮುಖ್ಯಮಂತ್ರಿಗಳು, ಏಳನೇ ಬಾರಿಗೆ ಲೋಕಸಭೆ ಪ್ರವೇಶಿಸಿರುವ ರಮೇಶ್ ಜಿಗಜಿಣಗಿ ಹಾಗೂ ಸತತ ನಾಲ್ಕು ಬಾರಿ ಸಂಸತ್ ಪ್ರವೇಶಿಸಿದವರು ನಾಲ್ಕು ಮಂದಿ ಇದ್ದಾರೆ. ಪ್ರಹ್ಲಾದ್ ಜೋಶಿ ಮತ್ತು ಶೋಭಾ ಕರಂದ್ಲಾಜೆ ಅವರು, ಮೋದಿ ಅವರ ಹಾಲಿ ಸಂಪುಟದಲ್ಲಿ ಇದ್ದವರು, ಅವರು ಮತ್ತೆ ಸಚಿವರಾಗಿ ಮುಂದುವರೆಯಲು ಬಯಸುತ್ತಾರೆ.

ಕೇಂದ್ರದಲ್ಲಿ ಸರ್ಕಾರ ರಚನೆ ಸಂದರ್ಭದಲ್ಲಿ ಕರ್ನಾಟಕಕ್ಕೆ ಮೂರರಿಂದ ನಾಲ್ಕು ಸ್ಥಾನ ಸಿಗುತ್ತಾ ಬಂದಿದೆ.

ಆದರೆ ಈ ಬಾರಿ ಬಿಜೆಪಿ, ಕಳೆದ ಬಾರಿಗಿಂತ 60 ಸ್ಥಾನ ಕಡಿಮೆ ಇದೆ. ಅಲ್ಲದೆ, ಎನ್‌ಡಿಎ ಕೂಟಕ್ಕೆ ಎರಡು ಪ್ರಬಲ ಪಕ್ಷಗಳು ಕೈಜೋಡಿಸಿರುವುದರಿಂದ ಪ್ರಧಾನಿ ಅವರು, ಕೂಟದ ಮಿತ್ರರಿಗೆ ಅವಕಾಶ ಮಾಡಿಕೊಡಬೇಕಾಗುತ್ತದೆ. ಸಹಜವಾಗಿ ಬಿಜೆಪಿಯಿಂದ ಆಯ್ಕೆಗೊಂಡಿರುವ ● 6ನೇ ಪುಟಕ್ಕೆ

ಪಿಯು ಪರೀಕ್ಷೆ–3: ಜೂನ್ 7ರಿಂದ ನೋಂದಣಿ ಆರಂಭ

ಬೆಂಗಳೂರು: ದ್ವಿತೀಯ ಪಿಯು ಮೂರನೇ ಪರೀಕ್ಷೆಗೆ ಹೆಸರು ನೋಂದಾಯಿಸುವ ಪ್ರಕ್ರಿಯೆ ಜೂನ್ 7ರಿಂದ ಆರಂಭವಾಗಲಿದೆ.

ಪುನರಾವರ್ತಿತ ವಿದ್ಯಾರ್ಥಿಗಳು ಹಾಗೂ ಮೊದಲ, ಎರಡನೇ ಪರೀಕ್ಷೆ ಬರೆದು ಕಡಿಮೆ ಅಂಕ ಪಡೆದ ವಿದ್ಯಾರ್ಥಿಗಳು ಫಲಿತಾಂಶವನ್ನು ಇನ್ನಷ್ಟು ಉತ್ತಮಪಡಿಸಿಕೊಳ್ಳಲು ಮೂರನೇ ಪರೀಕ್ಷೆಗೆ ಹಾಜರಾಗಬಹುದು. ಇದೇ ಮೊದಲ ಬಾರಿ ಒಂದು ಶೈಕ್ಷಣಿಕ ಸಾಲಿನ ದ್ವಿತೀಯ ಪಿಯು ವಿದ್ಯಾರ್ಥಿಗಳು ಮೂರು ಪರೀಕ್ಷೆಗಳನ್ನು ಬರೆಯಲು ಅವಕಾಶ ಕಲ್ಪಿಸಲಾಗಿದ್ದು, ಪ್ರಥಮ ಪರೀಕ್ಷೆ ಬರೆದಿದ್ದ 6.80 ಲಕ್ಷ ವಿದ್ಯಾರ್ಥಿಗಳಲ್ಲಿ 5.52 ಲಕ್ಷ ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದರು. ಶೇ. 81.15ರಷ್ಟು ಫಲಿತಾಂಶ ದೊರೆತಿತ್ತು. ದ್ವಿತೀಯ ಪಿಯು ಪರೀಕ್ಷೆ–2 ಬರೆದಿದ್ದ 1.48 ಲಕ್ಷ ವಿದ್ಯಾರ್ಥಿಗಳಲ್ಲಿ 52,505 ತೇರ್ಗಡೆಯಾಗಿದ್ದರು. ಒಟ್ಟಾರೆ ಶೇ. 35.25 ಫಲಿತಾಂಶ ಲಭಿಸಿತ್ತು.

ಮೂರನೇ ಅವಧಿಗೆ ಪ್ರಧಾನಿಯಾಗಿ

ಜೂ.8ಕ್ಕೆ ನರೇಂದ್ರ ಮೋದಿ ಪ್ರಮಾಣ

ಎನ್‌ಡಿಎ ಮೈತ್ರಿಕೂಟದ ನಾಯಕರಾಗಿ ಒಮ್ಮತದ ಆಯ್ಕೆ



ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ನವದೆಹಲಿಯಲ್ಲಿ ಬುಧವಾರ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟದ (ಎನ್‌ಡಿಎ) ಮುಖಂಡರು ಸಭೆಯ ನಂತರ ಒಗ್ಗಟ್ಟು ಪ್ರದರ್ಶಿಸಿದರು.

ನವದೆಹಲಿ: ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟ (ಎನ್‌ಡಿಎ)ದ ನಾಯಕರಾಗಿ ನರೇಂದ್ರ ಮೋದಿ ಅವರನ್ನು ಬುಧವಾರ ಸರ್ವಾನುಮತದಿಂದ ಆಯ್ಕೆ ಮಾಡಲಾಗಿದ್ದು, ಜೂನ್ 8 ರಂದು ಮೂರನೇ ಅವಧಿಗೆ ಪ್ರಧಾನಿಯಾಗಿ ಅವರು ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ಇಂದು ಸಂಜೆ ನವದೆಹಲಿಯಲ್ಲಿ ನಡೆದ ಎನ್‌ಡಿಎ ನಾಯಕರ ಸಭೆಯಲ್ಲಿ ಸರ್ಕಾರ ರಚನೆ ಬಗ್ಗೆ ಚರ್ಚಿಸಲಾಯಿತು. ಬಳಿಕ ನರೇಂದ್ರ ಮೋದಿ ಅವರನ್ನು ಮೈತ್ರಿಕೂಟದ ನಾಯಕರನ್ನಾಗಿ ಔಪಚಾರಿಕವಾಗಿ ಆಯ್ಕೆ ಮಾಡಲಾಯಿತು. ಇದು ಮೋದಿ ಮೂರನೇ ಅವಧಿಗೆ ಪ್ರಧಾನಿಯಾಗಲು ದಾರಿ ಮಾಡಿಕೊಟ್ಟಿದೆ.


ಇದೇ ವೇಳೆ ಬಡವರು, ಮಹಿಳೆಯರು, ಯುವಕರು, ರೈತರು ಮತ್ತು ಸಮಾಜದ ವಂಚಿತ ವರ್ಗಗಳ ಕಲ್ಯಾಣಕ್ಕೆ ಮೈತ್ರಿ ಸರ್ಕಾರದ ಬದ್ಧತೆಯನ್ನು ಒತ್ತಿಹೇಳುವ ನಿರ್ಣಯವನ್ನು ಎನ್‌ಡಿಎ ನಾಯಕರು ಅಂಗೀಕರಿಸಿದ್ದಾರೆ.

ಮೋದಿ ಅಧ್ಯಕ್ಷತೆಯಲ್ಲಿ ನಡೆದ ಎನ್‌ಡಿಎ ಸಭೆಯಲ್ಲಿ ಟಿಡಿಪಿ ಅಧ್ಯಕ್ಷ ಎನ್ ಚಂದ್ರಬಾಬು ನಾಯ್ಡು, ಜೆಡಿಯು ಮುಖ್ಯಸ್ಥ ಮತ್ತು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್, ಶಿವಸೇನೆ ನಾಯಕ ಮತ್ತು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ್ ಶಿಂಧೆ, ಜೆಡಿಎಸ್ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ಎಲ್‌ಜೆಪಿ(ರಾಮ್ ವಿಲಾಸ್) ನಾಯಕ ಚಿರಾಗ್ ಪಾಸ್ವಾನ್ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಬಿಜೆಪಿ ಅಧ್ಯಕ್ಷ ಜೆಪಿ ನಡ್ಡಾ, ಅಮಿತ್ ಶಾ, ರಾಜನಾಥ್ ಸಿಂಗ್ ಸೇರಿದಂತೆ ಬಿಜೆಪಿಯ ಹಿರಿಯ ನಾಯಕರು ಕೂಡ ಈ ಸಭೆಯಲ್ಲಿ ಉಪಸ್ಥಿತರಿದ್ದರು. ● 6ನೇ ಪುಟಕ್ಕೆ

ಮೋದಿ ಸರ್ಕಾರ ರಚನೆಗೆ ಬೆಂಬಲ ಪತ್ರ ನೀಡಿದ ನಿತೀಶ್, ನಾಯ್ಡು

ನವದೆಹಲಿ: ನರೇಂದ್ರ ಮೋದಿ ನೇತೃತ್ವದಲ್ಲಿ ಸರ್ಕಾರ ರಚನೆಗೆ ಟಿಡಿಪಿ ಹಾಗೂ ಜೆಡಿಯು ಸೇರಿದಂತೆ ಎಲ್ಲಾ ಮಿತ್ರ ಪಕ್ಷಗಳು ಒಪ್ಪಿಗೆ ಸೂಚಿಸಿವೆ. ಮೋದಿ ಅವರು ಜೂ.7ರಂದು ಸಂಜೆ 5ಕ್ಕೆ ರಾಷ್ಟ್ರಪತಿಭವನಕ್ಕೆ ತೆರಳಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಿ ಸರ್ಕಾರ ರಚನೆಗೆ ಹಕ್ಕು ಮಂಡಿಸಲಿದ್ದಾರೆ. ಮೋದಿ ಅವರಿಗೆ ಎನ್‌ಡಿಎ ನಾಯಕರು ಸಾಥ್ ನೀಡಲಿದ್ದಾರೆ.

ನೂತನ NDA ಸರ್ಕಾರದಲ್ಲಿ ಕೃಷಿ ಖಾತೆ ಮೇಲೆ ಕುಮಾರಣ್ಣ ಕಣ್ಣು



ನವದೆಹಲಿ: ಹೊಸ ಎನ್‌ಡಿಎ ಸರ್ಕಾರದಲ್ಲಿ ಕೃಷಿ ಖಾತೆ ವಹಿಸಿಕೊಳ್ಳುವ ಬಗ್ಗೆ ತಮ್ಮ ಪಕ್ಷ ಆಸಕ್ತಿ ಹೊಂದಿದೆ ಎಂದು ಜೆಡಿಎಸ್ ರಾಜ್ಯಾಧ್ಯಕ್ಷ ಮತ್ತು ಮಾಜಿ ಮುಖ್ಯಮಂತ್ರಿ ಎಚ್‌ಡಿ ಕುಮಾರಸ್ವಾಮಿ ಬುಧವಾರ ಸುಳಿವು ನೀಡಿದ್ದಾರೆ.

ಕುಮಾರಸ್ವಾಮಿ ಅವರ ತಂದೆ ಮತ್ತು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ನೇತೃತ್ವದ ಜೆಡಿಎಸ್ ಕಳೆದ ವರ್ಷ ಎನ್‌ಡಿಎ ಸೇರಿತ್ತು. ಒಟ್ಟು 28 ಸ್ಥಾನಗಳನ್ನು ಹೊಂದಿರುವ ಕರ್ನಾಟಕದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಒಟ್ಟಾಗಿ ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದವು. ಬಿಜೆಪಿ 17 ಮತ್ತು ಜೆಡಿಎಸ್ ಎರಡು ಸ್ಥಾನಗಳನ್ನು ಗೆದ್ದಿದೆ.

ಸರ್ಕಾರ ರಚನೆಗೆ ಮುನ್ನ ಜೆಡಿಎಸ್‌ನ ಬೇಡಿಕೆಗಳ ಕುರಿತು ವರದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಮಾಜಿ ಸಿಎಂ, ನಮ್ಮಲ್ಲಿ ಅಂತಹ ಯಾವುದೇ ಬೇಡಿಕೆ ಇಲ್ಲ. ಬಹುಕಾಲದಿಂದ ಇರುವ ಕರ್ನಾಟಕದ ಸಮಸ್ಯೆಗಳ ಪರಿಹಾರ ನಮ್ಮ ಆದ್ಯತೆಯಾಗಿದೆ. ಪ್ರಾತಿನಿಧ್ಯ ನೀಡುವ ಬಗ್ಗೆ (ಕೇಂದ್ರದಲ್ಲಿ ಕರ್ನಾಟಕಕ್ಕೆ ಕ್ಯಾಬಿನೆಟ್ ಸ್ಥಾನ) ನರೇಂದ್ರ ಮೋದಿ ನಿರ್ಧರಿಸುತ್ತಾರೆ ಎಂದರು. ತಾವು ಕೇಂದ್ರ ಸಚಿವ ಸ್ಥಾನದ ಆಕಾಂಕ್ಷಿಯಾಗಿರುವ ಬಗ್ಗೆ ಪ್ರತಿಕ್ರಿಯಿಸಿದ ಕುಮಾರಸ್ವಾಮಿ, ಈ ಬಗ್ಗೆ ಎನ್‌ಡಿಎ ನಾಯಕತ್ವ ನಿರ್ಧರಿಸಲಿದೆ ಎಂದು ಹೇಳಿದ್ದಾರೆ. ತಾವು ಕೃಷಿ ಸಚಿವರಾಗುತ್ತಾರೆ ಎಂಬ ಊಹಾಪೋಹಗಳ ಬಗ್ಗೆ ಪ್ರತಿಕ್ರಿಯಿಸಿದ ಕುಮಾರಸ್ವಾಮಿ, ಇತರ ಹಲವಾರು ಜೆಡಿ(ಎಸ್) ನಾಯಕರು ಇದೇ ರೀತಿಯ ಆಸೆಯನ್ನು ವ್ಯಕ್ತಪಡಿಸಿದ್ದಾರೆ. ಎನ್‌ಡಿಎ ನಾಯಕತ್ವ ಏನು ನಿರ್ಧಾರ ತೆಗೆದುಕೊಳ್ಳುತ್ತದೆ ಎಂಬುದನ್ನು ಕಾದು ನೋಡೋಣ ಎಂದು ಹೇಳುವ ಮೂಲಕ ಅವರು ತಮ್ಮ ಪಕ್ಷದ ಆಸಕ್ತಿ ಕೃಷಿ ಇಲಾಖೆಯಲ್ಲಿದೆ ಎಂದು ಒಪ್ಪಿಕೊಂಡರು.

ನಮ್ಮ ಪಕ್ಷದ ಹಿತಾಸಕ್ತಿ ಕೃಷಿ ಇಲಾಖೆಯಲ್ಲಿದೆ. ಮೊದಲಿನಿಂದಲೂ ನಮ್ಮ ಹೋರಾಟ ರೈತ ಸಮುದಾಯಕ್ಕೆ ಒಳಿತು ಮಾಡುವತ್ತ ಸಾಗಿದೆ ಎಂದು ಇಂದಿನ ಎನ್‌ಡಿಎ ಸಭೆಯಲ್ಲಿ ಭಾಗವಹಿಸಲು ದೆಹಲಿಗೆ ಆಗಮಿಸಿದ ಕುಮಾರಸ್ವಾಮಿ ಸುದ್ದಿಗಾರರಿಗೆ ತಿಳಿಸಿದ್ದಾರೆ.

ವಾಲ್ಮೀಕಿ ನಿಗಮದ ಹಣ ಅಕ್ರಮ ವರ್ಗಾವಣೆ; ಸಿಬಿಐನಿಂದ FIR

ಇಂದು ಸಚಿವ ನಾಗೇಂದ್ರ ರಾಜೀನಾಮೆ ಸಾಧ್ಯತೆ



ನಾಗೇಂದ್ರ

ಬೆಂಗಳೂರು, ಜೂ.5–ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಬಹು ಕೋಟಿ ಹಗರಣದಲ್ಲಿ ಸಚಿವ ಬಿ.ನಾಗೇಂದ್ರ ತಲೆದಂಡವಾಗುವ ಸಾಧ್ಯತೆ ಇದೆ ಎಂದು ಹೇಳಲಾಗಿದ್ದು, ಅವರು ನಾಳೆ (ಜೂ.6) ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಈ ಪ್ರಕರಣದ ತನಿಖೆಯನ್ನು ಸಿಬಿಐ ಕೈಗೆತ್ತಿಕೊಂಡ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಸಂಜೆ ತಮ್ಮ ಕಾವೇರಿ ನಿವಾಸಕ್ಕೆ ಸಚಿವ ಬಿ.ನಾಗೇಂದ್ರ ಅವರನ್ನು ಕರೆದು ಸುದೀರ್ಘವಾಗಿ ಚರ್ಚಿಸಿದ್ದಲ್ಲದೇ, ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಸೂಚಿಸಿದ್ದಾರೆ ಎನ್ನಲಾಗಿದೆ.

ಸಿಬಿಐ ತನಿಖೆ ನಡೆಸುತ್ತಿರುವುದರಿಂದ ನೀವು (ನಾಗೇಂದ್ರ) ಸಚಿವ ಸ್ಥಾನದಲ್ಲಿ ಮುಂದುವರೆಯುವುದು ಸರ್ಕಾರಕ್ಕೆ ಮುಜುಗರವನ್ನುಂಟು ಮಾಡುತ್ತದೆ. ನಾವಾಗಿಯೇ ನಿಮ್ಮನ್ನು ಸಂಪುಟದಿಂದ ತೆಗೆದು ಹಾಕಿದರೆ ನಿಮಗೆ ಅವಮಾನವಾಗುತ್ತದೆ. ಆದ್ದರಿಂದ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಡಿ. ತನಿಖೆಯಲ್ಲಿ ನಿಮಗೆ ಕ್ಲೀನ್‌ಚಿಟ್ ಬಂದ ನಂತರ ಮತ್ತೆ ಸಂಪುಟಕ್ಕೆ ● 6ನೇ ಪುಟಕ್ಕೆ

ಬಿಜೆಪಿ–ಜೆಡಿಎಸ್ ನಡುವಿನ ಮೈತ್ರಿ ಮತ್ತಷ್ಟು ಗಟ್ಟಿ: ಮಾಜಿ ಪ್ರಧಾನಿ ದೇವೇಗೌಡರು, ಕುಮಾರಸ್ವಾಮಿಗೆ ಚಿರಋಣಿ

ತುಮಕೂರು ನೂತನ ಸಂಸದ ಸೋಮಣ್ಣ ಅಭಿಪ್ರಾಯ

ಮೈಸೂರು, ಜೂ.5(ಬಿಎಲ್‌ಯು)– ಜೆಡಿಎಸ್ ಹಾಗೂ ಬಿಜೆಪಿ ನಡುವಿನ ಮೈತ್ರಿ ಮತ್ತಷ್ಟು ಗಟ್ಟಿಯಾಗಲಿದೆ ಎಂದು ತುಮಕೂರು ಲೋಕಸಭಾ ಕ್ಷೇತ್ರದಿಂದ ಆಯ್ಕೆಯಾಗಿರುವ ಎನ್‌ಡಿಎ ವಿಜೇತ ಅಭ್ಯರ್ಥಿ ವಿ.ಸೋಮಣ್ಣ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಬಿಜೆಪಿ ಹಾಗೂ ಜೆಡಿಎಸ್ ನಡುವಿನ ಉತ್ತಮ ಮೈತ್ರಿಯಿಂದ ಲೋಕಸಭಾ ಚುನಾವಣೆಯಲ್ಲಿ 19 ಸ್ಥಾನಗಳಲ್ಲಿ ಗೆಲುವು ಸಾಧಿಸಿದ್ದೇವೆ. ಈ ಮೂಲಕ ಎರಡು ಪಕ್ಷಗಳ ಸಮನ್ವಯತೆ ಮುಂದುವರೆಯಲಿದೆ ಎಂದರು. ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಹಾಗೂ ಬಿಜೆಪಿ ಒಂದೇ ನಾಣ್ಯದ ಎರಡು ಮುಖದ ರೀತಿ ಕೆಲಸ ಮಾಡಿವೆ. ರಾಜ್ಯದ 28 ಕ್ಷೇತ್ರಗಳಲ್ಲಿ ಕೂಡ ಸಮನ್ವಯತೆ ಇತ್ತು. ಅದರಲ್ಲೂ ತುಮಕೂರು ಕ್ಷೇತ್ರದಲ್ಲಿ ಬಿಜೆಪಿಗಿಂತಲೂ ಜೆಡಿಎಸ್‌ನವರು ಪರಿಣಾಮಕಾರಿಯಾಗಿ ನನ್ನ ಪರ ಕೆಲಸ ಮಾಡಿದ್ದರು ಎಂದು ಸೋಮಣ್ಣ ಹೇಳಿದರು.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ನಾಲ್ಕೈದು ಬಾರಿ ತುಮಕೂರು ಕ್ಷೇತ್ರದಲ್ಲಿ ನನ್ನ ಪರ ಪ್ರಚಾರ ಮಾಡಿದ್ದರು. ಈ ಮೂಲಕ ನನಗೆ ಹೆಚ್ಚಿನ ಶಕ್ತಿ ತುಂಬಿದರು. ಅವರು ನನಗೆ ಮಾಡಿದ ಸಹಾಯವನ್ನು ನಾನು ಯಾವತ್ತೂ ಮರೆಯುವುದಿಲ್ಲ. ಅವರಿಗೆ ನಾನು ಋಣಿಯಾಗಿರುತ್ತೇನೆ ಎಂದು ತಿಳಿಸಿದರು.

11 ತಿಂಗಳ ರಾಜಕೀಯ ವನವಾಸ ಅಂತ್ಯವಾಯ್ತು...



ಕಳೆದ ಹನ್ನೊಂದು ತಿಂಗಳು ಒಂದು ರೀತಿ ವನವಾಸದಲ್ಲಿದ್ದೆ. ಸದಾ ಕೆಲಸ ಮಾಡುತ್ತಾ ಚಟುವಟಿಕೆಯಿಂದ ಇರುತ್ತಿದ್ದ ನನಗೆ ಕೆಲಸವೇ ಇಲ್ಲದಂತಾಗಿತ್ತು. ಆದರೆ ಸಂಸದನಾಗಿ ಆಯ್ಕೆ ಆಗುವ ಮೂಲಕ ನನ್ನ ರಾಜಕೀಯ ವನವಾಸ ಮುಗಿದಿದೆ ಎಂದು ಹೇಳಿದರು. ನಾನು ಹೊರಗಿನವನು ಎಂದು ಲೆಕ್ಕ ಹಾಕದೆ ತುಮಕೂರಿನ ಜನರು ನನ್ನನ್ನು ಗೆಲ್ಲಿಸಿದ್ದಾರೆ. ಎರಡು ಲಕ್ಷ ಲೀಡ್ ನಿರೀಕ್ಷೆ ಮಾಡಿದ್ದೆ. ಆದರೆ ಇದರಲ್ಲಿ 20 ಸಾವಿರ ಮತ ಕಡಿಮೆ ಆಯಿತು. ಆದರೂ ಬೇಜಾರಿಲ್ಲ. ನನ್ನ ಬಗ್ಗೆ ನಾಲ್ಕು ಜನರು ನಾಲ್ಕಾರು ಮಾತಾಡಿಕೊಂಡು ಟೀಕಿಸಬಹುದು. ಆದರೆ ಇದಕ್ಕೆಲ್ಲಾ ನಾನು ತಲೆ ಕೆಡಿಸಿಕೊಳ್ಳುವುದಿಲ್ಲ ಎಂದು ಸೋಮಣ್ಣ ಸ್ಪಷ್ಟಪಡಿಸಿದರು. ಇವತ್ತಿನ ರಾಜಕೀಯ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡಿದ್ದೇನೆ. ಈ ಹಿನ್ನೆಲೆಯಲ್ಲಿ ಸಚಿವ ಸ್ಥಾನ ನೀಡುವುದು ಹೈಕಮಾಂಡ್‌ಗೆ ಬಿಟ್ಟ ವಿಚಾರ. ಒಂದು ವೇಳೆ ಅವಕಾಶ ಸಿಕ್ಕರೆ ಚುರುಕಿನಿಂದ ಕೆಲಸ ಮಾಡುತ್ತೇನೆ. ನಾಳೆ ನಾನು ದೆಹಲಿಗೆ ಹೋಗುತ್ತೇನೆ ಎಂದರು.

ಇಂದು ವಿಧಾನಪರಿಷತ್ ಚುನಾವಣಾ ಮತ ಎಣಿಕೆ

- ದಕ್ಷಿಣ ಶಿಕ್ಷಕರ ಕ್ಷೇತ್ರ; ನೈರುತ್ಯ ಶಿಕ್ಷಕರ, ಪದವೀಧರರ ಕ್ಷೇತ್ರದ 29 ಅಭ್ಯರ್ಥಿಗಳ ಭವಿಷ್ಯ ನಿರ್ಧಾರ
- ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನಲ್ಲಿ ಬೆಳಗ್ಗೆ 8ರಿಂದ ಮತ ಎಣಿಕೆ ಆರಂಭ: ಎಣಿಕಾ ಕೇಂದ್ರದ ಸುತ್ತ ಬಿಗಿ ಭದ್ರತೆ
- ಪ್ರತ್ಯೇಕ 14 ಟೇಬಲ್‌ಗಳಲ್ಲಿ ಒಟ್ಟು 135 ಸಿಬ್ಬಂದಿಗಳ ನಿಯೋಜನೆ; ನಿಗದಿತ ವೇಳೆಗೆ ಫಲಿತಾಂಶ ಲಭ್ಯತೆ ಅಸಾಧ್ಯ



ಕೆ.ವಿವೇಕಾನಂದ



ಮರಿತಿಬ್ಬೇಗೌಡ

ಮೈಸೂರು, ಜೂ.5 (ಎಂಟಿವೈ)– ಲೋಕಸಭಾ ಚುನಾವಣಾ ಫಲಿತಾಂಶ ಪ್ರಕಟವಾದ ಬೆನ್ನಲ್ಲೇ ಇದೀಗ ವಿಧಾನಪರಿಷತ್ ಚುನಾವಣಾ ಮತ ಎಣಿಕಾ ಕಾರ್ಯ ನಾಳೆ(ಜೂ.6) ಬೆಳಗ್ಗೆ 8ಕ್ಕೆ ಆರಂಭವಾಗಲಿದ್ದು, ದಕ್ಷಿಣ ಶಿಕ್ಷಕರ ಕ್ಷೇತ್ರ, ನೈರುತ್ಯ ಶಿಕ್ಷಕರು ಮತ್ತು ನೈರುತ್ಯ ಪದವೀಧರರ ಕ್ಷೇತ್ರಗಳ ಒಟ್ಟು 29 ಅಭ್ಯರ್ಥಿಗಳ ಭವಿಷ್ಯ ನಿರ್ಧಾರವಾಗಲಿದೆ.

ರಾಜ್ಯದ ಗಮನ ಸೆಳೆದಿರುವ ಮೈಸೂರು, ಚಾಮರಾಜನಗರ, ಮಂಡ್ಯ ಹಾಗೂ ಹಾಸನ ಜಿಲ್ಲೆಗಳನ್ನೊಳಗೊಂಡ ದಕ್ಷಿಣ ಶಿಕ್ಷಕರ ಕ್ಷೇತ್ರ, ನೈರುತ್ಯ ಶಿಕ್ಷಕರ ಕ್ಷೇತ್ರ ಹಾಗೂ ನೈರುತ್ಯ ಪದವೀಧರರ ಕ್ಷೇತ್ರದ ಚುಣಾವಣೆಯಲ್ಲಿ ಈ ಬಾರಿ ಕಾಂಗ್ರೆಸ್ ಹಾಗೂ ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿ ನಡುವೆ ನೇರಾ ಹಣಾಹಣಿ ಏರ್ಪಟ್ಟಿದ್ದು, ಯಾರಿಗೆ ವಿಜಯಮಾಲೆ ಕಾದು ನೋಡಬೇಕಾಗಿದೆ. ಜೂ.3ರಂದು ಬೆಳಗ್ಗೆ 8ರಿಂದ ಸಂಜೆ 4 ಗಂಟೆವರೆಗೆ ಮೈಸೂರು ನಗರ ಸೇರಿದಂತೆ ಜಿಲ್ಲೆಯಲ್ಲಿ 20, ಚಾಮರಾಜನಗರದಲ್ಲಿ 5, ಮಂಡ್ಯದಲ್ಲಿ 9, ಹಾಸನದಲ್ಲಿ 10 ಸೇರಿದಂತೆ 44 ಮತಗಟ್ಟೆಗಳಲ್ಲಿ ಶೇ.88.07ರಷ್ಟು ಮತದಾನ ನಡೆದಿತ್ತು. ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ 11,998 ಪುರುಷ ಮತದಾರರು, 9,550 ಮಹಿಳಾ ಮತದಾರರು ಹಾಗೂ ಒಬ್ಬರು ತೃತೀಯ ಲಿಂಗಿ ಸೇರಿದಂತೆ 21,549 ಮತದಾರರಿದ್ದು, ಅವರಲ್ಲಿ 10,894 ಪುರುಷ ಹಾಗೂ 8085 ಮಹಿಳೆಯರು ಸೇರಿದಂತೆ 18,979 ಶಿಕ್ಷಕ ಮತದಾರರು ಹಕ್ಕು ಚಲಾಯಿಸಿದ್ದಾರೆ.

ಮೈಸೂರು ಜಿಲ್ಲೆಯಲ್ಲಿ 8,7769 (ಶೇ.84.07), ಚಾಮರಾಜನಗರದಲ್ಲಿ 2012(ಶೇ.92.25), ಮಂಡ್ಯದಲ್ಲಿ 4949 (ಶೇ.91.60), ಹಾಸನ ಜಿಲ್ಲೆಯಲ್ಲಿ 3242 (ಶೇ.91.95) ಮತದಾರರು ಮತದಾನ ಮಾಡಿದ್ದರು. ದಕ್ಷಿಣ ಶಿಕ್ಷಕರ ಕ್ಷೇತ್ರದ ನಾಲ್ಕು ಜಿಲ್ಲೆಗಳಿಂದ ಮತಪತ್ರವುಳ್ಳ ಪೆಟ್ಟಿಗೆಯನ್ನು ಬಿಗಿ ಭದ್ರತೆಯಲ್ಲಿ ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ಭದ್ರತಾ ಕೊಠಡಿಯಲ್ಲಿ ತಂದಿರಿಸಲಾಗಿತ್ತು. ಇದರೊಂದಿಗೆ ನೈರುತ್ಯ ಶಿಕ್ಷಕರ ಕ್ಷೇತ್ರ ಹಾಗೂ ನೈರುತ್ಯ ಪದವೀಧರರ ಕ್ಷೇತ್ರದ ಮತ ಪತ್ರಗಳುಳ್ಳ ಬಾಕ್ಸ್‌ಗಳನ್ನು ಇಲ್ಲಿಯೇ ಪ್ರತ್ಯೇಕ ಕೊಠಡಿಗೆ ತಂದು ಇಡಲಾಗಿದ್ದು, ಸ್ಟ್ರಾಂಗ್ ರೂಮ್ ಸುತ್ತ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿದೆ. ನಾಳೆ(ಜೂ.6) ಬೆಳಗ್ಗೆ 8 ಗಂಟೆಗೆ ಚುನಾವಣಾ ವೀಕ್ಷಕರು, ಅಭ್ಯರ್ಥಿ, ಚುನಾವಣಾ ಏಜೆಂಟ್ ಸಮ್ಮುಖದಲ್ಲಿ ಭದ್ರತಾ ಕೊಠಡಿ ತೆರೆದು, ಮತ ಎಣಿಕೆ ನಡೆಯುವ ಕೊಠಡಿಗೆ ಮತಪತ್ರವುಳ್ಳ ಪೆಟ್ಟಿಗೆ ತಂದು ಜೋಡಣೆ ಮಾಡಲಾಗುತ್ತದೆ. ಮೂರು ಕ್ಷೇತ್ರಗಳಿಗೂ ಪ್ರತ್ಯೇಕ ಕೊಠಡಿಯಲ್ಲಿ ಮತ ಎಣಿಕೆಗೆ 14 ಟೇಬಲ್‌ಗಳನ್ನು ಸಿದ್ಧಪಡಿಸಲಾಗಿದ್ದು, ಒಬ್ಬರು ಚುನಾವಣಾಧಿಕಾರಿಗಳ ಟೇಬಲ್ ಅಳವಡಿಸಲಾಗಿದೆ. ಮತ ಎಣಿಕೆ ಕಾರ್ಯಕ್ಕೆ ಪ್ರತಿ ಟೇಬಲ್‌ಗೆ ಒಬ್ಬರು ಮೇಲ್ವಿಚಾರಕರು ಹಾಗೂ ಇಬ್ಬರು ಸಹಾಯಕರನ್ನು ನೇಮಕ ಮಾಡಲಾಗಿದೆ. ಮತ ಎಣಿಕೆ ಟೇಬಲ್‌ಗಳಿಗೆ ಒಬ್ಬರಂತೆ ಅಭ್ಯರ್ಥಿಗಳ ಪರವಾಗಿ ಮತ ಎಣಿಕೆ ಏಜೆಂಟ್‌ಗಳನ್ನು ನೇಮಕ ಮಾಡಿ ಗುರುತಿನ ಚೀಟಿ ನೀಡಲಾಗಿದೆ.

ಬಿಗಿ ಭದ್ರತೆ: ಮತ ಎಣಿಕೆಗೆ ಬಿಗಿ ಪೊಲೀಸ್ ಭದ್ರತೆ ಕೈಗೊಳ್ಳಲಾಗಿದೆ. ಇಬ್ಬರು ಎಸಿಪಿ, 5 ಇನ್ಸ್‌ಪೆಕ್ಟರ್‌ಗಳು, 9 ಸಬ್ ಇನ್ಸ್‌ಪೆಕ್ಟರ್‌ಗಳು, 13 ಎಎಸ್‌ಐ, 60 ಮಂದಿ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ದಕ್ಷಿಣ ಶಿಕ್ಷಕರ ಕ್ಷೇತ್ರದ ಕಣದಲ್ಲಿರುವ ಹುರಿಯಾಳುಗಳು: ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ● 6ನೇ ಪುಟಕ್ಕೆ



ದಕ್ಷಿಣ ಶಿಕ್ಷಕರ ಕ್ಷೇತ್ರ, ನೈರುತ್ಯ ಶಿಕ್ಷಕರ ಕ್ಷೇತ್ರದ ಮತ ಎಣಿಕೆಗೆ ಬಿಗಿ ಪೊಲೀಸ್ ಭದ್ರತೆ ಕೈಗೊಂಡಿರುವುದು.

ನಕ್ಕರೆ ಅದೇ ಸ್ವರ್ಗ

ತಾಯಿ : ಇವತ್ತಾದ್ರೂ ನಿನ್ನ ಕೊಠಡಿಯನ್ನು ಕ್ಲೀನ್ ಮಾಡೋ, ಎಷ್ಟೊಂದು ಕಸ

ಮಗ : ಸಾರಿಯಮ್ಮ, ಇವತ್ತು ಬೀದಿ ಸ್ವಚ್ಛತಾ ಕಾರ್ಯಕ್ರಮವಿದೆ. ನಾನೂ ಹೋಗಬೇಕು.

ಮೈಸೂರು ಮಿತ್ರ

ಗುರುವಾರ, 6 ಜೂನ್ 2024

ಸತ್ಯೇನೋತ್ತಭಿತಾ ಭೂಮಿ!! ನಹಿ ಸತ್ಯಾತ್ಪರೋ ಧರ್ಮ:!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ವಿಧೇಯತೆ ಎಂದೂ ದೌರ್ಬಲ್ಯವಲ್ಲ, ಅದು ನಿಜವಾದ ಶಕ್ತಿ. ನಿಮ್ಮ ಶಕ್ತಿಯನ್ನು ತೋರಿಸಲು ಪ್ರಯತ್ನಿಸುವುದು ನಿಜವಾದ ದೌರ್ಬಲ್ಯ- ಜಗ್ಗಿ ವಾಸುದೇವ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಗೆದ್ದರೆ ಆಡೋದಕ್ಕೆ ಅನ್ನೋದು / ಸೋತರೆ ನೋಡೋದಕ್ಕೆ ಅನ್ನೋದು

ನಿಮ್ಮ ಪತ್ರಗಳು

ಯದುವೀರ್ ಒಡೆಯರ್‌ಗೆ ಅಭಿನಂದನೆಗಳು

ಮಾನ್ಯರೆ,

ಕನ್ನಡ ನಾಡಿನ ಪ್ರಾತಃಸ್ಮರಣೀಯರು ಆಧುನಿಕ ಕನ್ನಡ ನಾಡಿನ ನಿರ್ಮಾತೃ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜನ್ಮದಿನದ ಶುಭಾಶಯಗಳು. ಮೈಸೂರು ಸಂಸ್ಥಾನವನ್ನು 400 ವರ್ಷಗಳ ಕಾಲ ಆಳಿ ಕರ್ನಾಟಕದ ನಿರ್ಮಾಣಕ್ಕೆ ಅಡಿಗಲ್ಲು ಹಾಕಿದ ಒಡೆಯರ್ ವಂಶದವರನ್ನು ಮರೆಯಲಾದೀತೆ? ಯದುವಂಶಸ್ಥ ಮಹಾರಾಜರು ಕೈಗೊಂಡ ಸುಧಾರಣಾ ಕಾರ್ಯಗಳು, ಜನಪರ ಕಾರ್ಯಕ್ರಮಗಳು ಅಸಂಖ್ಯಾ. ಹಲವಾರು ಪ್ರಥಮಗಳಿಗೆ ನಾಂದಿ ಹಾಡಿದ ಹೆಗ್ಗಳಿಕೆ ಮೈಸೂರು ಒಡೆಯರ್ ದೊರೆಗಳದ್ದು. ಪ್ರಥಮ ಪ್ರಜಾ ಪ್ರತಿನಿಧಿಗಳ ಸಭೆ ನಡೆಸಿ ರಾಜ್ಯದ ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳನ್ನು ಚರ್ಚಿಸುವ ಮೂಲಕ ಆಗಲೇ ಪ್ರಜಾಪ್ರಭುತ್ವ ನೀತಿ ಜಾರಿಗೊಳಿಸಿದ್ದರು.

ಏಷ್ಯಾದಲ್ಲೇ ಮೊದಲಬಾರಿಗೆ ವಿದ್ಯುತ್ ಉತ್ಪಾದನೆ ಶಿವನಸಮುದ್ರದಲ್ಲಿ ಮಾಡಲಾಯಿತು. ಶಿಕ್ಷಣ, ಬ್ಯಾಂಕ್, ನೀರಾವರಿ, ವಿಜ್ಞಾನ, ತಂತ್ರಜ್ಞಾನ, ಕೈಗಾರಿಕೆ ಹೀಗೆ ಹಲವಾರು ಕ್ಷೇತ್ರಗಳಲ್ಲಿ ಕ್ರಾಂತಿಕಾರಿ ಅಭಿವೃದ್ಧಿ ಸಾಧನೆ ಮಾಡಿರುವ ಹೆಗ್ಗಳಿಕೆ. ಸರ್ವ ಜನಾಂಗದವರನ್ನು ಸಮಾನವಾಗಿ ಕಂಡ ಮೈಸೂರು ದೊರೆಗಳು ಯುಗ ಯುಗ ಕಳೆದರೂ ಯಾರೂ ಅಳಿಸಲಾಗದ ಇತಿಹಾಸವನ್ನೇ ಸೃಷ್ಟಿಸಿದ್ದಾರೆ.

ಮೈಸೂರು ದೊರೆಗಳೇ ಸ್ವತಃ ಸಾಹಿತಿಗಳು, ವಾಗ್ಗೇಯಕಾರರು, ಕವಿಗಳು ಆಗಿದ್ದರು ಹಾಗೂ ಕಲೆ, ಸಾಹಿತ್ಯ, ಸಂಗೀತ ಎಲ್ಲಾ ಲಲಿತಕಲೆಗಳನ್ನು ಪೋಷಿಸಿ ಬೆಳೆಸಿದ್ದರಿಂದ ಇಂದು ಮೈಸೂರು ಸಾಂಸ್ಕೃತಿಕ ನಗರಿ ಎಂದು ಪ್ರಖ್ಯಾತವಾಗಿದೆ..

ಜೂನ್ 4ರಂದೇ ನಮ್ಮ ದೇಶದ ಲೋಕಸಭಾ ಚುನಾವಣಾ ಫಲಿತಾಂಶ ಪ್ರಕಟಗೊಂಡಿದೆ. ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಲ್ಲಿ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ವಿಜಯಶಾಲಿಯಾಗಿದ್ದಾರೆ. ಮೈಸೂರು - ಕೊಡಗು ಜಿಲ್ಲೆಯ ಪ್ರಜಾಪ್ರತಿನಿಧಿಯಾಗಿದ್ದಾರೆ. ಇದು ಸಂತಸದ ಸಂಗತಿ.

ಈ ಹಿಂದೆ ಆಯ್ಕೆಯಾಗಿದ್ದ ಪ್ರತಾಪ್ ಸಿಂಹರವರು ಅನೇಕ ಪ್ರಗತಿಪರ ಯೋಜನೆಗಳು ಅಭಿವೃದ್ಧಿ ಕಾರ್ಯಗಳನ್ನು ನಗರಕ್ಕೆ ಮಾಡಿದ್ದಾರೆ. ಅವರ ಸಾಧನೆ ಹಾಗೂ ಮೈಸೂರು ಕ್ಷೇತ್ರಕ್ಕೆ ಸಲ್ಲಿಸಿದ ಸೇವೆ ಪ್ರಶಂಸನೀಯ. ಅಭಿನಂದನಾರ್ಹ. ನೀವೂ ಕೂಡ ನಿಮ್ಮ ಪೂರ್ವಜರು ಹಾಕಿಕೊಟ್ಟ ಹಾದಿಯಲ್ಲಿ ಸಾಗಿ ಮೈಸೂರು ನಗರ ಮಾದರಿ ನಗರವನ್ನಾಗಿ ಮಾಡಲು ಶ್ರಮಿಸುತ್ತೀರೆಂದು ನಂಬಿದ್ದೇವೆ. ಮೈಸೂರಿನಲ್ಲಿರುವ ಅನೇಕ ಸಮಸ್ಯೆಗಳಿಗೆ ಪರಿಹಾರ ದೊರಕುತ್ತವೆ ಎಂಬ ವಿಶ್ವಾಸವಿದೆ. ಮೈಸೂರು ಹಾಗೂ ಕೊಡಗು ಕ್ಷೇತ್ರಗಳು ಮತ್ತಷ್ಟು ಅಭಿವೃದ್ಧಿಗೊಳ್ಳಲಿ...

-ಪುಷ್ಪಲತಾ ಫಣಿರಾಜ್, ಅಗ್ರಹಾರ ಮೈಸೂರು.

ಸೋಲು-ಗೆಲುವನ್ನು ಸಮಾನವಾಗಿ ಸ್ವೀಕರಿಸೋಣ

ಮಾನ್ಯರೆ,

ಬಹು ನಿರೀಕ್ಷಿತ ಲೋಕಸಭಾ ಚುನಾವಣಾ ಫಲಿತಾಂಶ ಹೊರಬಿದ್ದಿದೆ. ಚುನಾವಣೆಯಲ್ಲಿ ಗೆದ್ದಂತಹ ಅಭ್ಯರ್ಥಿಗಳ ಸಂಭ್ರಮ ಮುಗಿಲು ಮುಟ್ಟಿದ್ದರೆ, ಸೋತಂತ ಅಭ್ಯರ್ಥಿಗಳು ಹತಾಶರಾಗುವುದು ಬೇಡ. ಏಕೆಂದರೆ ರಾಜಕಾರಣದಲ್ಲಿ ಸೋಲು ಗೆಲುವು ಸಾಮಾನ್ಯ. ಸೋಲು-ಗೆಲುವು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ, ಎರಡನ್ನೂ ಸಮಾನಾಗಿ ಸ್ವೀಕರಿಸಬೇಕು. ಅದು ಒಂಥರಾ ಹಾವು ಏಣಿ ಆಟ ಇದ್ದಂಗೆ! ಚುನಾವಣೆಯಲ್ಲಿ ಸೋಲು ಏಕೆ ಆಯ್ತು, ಹೇಗೆ ಆಯ್ತು? ಸೋಲಿಗೆ ಕಾರಣವಾದ ಅಂಶಗಳ ಪರಾಮರ್ಶೆ ಮಾಡಿ, ತಪ್ಪುಗಳನ್ನು ತಿದ್ದಿಕೊಂಡು ಮತ್ತೆ ಪುಟಿದೇಳುವ ಪ್ರಯತ್ನ ಮಾಡಬೇಕೆ ಹೊರತು ಹತಾಶರಾಗಿ ನಿರಾಸೆ ಪಡುವುದು ತರವಲ್ಲ.

ಇಷ್ಟಕ್ಕೂ ಸೋತಂತಹ ಅಭ್ಯರ್ಥಿಗಳಿಗೆ ಈ ಸೋಲು ಶಾಶ್ವತ ಅಲ್ಲ, ತಾತ್ಕಾಲಿಕ. ಧೃತಿಗೆಡದೆ ಪಕ್ಷವನ್ನು ಮರಳಿ ಕಟ್ಟೋಣ. ನಿಮ್ಮ ಜತೆ ನಾವಿದ್ದೇವೆ. ನಾವೆಲ್ಲರೂ ಹಗಲಿರುಳು ನಿಮ್ಮೊಟ್ಟಿಗೆ ಶ್ರಮಿಸುತ್ತೇವೆ ಎಂಬ ಧೈರ್ಯ ತುಂಬುವ ಕೆಲಸವನ್ನು ಆಯಾ ಪಕ್ಷಗಳು ಹಾಗೂ ಅದರ ಮುಖಂಡರುಗಳು ಮಾಡಬೇಕಿದೆ. ರಾಜಕಾರಣದಲ್ಲಿ ಸೋಲು ಗೆಲುವು ಸಹಜ ಪ್ರಕ್ರಿಯೆ. ಎರಡನ್ನು ಸಮಾನವಾಗಿ ಸ್ವೀಕರಿಸಿ ಹೋಗುವುದು ಉತ್ತಮ ರಾಜಕಾರಣಿಯ ಕೆಲಸ. ಇನ್ನು ಮುಂದೆ ಇನ್ನಷ್ಟು ಶ್ರಮವಹಿಸಿ ಕಾರ್ಯ ಮಾಡಿ ಜನರ ವಿಶ್ವಾಸ ಗಳಿಸುವ ಜವಾಬ್ದಾರಿ ಪ್ರತಿಯೊಬ್ಬ ರಾಜಕಾರಣಿಗಳ ಮೇಲಿದೆ ಎಂಬ ಅರಿವು ಎಲ್ಲಾ ರಾಜಕಾರಣಿಗಳ ಮನದಲ್ಲಿ ಇದ್ದರೆ ಚೆನ್ನ.

ಇನ್ನು ಚುನಾವಣೆ ಯಾವ ಸಂದರ್ಭದಲ್ಲೇ ಬಂದರೂ ಎದುರಿಸುವ ಸಾಮರ್ಥ್ಯ ಹೊಂದಲು ಸಂಘಟನೆಗೆ ಪಕ್ಷದ ಕಾರ್ಯಕರ್ತರು ಸೈನಿಕರಂತೆ ಸಜ್ಜಾಗುತ್ತಾರೆ. ಹೀಗಿರುವಾಗ ಸೋತಂತಹ ಚುನಾವಣೆ ಬಗ್ಗೆ ಕಾರ್ಯಕರ್ತರು ನಿರಾಸೆ ಹಾಗೂ ಭ್ರಮನಿರಸನರಾಗದೇ, ಯಾವುದೇ ಅಹಿತಕರ ಘಟನೆಗೆ ಅವಕಾಶ ಮಾಡಿಕೊಡದೆ ತಮ್ಮ ಪಕ್ಷ ಮತ್ತೇ ಬಲಗೊಳ್ಳುವುದರ ಬಗ್ಗೆ ಕಾರ್ಯ ಪ್ರವೃತ್ತರಾಗುವುದೊಳಿತು. ಏಕೆಂದರೆ ಜನರ ಸಮಸ್ಯೆಗಳಿಗೆ ಸ್ಪಂದಿಸಿದಲ್ಲಿ, ಅಧಿಕಾರ ಎಂಬುದು ಹೂವಿನ ಹಾರವಾಗುತ್ತದೆ. ಅದರಿಂದ ವಿಮುಖರಾದರೆ ಅದು ಮುಳ್ಳಿನ ಹಾಸಿಗೆಯಾಗಿ ಪರಿವರ್ತನೆಯಾಗುತ್ತದೆ ಎಂಬ ಸತ್ಯ ಪ್ರತಿಯೊಬ್ಬ ರಾಜಕಾರಣಿ ಹಾಗೂ ಕಾರ್ಯಕರ್ತರಿಗೆ ಅರಿವಾಗುವುದು ಅವಶ್ಯಕವಾಗಿದೆ.

-ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಎಸ್‌ಐಟಿಯಿಂದ ನ್ಯಾಯ ಸಿಗುವುದು ಅನುಮಾನ

ಮಾನ್ಯರೆ,

ಪ್ರಜ್ವಲ್ ಪೆನ್‌ಡ್ರೈವ್ ಪ್ರಕರಣಕ್ಕೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರದಿಂದ ಎಸ್‌ಐಟಿ ರಚನೆಯಾಗಿದ್ದು, ಕಾರ್ಯ ನಿರ್ವಹಿಸುತ್ತಿರುವುದು ಸರಿಯಷ್ಟೆ, ಆದರೆ ಇದರಿಂದ ನೊಂದವರಿಗೆ ನ್ಯಾಯ ಸಿಗುವ ಸಂಭವಗಳು ಬಹಳ ಕಡಿಮೆ. ಸರ್ಕಾರ ಈ ವಿಚಾರದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲವೆಂದು ಹೊರ ನೋಟಕ್ಕೆ ಏನೇ ಹೇಳಿದರೂ, ಒಳಗಡೆ ಸಿಎಂ ಮತ್ತು ಡಿಸಿಎಂ ಸಲಹೆ ಸೂಚನೆಗಳಂತೆ ಕಾರ್ಯ ನಿರ್ವಹಿಸುತ್ತಿರುವುದರಿಂದ ಇದರಿಂದ ಬರುವ ತೀರ್ಪು ಸರ್ಕಾರದ ಪರವಾಗಿಯೇ ಇರುತ್ತದೆ.

ಎಸ್‌ಐಟಿಯ ಮುಖ್ಯಸ್ಥರು, ಸರ್ಕಾರದ ಸಿಎಂ, ಡಿಸಿಎಂಗಳ ಸಲಹೆ ಸೂಚನೆಗಳ ಪ್ರಕಾರವೇ ನಡೆಯುತ್ತಿರುವುದರಿಂದ ನಿರೀಕ್ಷೆಯಂತೆ ಎಸ್‌ಐಟಿಯು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವಂತಿಲ್ಲ. ನಿಜವಾಗಿಯೂ ತಪ್ಪಿತಸ್ಥರಿಗೆ ಶಿಕ್ಷೆ ಆಗುತ್ತದೆಯೇ? ನೊಂದವರಿಗೆ ನ್ಯಾಯ ಸಿಗುತ್ತದೆಯೇ? ಮೇಲ್ನೋಟಕ್ಕೆ ಸರ್ಕಾರ ಏನೇ ಹೇಳಿಕೆ ಕೊಟ್ಟರೂ, ಆಂತರ್ಯದ ಸ್ಥಿತಿಗತಿಗಳೇ ಬೇರೆ ಇರುತ್ತದೆ. ಒಟ್ಟಿನಲ್ಲಿ ಪೆನ್‌ಡ್ರೈವ್ ಪ್ರಕರಣ ಆದಷ್ಟು ಬೇಗನೆ ಮುಗಿದು, ನೊಂದವರಿಗೆ ಪರಿಹಾರ ಸಿಕ್ಕಿ ತಪ್ಪಿತಸ್ಥರಿಗೆ ಶಿಕ್ಷೆಯಾದರೆ ಸರ್ಕಾರದ ಮೇಲೆ ಜನತೆಯ ವಿಶ್ವಾಸ ಇಮ್ಮಡಿಯಾಗುತ್ತದೆ.

-ಎ.ಎಸ್. ಗೋಪಾಲಕೃಷ್ಣ, ರಾಮಕೃಷ್ಣನಗರ, ಮೈಸೂರು.

ಮಂಥನ

ನಿವೇದಿತ ಹೆಚ್.
ಇಂಗ್ಲಿಷ್ ಉಪನ್ಯಾಸಕಿ
ಯುವರಾಜ ಕಾಲೇಜು
ಮೈಸೂರು.

ತೆರೆಯ ಮೇಲೆ ಮೆರೆಯುವವರ ಹಿಂದಿರುವ ಕುಸುರಿಗಳ ನೆನೆಯೇ...

ಉಷಾ ನವರತ್ನ ರಾವ್ · ಸಿ.ಎನ್.ಮುಕ್ತಾ · ಚಿತ್ರಲೇಖಾ · ವಿಶಾಲಾಕ್ಷಿ · ಆರ್ಯಾಂಬ · ಸಾಯಿಸುತೆ · ರಾಧಾದೇವಿ · ವೈದೇಹಿ · ಎಂ.ಕೆ.ಇಂದಿರಾ · ಅಶ್ವಿನಿ · ವಾಣಿ

ತ್ರಿವೇಣಿ · ದೇವಕಿ ಮೂರ್ತಿ · ಪಂಡರಿಬಾಯಿ · ಎಂ.ವಿ.ರಾಜಮ್ಮ · ಪಾರ್ವತಮ್ಮ · ವಿಜಯಲಕ್ಷ್ಮಿ ಸಿಂಗ್ · ಸುಮನ ಕಿತ್ತೂರು · ಕವಿತಾ ಲಂಕೇಶ್ · ರೂಪ ಅಯ್ಯರ್ · ಪ್ರೇಮಾ ಕಾರಂತ್ · ಪ್ರಿಯಾ ಹಾಸನ್

ಸಿಂಧು ಶ್ರೀನಿವಾಸ್ · ಆರತಿ · ಜಯಶ್ರೀ ದೇವಿ · ಪ್ರಿಯಾ ಬೆಳ್ಳಿಯಪ್ಪ

ಮಹಿಳೆಯರು ಕಾಲಿಡದ ಕ್ಷೇತ್ರ ಹುಡುಕುವುದು ಇಂದು ಅಸಾಧ್ಯವೇ! ನಿರಕ್ಷರಕುಕ್ಷಿಯಾಗಿದ್ದಾಗ ದೈಹಿಕ ದಂಡನೆಯ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾಕೆ, ಶಿಕ್ಷಣದ ಹೆಬ್ಬಾಗಿಲು ತೆರೆದ ಮೇಲೆ ವೈಟ್ ಕಾಲರ್ ಜಾಬ್ ಎನಿಸಿಕೊಳ್ಳುವ ಎಲ್ಲ ಕೆಲಸಗಳನ್ನೂ ಮಾಡಿ ಸೈ ಎನಿಸಿಕೊಂಡಿದ್ದಾಯ್ತು. ಈಗಂತೂ ಆಟೋ, ಲಾರಿ, ಬಸ್ಸು ಮಾತ್ರವಲ್ಲದೇ, ವಿಮಾನಗಳು, ಮೆಟ್ರೋ ಮತ್ತು ವಂದೇಭಾರತ್ ರೈಲುಗಳನ್ನೂ ಚಾಲಿ ಸುವ ಮಹತ್ತರ ಜವಾಬ್ದಾರಿಗಳನ್ನೂ ಸಲೀಸಾಗಿ ನಿರ್ವಹಿಸುತ್ತಿದ್ದಾಳೆ. ಫುಡ್ ಡೆಲಿವರಿಯನ್ನೂ ಮಾಡುವ ಸ್ತ್ರೀಯರು ಪಂಕ್ಚರ್ ಹಾಕುವ ಅಂಗಡಿ ತೆರೆದು ಅದನ್ನೂ ನಡೆಸುತ್ತಿದ್ದಾರೆ. ಆಕಾಶದ ಕದ ತಟ್ಟಿ ಬಂದಿರುವ ಮಹಿಳೆಯರು, ನಮ್ಮ ಜೀವನದ ಅವಿಭಾಜ್ಯ ಅಂಗ ವಾದ ಈ ಮನರಂಜನಾ ಕ್ಷೇತ್ರದಲ್ಲಿಯೂ ಮುಂಚೂಣಿಯಲ್ಲಿರುವುದನ್ನು ನೋಡಿಯೇ ಇರುತ್ತೀರಿ.

ಟಿವಿ ಇಂದು ಬಹುತೇಕ ಮಹಿಳೆಯರೇ ಆಳುತ್ತಿರುವ ಕ್ಷೇತ್ರವಾಗಿ ಬಿಟ್ಟಿದೆ. ಚಂದದ ಹೀರೋಯಿನ್ ಇಲ್ಲದ ಸಿನಿಮಾಗಳನ್ನು ಕಲ್ಪಿಸಿಕೊಳ್ಳು ವುದು ಸಾಧ್ಯವೇ? ಅವರು ತೆರೆಯ ಮೇಲೆ ಹೇಗೆ ಕಾಣಬೇಕು, ಏನು ಮಾತನಾಡಬೇಕು ಎಂದು ನಿರ್ಧರಿ ಸುವುದು ಈಗಲೂ ಪುರುಷರು ಮಾತ್ರವೇ! ಟಿವಿ ಆಗಲಿ ಸಿನಿಮಾ ಆಗಲಿ ನಿರ್ಮಾಪಕ ಮತ್ತು ನಿರ್ದೇಶಕ ರಿಂದ ಹಿಡಿದು ಕ್ಲಾಪ್ ಬಾಯ್‌ವರೆಗೆ ಬಹುತೇಕ ಗಂಡಸರೇ ಇರುತ್ತಾರೆ. ಮಹಿಳೆಯರು ಇಲ್ಲಿ ಸ್ಥಾನ ಗಳಿಸಿದ್ದ ರಾದರೂ, ಇನ್ನೂ ಪೂರ್ವಾಗ್ರಹ ಇರುವುದನ್ನು ಅಲ್ಲಗಳೆಯಲಾಗದು.

ಇಂತಹ 'ಒಂದು ಪುರುಷ ಪ್ರಧಾನ ರಂಗದಲ್ಲಿ ಮೈಲಿಗಲ್ಲಾಗಿ ತಮ್ಮ ಹೆಜ್ಜೆಯನ್ನು ಗಟ್ಟಿಯಾಗಿ ಊರಿದ ಮಹಿಳೆಯರೂ ಇದ್ದಾರೆ. ತೆರೆ ಮೇಲೆ ಬಂದವರಷ್ಟೇ ಅಲ್ಲ; ಇವರಿಗೆ ಸ್ಫೂರ್ತಿ-ನೆಲೆ ಕಲ್ಪಿಸಿದ ಲೇಖಕಿಯರ ನೆನೆಯುವ ಕಾಲ ಬಂದಿಲ್ಲ ಮೇರು ಕಾದಂಬರಿ ರಚಿಸಿದವರು ಅಂದು-ಇಂದು, ತೆರೆ ಮರೆಯೇ ಇದ್ದಾರೆ. ಇದು ಅತ್ಯಂತ ಬೇಸರದ ವಿಷಯ.

> ಒಂದು ಪುಟ್ಟ ಲೇಖನದಲ್ಲಿ 90 ವರ್ಷಗಳ ಇತಿಹಾಸವಿರುವ ಕನ್ನಡ ಚಲನಚಿತ್ರರಂಗದ ನಿರ್ದೇಶಕಿ ಮತ್ತು ನಿರ್ಮಾಪಕಿಯರ ಹಾಗೂ ಕತೆಗಾರ್ತಿಯರ ಬಹುತೇಕ ಎಲ್ಲ ಹೆಸರುಗಳನ್ನು ಪಟ್ಟಿಮಾಡಬಹುದು ಎಂದರೆ, ಸ್ತ್ರೀಯರಿಗೆ ಇನ್ನೂ ಸಮಾನವಾದ ಮತ್ತು ಸರಿಯಾದ ಅವಕಾಶಗಳು ದೊರೆತಿಲ್ಲ ಎಂದೇ ಅರ್ಥ. ಇಲ್ಲಿ ಉಲ್ಲೇಖಿಸಿರುವ ಸಿನಿಮಾಗಳಲ್ಲಿ ಬಹಳಷ್ಟು ಸಿನಿಮಾಗಳು ಯಶಸ್ವಿಯಾಗಿವೆ. ಹೊಸತನವಿರುವ ಚಿತ್ರಕತೆಗಳನ್ನಿಟ್ಟುಕೊಂಡು ಚಾತಕಪಕ್ಷಿ ಯಂತೆ ನಿರ್ಮಾಪಕನಿಗಾಗಿ ಕಾಯುತ್ತಿರುವ ಅಸಂಖ್ಯ ಭಾವಿ ನಿರ್ದೇಶಕಿಯರಿದ್ದಾರೆ. ಅವರೆಲ್ಲಾ ಅವಕಾಶಗಳಿಗಾಗಿ ಕಾದೂ ಕಾದು ಮಾಜಿ ಭಾವೀ ನಿರ್ದೇಶಕಿಯರಾಗಿಬಿಡುವ ಸಂಭವಗಳೇ ಹೆಚ್ಚು. ಮಹಿಳೆಯರಿಗೆ ಇರುವ ತೊಡಕುಗಳು ಬಹಳಷ್ಟು. ಅದರಲ್ಲೂ ಈ ರಂಗದಲ್ಲಿ ಮಗದಷ್ಟು.. ಅವುಗಳೆಲ್ಲವನ್ನೂ ದಾಟಿ ಪುಟ ಮೀರುವಷ್ಟು ಹೆಸರು ನಮಗೆ ದೊರೆಯಲಿ ಎಂಬುದೇ ಲೇಖನದ ಆಶಯ.

ಸದಾ ನೆನಪಲಿ ಉಳಿಯುತ್ತಾರೆ...

1926ರಲ್ಲಿಯೇ 'ಬುಲ್-ಬುಲೆ-ಪರಸ್ತಾನ್' ಚಿತ್ರವನ್ನು ನಿರ್ದೇಶಿಸಿ ನಮ್ಮ ದೇಶದ ಪ್ರಪ್ರಥಮ ನಿರ್ದೇಶಕಿಯಾದ ಮಹಿಳೆ ಫಾತೀಮಾ ಬೇಗಮ್.

ಫಣಿಯಮ್ಮ, ಎಂ.ಕೆ.ಇಂದಿರಾ ಅವರ ಮಹತ್ವದ ಕಾದಂಬರಿಯನ್ನು 1983ರಲ್ಲಿ ಅದೇ ಹೆಸರಿನಲ್ಲಿ ಚಿತ್ರವಾಗಿಸಿದ ಪ್ರೇಮಾ ಕಾರಂತ್ ಕನ್ನಡದ ಪ್ರಪ್ರಥಮ ನಿರ್ದೇಶಕಿ. ರಾಷ್ಟ್ರ ಪ್ರಶಸ್ತಿ ಪಡೆದ ಈ ಚಿತ್ರ ಒಂದು ಸಾರ್ವಕಾಲಿಕ ಮಾಸ್ಟರ್ ಪೀಸ್.

ಕನ್ನಡದಲ್ಲಿ ಪ್ರಥಮ ನಿರ್ಮಾಪಕಿ ಎನಿಸಿದವರು ಎಂ.ವಿ.ರಾಜಮ್ಮ. 1943ರಲ್ಲಿ 'ರಾಧಾರಮಣ' ಸಿನಿಮಾ ನಿರ್ಮಿಸಿದ ನಂತರ ಮಕ್ಕಳ ರಾಜ್ಯ ಚಿತ್ರವನ್ನು ನಿರ್ಮಿಸಿದರು. ಕನ್ನಡ ಚಲನಚಿತ್ರ ರಂಗದಲ್ಲಿ ಅಮ್ಮ ಎಂದೇ ಕರೆಯಲ್ಪಡುವ ಪಂಡರೀ ಬಾಯಿ 1957ರಲ್ಲಿ ರಾಯರ ಸೊಸೆ ಎಂಬ ಸಿನಿಮಾ ನಿರ್ಮಿಸಿದರು. ಎಂ.ವಿರಾಜಮ್ಮ ಮತ್ತು ಪಂಡರೀ ಬಾಯಿ ಇಬ್ಬರೂ ಕಾರಣಾಂತರದಿಂದ ಸಿನಿಮಾ ನಿರ್ಮಾಣದಿಂದ ದೂರಾದರೂ ನಟನೆಯಲ್ಲಿ ಸಕ್ರಿಯರಾಗಿದ್ದರು.

ಆದರೆ ಇವರಿಬ್ಬರನ್ನು ಮಾದರಿಯಾಗಿಟ್ಟುಕೊಂಡು ನಿರ್ಮಾಪಕಿ ಯಾಗಿ ರಂಗ ಪ್ರವೇಶ ಮಾಡಿ ಅಪ್ರತಿಮ ಸಾಧನೆ ಮಾಡಿದವರು ಪಾರ್ವತಮ್ಮ ರಾಜ್‌ಕುಮಾರ್ ಅವರು. 'ತ್ರಿಮೂರ್ತಿ' ಚಿತ್ರ ನಿರ್ಮಾಣದ ಮೂಲಕ ನಿರ್ಮಾಪಕಿ ಯಾದರು. ಡಾ. ರಾಜ್‌ಕುಮಾರ್ ನಟಿಸಿದ ಈ ಚಿತ್ರ ಜಯಭೇರಿ ಬಾರಿಸಿತು ಮತ್ತು ಅವರಿಗೆ ಧೈರ್ಯ ನೀಡಿತು. ವಜ್ರೇಶ್ವರಿ ಕಂಬೈನ್ಸ್ ಮತ್ತು ಪೂರ್ಣಿಮಾ ಎಂಟರ್ ಪ್ರೈಸಸ್ ವತಿಯಿಂದ 80ಕ್ಕೂ ಹೆಚ್ಚು ಸಿನಿಮಾಗಳನ್ನು ಯಶಸ್ವಿಯಾಗಿ ನಿರ್ಮಿಸಿದ ಪಾರ್ವತಮ್ಮನವರು, ಹಂಚಿಕೆದಾರರಾಗಿಯೂ ಯಶಸ್ಸು ಗಳಿಸಿದರು. ಈಗ ಅವರ ಸೊಸೆ ಅಶ್ವಿನಿ ಪುನೀತ್ ಕುಮಾರ್ ಸಂಸ್ಥೆಯನ್ನು ಮುನ್ನಡೆಸಿ ನಿರ್ಮಾಪಕಿಯಾಗುವ ಉತ್ಸಾಹದಲ್ಲಿದ್ದಾರೆ.

ಕೋಣ ಈದೈತೆ ಎಂಬ ವಿವಾದಾತ್ಮಕ ಚಿತ್ರದ ಮೂಲಕ ನಿರ್ದೇಶಕಿ ಮತ್ತು ನಿರ್ಮಾಪಕಿಯಾಗಿ ಕನ್ನಡ ಚಿತ್ರರಂಗಕ್ಕೆ ಕಾಲಿಟ್ಟ ಬಿ.ಜಯಶ್ರೀ ದೇವಿ ಕನ್ನಡ ಚಿತ್ರರಂಗ ಸದಾ ನೆನಪಿಟ್ಟುಕೊಳ್ಳು ವಂತಹ ಚಿತ್ರಗಳನ್ನು ನೀಡಿದ್ದಾರೆ. ನಮ್ಮೂರ ಮಂದಾರ ಹೂವೆ, ಪ್ರೇಮ ರಾಗ ಹಾಡು ಗೆಳತಿ, ಅಮೃತ ವರ್ಷಿಣಿ, ಸ್ನೇಹಲೋಕ, ವಂದೇ ಮಾತರಂ, ಶ್ರೀ ಮಂಜುನಾಥ, ಭವಾನಿ ಮತ್ತು ಮುಕುಂದ ಮುರಾರಿ ಚಿತ್ರಗಳು ಪ್ರೇಕ್ಷಕರ ಮನ ಗೆದ್ದಿವೆ. ನಟಿಯಾಗಿ ಸುಪ್ರಸಿದ್ಧರಾದ ಜಯಮಾಲ, ತಾಯಿ ಸಾಹೇಬ ಚಿತ್ರ ನಿರ್ಮಿಸಿ ರಾಷ್ಟ್ರ ಪ್ರಶಸ್ತಿಯನ್ನು ತಮ್ಮ ದಾಗಿಸಿಕೊಂಡರು.

ಕನ್ನಡ ಚಲನಚಿತ್ರ ರಂಗಕ್ಕೆ ಮಹತ್ವದ ಕೊಡುಗೆಗಳನ್ನು ನೀಡಿದ ಮಹಾತ್ಮ ಪಿಕ್ಚರ್ಸ್‌ನ ಕುಟುಂಬದವರಾದ ವಿಜಯಲಕ್ಷ್ಮಿ ಸಿಂಗ್, ಸಹನಿರ್ದೇಶಕಿ, ವಸ್ತ್ರವಿನ್ಯಾಸಕಿ ಮತ್ತು ನಟಿಯಾಗಿ ಚಿತ್ರ ರಂಗದಲ್ಲಿ ಸಕ್ರಿಯರಾಗಿದ್ದವರು. ನಂತರದ ದಿನಗಳಲ್ಲಿ ನಿರ್ಮಾಪಕ ಮತ್ತು ನಿರ್ದೇಶಕಿಯಾಗಿ ಈ ಬಂಧನ, ಮಳೆ ಬರಲಿ ಮಂಜು ಇರಲಿ, ವಾರೆವ್ವಾ ಸ್ವೀಟಿ ನನ್ನ ಜೋಡಿ ಮತ್ತು ಯಾನ ಎಂಬ ಜನಪ್ರಿಯ ಚಿತ್ರಗಳನ್ನು ತೆರೆಗೆ ತಂದಿದ್ದಾರೆ.

ಕವಿತಾ ಲಂಕೇಶ್ ಸದಭಿರುಚಿಯ ಚಿತ್ರಗಳನ್ನು ನೀಡಿದ ಪ್ರತಿಭಾವಂತೆ. ಲಂಕೇಶರ ಕತೆಯನ್ನಾಧರಿಸಿದ ದೇವೀರಿ ಚಿತ್ರದ ಮೂಲಕ ನಿರ್ದೇಶಕಿಯ ಕ್ಯಾಪ್ ತೊಟ್ಟ ಈಕೆ, ಬಿಂಬ, ಪ್ರೀತಿ ಪ್ರೇಮ ಪ್ರಣಯ, ಕ್ರೇಜಿ಼ ಲೋಕ, ಅವ್ವ ತನನಂ ತನನಂ ಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಹಲವು ಸಾಕ್ಷ್ಯಚಿತ್ರಗಳ ನಿರ್ಮಾಣ ವನ್ನೂ ಮಾಡಿದ್ದಾರೆ, ಮಾಡುತ್ತಿದ್ದಾರೆ.

ಪತ್ರಕರ್ತೆ, ಕವಯತ್ರಿ ಸುಮನಾ ಕಿತ್ತೂರು ಕನ್ನಡದ ಮತ್ತೊಂದು ಬಹುಮುಖ ಪ್ರತಿಭೆ. ಸ್ಲಮ್ ಬಾಲ ಚಿತ್ರದಿಂದ ನಿರ್ದೇಶಕಿಯ ಪಟ್ಟ ಹೊತ್ತ ಸುಮನಾ ಕಳ್ಳರ ಸಂತೆ, ಎದೆಗಾರಿಕೆ ಮತ್ತು ಪೂಚಂತೇ ಅವರ ಕಿರಗೂರಿನ ಗಯ್ಯಾಳಿ ಗಳು ಕೃತಿಯನ್ನು ಅತ್ಯಂತ ಸಮರ್ಥ ವಾಗಿ ಸಿನಿಮಾಗಳನ್ನಾಗಿಸಿ ಪ್ರೇಕ್ಷಕರನ್ನು ರಂಜಿಸಿದ್ದಾರೆ.

ಮುಖಪುಟ ಮತ್ತು ಚಂದ್ರ ಎಂಬ ದ್ವಿಭಾಷಾ ಆದ್ಧೂರಿ ಚಿತ್ರದ ನಿರ್ದೇಶಕಿ ಮತ್ತು ನಿರ್ಮಾಪಕಿ ರೂಪಾ ಅಯ್ಯರ್ ನೃತ್ಯ ಪಟುವೂ ಹೌದು. ನಿರ್ದೇಶಕಿ ಚಂಪಾ ಶೆಟ್ಟಿ ಮತ್ತೊಬ್ಬ ಭರವಸೆಯ ಲೇಖಕಿ. ವೈದೇಹಿ ಅವರ ಕಥೆಗಳನ್ನಾಧರಿಸಿದ ಅಮ್ಮಚ್ಚಿ ಎಂಬ ನೆನಪು ಮತ್ತು ಕೋಳಿ ಎಸ್ರು ಎಂಬ ಸದಭಿರುಚಿಯ ಚಿತ್ರಗಳನ್ನು ನೀಡಿ ಪ್ರಶಸ್ತಿಗಳನ್ನು ಗಳಿಸಿದ್ದಾರೆ.

ಕನ್ನಡ ಚಿತ್ರರಂಗದ ಮತ್ತೊಬ್ಬ ಸಾಹಸಿ ನಿರ್ಮಾಪಕಿ ಮತ್ತು ನಿರ್ದೇಶಕಿ ಪ್ರಿಯಾ ಹಾಸನ್. ಜಂಭದ ಹುಡುಗಿ, ಬಿಂದಾಸ್ ಹುಡುಗಿ ಮತ್ತು ಸ್ಮಗ್ಲರ್ ಚಿತ್ರಗಳನ್ನು ನಿರ್ದೇಶಿಸಿ ನಿರ್ಮಿಸಿದ ಈಕೆ ಈಗ ರುದ್ರಿ ಎಲ್‌ಎಲ್‌ಬಿ ಚಿತ್ರದ ಮೂಲಕ ಮತ್ತೆ ನಿರ್ದೇಶನಕ್ಕೆ ಮರಳಿದ್ದಾರೆ.

ರಿಂಗ್ ರೋಡ್ ಶುಭಾ ಚಿತ್ರವು, ಮಹಿಳಾ ನಿರ್ದೇಶಕಿ ಮತ್ತು ನಿರ್ಮಾ ಪಕಿಯನ್ನು ಮಾತ್ರ ಹೊಂದಿರಲಿಲ್ಲ, ಪ್ರಿಯಾ ಬೆಳ್ಳಿಯಪ್ಪ ನಿರ್ದೇಶಿಸಿದ ಈ ಚಿತ್ರದ ಎಲ್ಲ ವಿಭಾಗಗಳನ್ನು ನಿರ್ವಹಿಸಿದ್ದು ಮಹಿಳೆಯರೇ ಎಂಬುದು ಮಹಿಳೆಯರಿಗೆ ಹೆಗ್ಗಳಿಕೆಯಾಗಿದೆ

ಇತ್ತೀಚೆಗೆ ಬಂದ ಆಚಾರ್ ಅಂಡ್ ಕೋ ಚಿತ್ರದ ನಿರ್ದೇಶನ ಸಿಂಧು ಶ್ರೀನಿವಾಸ್ ಅವರದ್ದಾದರೆ, ಸಂಗೀತ ಬಿಂದು ಮಾಲಿನಿ ಅವರದು. ಅಭಿನಯ ಶಾರದೆ ಜಯಂತಿ ವಿಜಯ್ ಎಂಬ ಒಂದು ಚಿತ್ರವನ್ನು ನಿರ್ದೇಶಿಸಿದ್ದಾರೆ. ಹಾಗೆಯೇ ಚಿತ್ರನಟಿ ಆರತಿ ಮಿಠಾಯಿ ಮನೆ ಎಂಬ ಚಿತ್ರವನ್ನು ನಿರ್ದೇಶಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಲೀಲಾವತಿ ಅವರೂ ಚಿತ್ರಗಳನ್ನು ನಿರ್ಮಿಸಿದ್ದಾರೆ.

ಇಶಾನಿ ಐಯ್ಯರ್ ಕೂಡ ಒಂದು ಕಿರುಚಿತ್ರ ನಿರ್ಮಿಸಿ ನಿರ್ದೇಶಿಸಿದ್ದರು. ಅಲ್ಲಲ್ಲಿ ಆಗಾಗ್ಗೆ ಹಲವರು ಧೈರ್ಯ ಮಾಡಿ ನಿರ್ದೇಶನ, ನಿರ್ಮಾಣಗಳನ್ನು ಕೈಗೆತ್ತಿ ಕೊಂಡಿದ್ದಾರೆ. ಈಗ ಹಲವು ನಟಿಯರು ನಿರ್ಮಾಣ ಮತ್ತು ನಿರ್ದೇಶನದ ಬಗ್ಗೆ ಒಲವು ತೋರುತ್ತಿದ್ದಾರೆ.

ಕಾದಂಬರಿಯಾಧಾರಿತ ಚಲನಚಿತ್ರಗಳು

ಪ್ರಸಿದ್ಧ ನಾಟಕಗಳನ್ನೇ ಪರದೆಯ ಮೇಲೆ ತರುವುದರೊಂದಿಗೆ ಪ್ರಾರಂಭವಾದ ಚಂದನವನದ ಪ್ರಯಾಣ ನಂತರ ಪುರಾಣದ ಕಥೆಗಳೆಡೆಗೆ ತಿರುಗಿತು, ಸಾಮಾಜಿಕ ಕಥನಗಳನ್ನು ಅಳವಡಿಸಿಕೊಂಡಿತು. ನಂತರದಲ್ಲಿ ಕನ್ನಡದ ಸಮೃದ್ಧ ಸಾಹಿತ್ಯದತ್ತ ಹೊರಳಿತು. ಕೃಷ್ಣಮೂರ್ತಿ ಪುರಾಣಿಕರ ಧರ್ಮ ದೇವತೆ ಕಾದಂಬರಿಯಾಧಾರಿತ ಕರುಣೆಯೇ ಕುಟುಂಬದ ಕಣ್ಣು ಚಿತ್ರದ ಯಶಸ್ಸಿನ ನಂತರ ಈ ಪರಂಪರೆ ಮುಂದುವರೆಯಿತು. ಕಾದಂಬರಿಕಾರ ರಲ್ಲದೆ, ಕನ್ನಡದ ಅನೇಕ ಕಾದಂಬರಿ ಕಾರ್ತಿಯರ ಕಾದಂಬರಿಗಳೂ ತೆರೆಯ ಮೇಲೆ ಯಶಸ್ವಿಯಾಗಿ ರಾರಾಜಿಸಿದವು. ಕನ್ನಡ ಚಿತ್ರರಂಗ ತನ್ನ 90ನೆಯ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಬೆಳ್ಳಿಪರದೆಗೆ ಕತೆಗಳನ್ನು ನೀಡಿದ ಕಾದಂಬರಿಕಾರ್ತಿಯರನ್ನು ನೆನಪಿಸಿಕೊಳ್ಳುವುದು ಹೆಮ್ಮೆಯ ವಿಷಯ ಅಲ್ಲವೇ?

ಮೊದಲು ನೆನಪಾಗುವುದೇ ತ್ರಿವೇಣಿ ಅವರ ಬೆಳ್ಳಿಮೋಡ, ಹಣ್ಣೆಲೆ ಚಿಗುರಿದಾಗ, ಶರಪಂಜರ, ಹೂವು-ಹಣ್ಣು ಮತ್ತು ಕಂಕಣ ಕಾದಂಬರಿಗಳು ಅವೇ ಹೆಸರಿನಲ್ಲಿ ತೆರೆಯ ಮೇಲೆ ಬಂದಿವೆ. ಪುಟ್ಟಣ್ಣ ಕಣಗಾಲರು ಹಲವು ಕನ್ನಡ ಕಾದಂಬರಿಗಳ ಆಶಯಗಳಿಗೆ ಚ್ಯುತಿ ಬರದಂತೆ ಚಲನಚಿತ್ರವಾಗಿಸಿದ್ದಾರೆ.

ಪುಟ್ಟಣ್ಣನವರೇ ದೇವಕಿ ಮೂರ್ತಿ ಅವರ ಉಪಾಸನೆ ಕಾದಂಬರಿಯನ್ನೂ ತೆರೆಯ ಮೇಲೆ ತಂದರು. ಅವರ ವಿಶಿಷ್ಟ ಪ್ರಯೋಗ ಕಥಾಸಂಗಮ ಚಿತ್ರದಲ್ಲಿ ವೀಣಾಶಾಂತೇಶ್ವರ ಅವರ ಒಂದು ಕತೆಯನ್ನು ತೆಗೆದುಕೊಂಡಿದ್ದಾರೆ. ಅನು ಪಮಾ ನಿರಂಜನ ಅವರ ಋಣ ಕಾದಂಬರಿಯನ್ನು ಋಣಮುಕ್ತೆಯಾಗಿ ತೆರೆಯ ಮೇಲೆ ತಂದಿದ್ದಾರೆ. ತ್ರಿವೇಣಿಯವರ ಬೆಕ್ಕಿನ ಕಣ್ಣು ಕಾದಂಬರಿಯನ್ನು, ಪೂಚ ಕಣ್ಣೆ ಎಂದು ಮಲಯಾಳಮ್ ಭಾಷೆಗೂ ತೆಗೆದುಕೊಂಡು ಹೋದರು!

ವಾಣಿ ಎಂದೇ ಪ್ರಸಿದ್ಧರಾಗಿರುವ ಬಿ.ಎನ್. ಸುಬ್ಬಮ್ಮ ಅವರ ಮೂರು ಕಾದಂಬರಿಗಳು ಚಲನಚಿತ್ರಗಳಾಗಿವೆ. ಶುಭಮಂಗಳ ಕಣಗಾಲರ ಗರಡಿಯಿಂದ ಬಂದರೆ, ಹೊಸಬೆಳಕು ಮತ್ತು ಎರಡು ಕನಸು ಡಾ.ರಾಜ್‌ಕುಮಾರ್‌ರ ಬಹು ಮುಖ್ಯ ಚಿತ್ರಗಳಲ್ಲಿ ಸ್ಥಾನ ಪಡೆದು ಕೊಂಡಿವೆ.

ಎಂ.ಕೆ.ಇಂದಿರಾ ಕನ್ನಡದ ಮತ್ತೊಬ್ಬ ಮಹತ್ವದ ಲೇಖಕಿ. ಅವರ ಗೆಜ್ಜೆ ಪೂಜೆ ಫಣಿಯಮ್ಮ ಮತ್ತು ಪೂರ್ವಾಪರ ಕಾದಂಬರಿಗಳು ಸಮರ್ಥವಾಗಿ ತೆರೆಗೆ ಬಂದು, ಜನಮನ್ನಣೆ ಗಳಿಸಿವೆ.

ಕಾಕೋಳು ಸರೋಜ ರಾವ್ ಅವರ ಸಾಕಷ್ಟು ಕಾದಂಬರಿಗಳು ತೆರೆಯ ಮೂಲಕ ನಮ್ಮೆಲ್ಲರನ್ನೂ ತಲುಪಿವೆ. ಬಾಳ ಹೊಂಬಾಳೆ, ಮಾಗಿಯ ಕನಸು, ಮುಸುಕು, ಇಂದ್ರಜಿತ್, ಕರುಣಾಮಯಿ ಮತ್ತು ಆನಂದಜ್ಯೋತಿ ಚಲನಚಿತ್ರಗಳ ಕಥೆ ಇವರ ಕಾದಂಬರಿಗಳನ್ನಾಧರಿಸಿದ್ದು.

ಸಿ.ಎನ್.ಮುಕ್ತಾ ಅವರ ಕಥೆ, ಕಾದಂಬರಿಗಳು ಓದುಗರನ್ನು ಮೋಡಿ ಮಾಡಿದ್ದವು. ಅವರ ಕಾದಂಬರಿಗಳೇ, ದೋಣಿ ಸಾಗಲಿ ಮತ್ತು ಮಿಸ್ ಕ್ಯಾಲಿಫೋರ್ನಿಯಾ ಚಿತ್ರಕ್ಕೆ ಕಥಾಹಂದರವನ್ನು ಒದಗಿಸಿದ್ದು.

ಉಷಾ ನವರತ್ನರಾಮ್ ಕಾದಂಬರಿ ಲೋಕದ ಮತ್ತೊಂದು ಪ್ರಿಯ ಹೆಸರು. ಹೊಂಬಿಸಿಲು, ಬಂಧನ, ಪ್ರೀತಿಸಿ ನೋಡು ಮತ್ತು ಸಮರ್ಪಣೆ ಚಿತ್ರಗಳಿಗೆ ಆಧಾರ ಇವರ ಕಾದಂಬರಿಗಳೇ. ಮೊದಲೆರಡು ಚಿತ್ರಗಳು ವಿಷ್ಣುವರ್ಧನ ಅವರ ಸಿನಿಮಾ ಜೀವನದ ಮೈಲಿ ಗಲ್ಲುಗಳಾದವು.

ಅತಿ ಸಾಮಾನ್ಯರ ಬದುಕನ್ನು ಅವರು ಎದುರಿಸುವ ಕಷ್ಟಗಳನ್ನು, ಉತ್ತಮ ಜೀವನ ರೂಪಿಸಿಕೊಳ್ಳಲು ಹೆಣಗುವ ಮಧ್ಯಮ ಮತ್ತು ಕೆಳ ಮಧ್ಯಮ ವರ್ಗದ ಪಡಿಪಾಟಲುಗಳನ್ನು ಎದುರಿಸುವ ಕಷ್ಟ ಪರಂಪರೆಗಳನ್ನು, ಸವಾಲುಗಳನ್ನು ಅತ್ಯಂತ ಸರಳವಾಗಿ, ಆಕರ್ಷಕ ಶೈಲಿಯಲ್ಲಿ ನಮ್ಮ ಮುಂದೆ ತೆರೆದಿಟ್ಟ ಕನ್ನಡದ ಇಬ್ಬರು ಅತ್ಯಂತ ಜನಪ್ರಿಯ ಕಾದಂಬರಿಕಾರ್ತಿಯರೆಂದರೆ ಸಾಯಿಸುತೆ ಮತ್ತು ಎಚ್.ಜಿ. ರಾಧಾದೇವಿ.

ಸಾಯಿಸುತೆ ಅವರ ಎಂಟು ಕಾದಂಬರಿಗಳು ಚಲನಚಿತ್ರಗಳಾಗಿವೆ. ಸಪ್ತಪದಿ, ಬಾಡದ ಹೂವು, ಕಲ್ಯಾಣರೇಖೆ, ಇಬ್ಬನಿ ಕರಗಿತು, ಗಂಧರ್ವಗಿರಿ, ಶ್ವೇತ ಗುಲಾಬಿ ಮತ್ತು ಮಿಡಿದ ಶ್ರುತಿ.

ಅನುರಾಗ ಅರಳಿತು ಮತ್ತು ಸುವರ್ಣ ಸೇತುವೆ ಚಿತ್ರಗಳು ಎಚ್.ಜಿ ರಾಧಾದೇವಿ ಅವರ ಕೃತಿಗಳ ಚಲನ ಚಿತ್ರ ರೂಪಗಳು.

ರಾಜ್‌ಕುಮಾರ್‌ರ ಸಮಯದ ಗೊಂಬೆ ಮತ್ತು ಅನಂತ್‌ನಾಗ್‌ರ ಮುದುಡಿದ ತಾವರೆ ಅರಳಿತು ಚಿತ್ರಗಳ ಕತೆ ಕಾದಂಬರಿಕಾರ್ತಿ ಚಿತ್ರಲೇಖಾ.

ಕಪ್ಪುಕೊಳ, ಕಾಮನ ಬಿಲ್ಲು, ನಿಲುಕದ ನಕ್ಷತ್ರ ಮತ್ತು ಬೆಸುಗೆ ಚಿತ್ರಗಳು ಎಂ.ವಿ.ಕನಕಮ್ಮ ಅಂದರೆ ಅಶ್ವಿನಿ (1933–2007) ಅವರ ಕಾದಂಬರಿ ಆಧಾರಿತ.

ಮರಳಿಗೂಡಿಗೆ ಚಿತ್ರದ ಕತೆ ಆರ್ಯಾಂಬ ಪಟ್ಟಾಭಿ ಅವರ ಕಾದಂಬರಿ ಆಧಾರಿತ. ಇವರದ್ದೇ ಕೃತಿಯ ಸೆಲ್ಲ್ಯುಲಾಯ್ಡ್ ರೂಪ ಕಪ್ಪು ಬಿಳುಪು ಚಿತ್ರ.

ನುಗ್ಗೇಹಳ್ಳಿ ಪಂಕಜ ಅವರ ಕಾದಂಬರಿಗಳಾಧರಿತ ಚಿತ್ರಗಳು ಅತ್ಯಂತ ಯಶಸ್ವಿಯಾಗಿದ್ದವು. ಗಗನ, ಸಿಪಾಯಿ ರಾಮು, ಮಲಯ ಮಾರುತದಂತಹ ಸದಭಿರುಚಿಯ ಚಿತ್ರಗಳು ಇವರ ಕೃತಿಗಳು! ನೀಳಾದೇವಿ ಅವರ ಕೃತಿ ಬೇಡಿ ಬಂದವಳು ಆಗಿ ತೆರೆಯ ಮೇಲೆ 1968ರಲ್ಲಿ ಬಂದಿತು.

ದೊರೆ-ಭಗವಾನ್ ನಿರ್ದೇಶಿಸಿದ ಜೀವನಚೈತ್ರ, ವಿಶಾಲಾಕ್ಷಿ ದಕ್ಷಿಣ ಮೂರ್ತಿ ಅವರ ಕಾದಂಬರಿ ಆಧಾ ರಿತ ಚಿತ್ರ ವೈದೇಹಿ ಅವರ ಕಥೆಯನ್ನು ಆಧರಿಸಿ ಗಿರೀಶ್ ಕಾಸರವಳ್ಳಿ ಅವರು ನಿರ್ದೇಶಿಸಿದ ಗುಲಾಬಿ ಟಾಕೀಸ್ ರಾಷ್ಟ್ರ ಪ್ರಶಸ್ತಿಯನ್ನು ಮುಡಿಗೇರಿಸಿ ಕೊಂಡಿತು.

ಇವು ಚಲನಚಿತ್ರಗಳ ಮಾಹಿತಿ ಮಾತ್ರ. ಇವರೆಲ್ಲರ ಮತ್ತು ಇನ್ನೂ ಅನೇಕ ಲೇಖಕಿಯರ ಸಣ್ಣಕತೆಗಳು ಮತ್ತು ಇನ್ನಿತರ ಕಾದಂಬರಿಗಳು ಕಿರುಚಿತ್ರ ಮತ್ತು ಧಾರಾವಾಹಿಗಳಿಗೆ ಬಳಸಲ್ಪಟ್ಟಿವೆ.

ಮಹಿಳೆಯರ ಕೃತಿಗಳೆಂದರೆ ಉಪ್ಪಿಟ್ಟು ಕಾಫಿಗಳ ಸಮಾರಾಧನೆ ಎಂದು ಮೂಗು ಮುರಿಯುವವರಿಗೆ ಸಾಹಿತ್ಯ ಬದುಕಿನ ಕೈಗನ್ನಡಿ ಎಂಬ ವಿಚಾರ ಬಹುಶಃ ಮರೆತುಹೋಗುತ್ತದೇನೋ! ಅಂದಿನ ದಿನಮಾನಗಳಲ್ಲಿ ತಮ್ಮ ತಮ್ಮ ಸೀಮಿತ ಪರಿಧಿಯಲ್ಲಿದ್ದುಕೊಂಡೇ ತಮಗೆ ಕಂಡಷ್ಟು ಜೀವನದ ನಿಜ ಮುಖಗಳನ್ನು ಬರೆದು ಓದುಗರಿಗೆ ಉಣ ಬಡಿಸಿದ್ದಾರೆ. ಹೊಸ ತಲೆ ಮಾರಿನ ಲೇಖಕಿಯರು 21ನೇ ಶತ ಮಾನದ ಜೀವನವನ್ನು ನಿರ್ಭಿಡೆ ಯಿಂದ ತಮ್ಮ ಬರಹಗಳಲ್ಲಿ ತೆರೆದಿಡು ತ್ತಿದ್ದಾರೆ. ಅವರ ಕೃತಿಗಳೂ ತೆರೆಯ ಮೇಲೆ ಆದಷ್ಟು ಬೇಗ ಬರಲಿ ಎಂಬುದೇ ನಮ್ಮೆಲ್ಲರ ಹಾರೈಕೆಯಾಗಲಿ.

ಕ್ಷೇತ್ರದ ಜನ ಕೇಂದ್ರ ಸಚಿವ ಸ್ಥಾನದ ನಿರೀಕ್ಷೆ ಮಾಡ್ತಾರೆ

ಪರೋಕ್ಷವಾಗಿ ಕೇಂದ್ರ ಸಚಿವ ಸ್ಥಾನ ಬಯಕೆ ವ್ಯಕ್ತಪಡಿಸಿದ ಡಾ.ಮಂಜುನಾಥ್

ಬೆಂಗಳೂರು: ಕೆಲವೊಂದು ಕ್ಷೇತ್ರದಲ್ಲಿ ಅಭೂತ ಪೂರ್ವ ಸಾಧನೆ ಮಾಡಿದರೆ ಕೇಂದ್ರ ಸಚಿವ ಸ್ಥಾನದ ನಿರೀಕ್ಷೆಯನ್ನು ಜನ ಮಾಡಿಯೇ ಮಾಡುತ್ತಾರೆ ಎಂದು ಬೆಂಗಳೂರು ಗ್ರಾಮಾಂತರ ನೂತನ ಸಂಸದ ಡಾ. ಮಂಜುನಾಥ್ ಹೇಳಿದ್ದಾರೆ. ಈ ಮೂಲಕ ಪರೋಕ್ಷವಾಗಿ ಕೇಂದ್ರ ಸಚಿವ ಸ್ಥಾನದ ಬಯಕೆ ವ್ಯಕ್ತಪಡಿಸಿದ್ದಾರೆ.

ಮಾಧ್ಯಮದೊಂದಿಗೆ ಮಾತನಾಡಿದ ಅವರು, ಕೆಲವೊಂದು ಕ್ಷೇತ್ರದಲ್ಲಿ ಅಭೂತ ಪೂರ್ವ ಸಾಧನೆ ಮಾಡಿದರೆ ಜನ ನಿರೀಕ್ಷೆ ಮಾಡಿಯೇ ಮಾಡುತ್ತಾರೆ ಎಂದು ಹೇಳಿದರು.

ಇದೇ ವೇಳೆ ಒಂದು ವೇಳೆ ಸಚಿವರನ್ನಾಗಿ ಮಾಡಿದರೆ ನಿಭಾಯಿಸುತ್ತೀರಾ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಅದೇನು ಅಂತಾ ದೊಡ್ಡ ಸಮಸ್ಯೆ ಏನಲ್ಲ ಅಂದರು. ಅಲ್ಲದೇ ಆರೋಗ್ಯ ಸಚಿವರನ್ನಾಗಿ ಮಾಡ್ತಾರೆ ಎಂಬುದಕ್ಕೆ ಪ್ರತಿಕ್ರಿಯಿಸಿ, ಜನರು ನಿರೀಕ್ಷೆ ಮಾಡ್ತಾರೆ ನೋಡೋಣ ಅಂದರು. ದೇವೇಗೌಡರು ನನ್ನ ಗೆಲುವನ್ನು ಖುಷಿ ಪಟ್ಟಿದ್ದಾರೆ. ದೇವೇಗೌಡರು ನನ್ನ ಮಂಜು ಅಂತಾ ಕರೆಯುತ್ತಾರೆ. ನನ್ನ ಕೈ ಹಿಡಿದುಕೊಂಡು ಮಂಜು ಪಾರ್ಲಿಮೆಂಟ್‌ಗೆ ಹೋಗ್ತಾ ಇದ್ದೀಯಾ, ಒಳ್ಳೆಯದಾಗಲಿ ಎಂದು ಆಶೀರ್ವದಿಸಿದರು.

ನಮ್ಮ ಅತ್ತೆ ಚನ್ನಮ್ಮ ನನ್ನ ತಲೆ ಸವರಿ, ಕೈ ಹಿಡಿದು ಆಶೀರ್ವಾದ ಮಾಡಿ ಖುಷಿ ಪಟ್ಟರು. ಹೈವೋಲ್ಟೇಜ್, ಪ್ರತಿಷ್ಠಿತ ಕ್ಷೇತ್ರ ಅಂತಾ ಮಹತ್ವ ಪಡೆದುಕೊಂಡಿತ್ತು. ಹೀಗಾಗಿ ಕುಮಾರಸ್ವಾಮಿ ಅವರು ತಮ್ಮ ಗೆಲುವಿಗಿಂತ ನಿಮ್ಮ ಗೆಲುವನ್ನು ಸಂಭ್ರಮ ಪಟ್ಟಿದ್ದಾರೆ ಎಂದರು.

ಕಾರ್ಯಕರ್ತರಿಗೆ, ಮತದಾರರಿಗೆ ಎಷ್ಟು ಖುಷಿಯಾಗಿದೆಯೋ ಅಷ್ಟೇ ಖುಷಿ ನನಗೆ ಆಗಿದೆ. ಇದರ ಬಗ್ಗೆ ಬೀದಿ ಬೀದಿಯಲ್ಲಿ ಚರ್ಚೆ ಆಗಿದೆ. ಮೂಲೆ ಮೂಲೆಯಲ್ಲಿ, ಮಾಧ್ಯಮಗಳಲ್ಲಿ ವಿಮರ್ಶೆ ಆಗಿದೆ. ಇದೀಗ ನನ್ನ ಗೆಲುವು ಖುಷಿ ಕೊಟ್ಟಿದೆ. ರಾಜಕೀಯಕ್ಕೆ ಇದು ಮೊದಲನೇ ಹೆಜ್ಜೆ ದೇವೇಗೌಡರ ಸಲಹೆ ಸಹಕಾರ ಕೂಡ ಇರುತ್ತೆ ಎಂದರು.

ಬೆಂಗಳೂರು ಗ್ರಾಮಾಂತರ ಅಭಿವೃದ್ಧಿಗೆ ಏನು ಯೋಜನೆಗಳು ಎಂಬ ಪ್ರಶ್ನೆಗೆ, ಕೂಲಂಕಷವಾಗಿ ಪಟ್ಟಿ ಮಾಡಬೇಕು, ಪಟ್ಟಿ ಮಾಡಿದ ಬಳಿಕ ತಿಳಿಸುತ್ತೇನೆ. ಆದರೆ ಇನ್ನೂ ಕರೆಬಂದಿಲ್ಲ ಬರಬಹುದು. ಸರ್ಕಾರ ರಚನೆ ಆದ ನಂತರ ಎಲ್ಲಾ ಸಮಾಲೋಚನೆ ಮಾಡಿ ಸಂಸದರನ್ನು ಕರೆದಾಗ ಹೋಗುತ್ತೇನೆ ಎಂದು ಹೇಳಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ 45
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತು ಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಗೌರವಾನ್ವಿತ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ, ಹುಣಸೂರು
O.S.No. 207/2013

ವಾದಿಗಳು : ದ್ರಾಕ್ಷಾಯಿಣಿ
ವಿರುದ್ಧ
ಪ್ರತಿವಾದಿಗಳು : ನಾಗರಾಜು ಮತ್ತು ಇತರರು
ಸಂಭಾವ್ಯ ಪ್ರತಿವಾದಿ ನಂ.7 : ಮಹೇಶ ಬಿನ್ ನಾಗರಾಜು ವಯಸ್ಸು ಸುಮಾರು 32 ವರ್ಷ ವಾಸ: ಜಾಬಗೆರೆ ಗ್ರಾಮ, ಗಾವಡಗೆರೆ ಹೋಬಳಿ, ಹುಣಸೂರು ತಾಲ್ಲೂಕು ಮೈಸೂರು ಜಿಲ್ಲೆ.

ಪತ್ರಿಕಾ ಪ್ರಕಟಣೆ

ಮೇಲ್ಕಂಡ ಸಂಭಾವ್ಯ ಪ್ರತಿವಾದಿ ನಂ.7 ಆದ ನಿಮಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ದಾವೆಯ ವಾದಿಗಳಾದ ದ್ರಾಕ್ಷಾಯಿಣಿ ಕೋಂ ಶಾಂತರಾಜು, ವಾಸ: ಸೋಮನಹಳ್ಳಿ ಗ್ರಾಮ, ಕಸಬಾ ಹೋಬಳಿ, ಹುಣಸೂರು ತಾಲ್ಲೂಕು ಇವರು ಹುಣಸೂರಿನ ಹೆಚ್ಚುವರಿ ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ ಭಾಗಾಂಶಕ್ಕಾಗಿ ನಾಗರಾಜು ಮತ್ತು ಇತರರ ವಿರುದ್ಧ ಈ ದಾವೆಯನ್ನು ಸಲ್ಲಿಸಿದ್ದು ಮೇಲ್ಕಂಡ ಸಂಭಾವ್ಯ ಪ್ರತಿವಾದಿ ನಂ.7 ರವರಾದ ನಿಮಗೆ ಪತ್ರಿಕಾ ಪ್ರಕಟಣೆಯ ಮೂಲಕ ನೋಟೀಸು ಜಾರಿ ಮಾಡಲು ನ್ಯಾಯಾಲಯದ ಆದೇಶವಾಗಿರುತ್ತದೆ. ಸದರಿ ದಾವೆಯು ದಿನಾಂಕ : 8.07.2024-ರಂದು ನಿಮ್ಮ ಹಾಜರಾತಿಗಾಗಿ ಬೆಳಗ್ಗೆ 11.00 ಘಂಟೆಗೆ ವಿಚಾರಣೆ ನಿಗದಿಯಾಗಿದ್ದು ಆ ದಿನದಂದು ನೀವು ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಲು ತಿಳಿಯಪಡಿಸಲಾಗಿದೆ. ತಪ್ಪಿದ್ದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ಎಂದು ತಿಳಿಯುವುದು.

ನ್ಯಾಯಾಲಯದ ಅಪ್ಪಣೆಯ ಮೇರೆಗೆ
Sd/- CMO, Civil Judge (Jr.Dn.) & JMFC Court, Hunsur

ಸಹಿ/- ವಾದಿಗಳ ಪರ ವಕೀಲರು
ಸ್ಥಳ: ಹುಣಸೂರು

BANK NOTE PAPER MILL INDIA PRIVATE LIMITED

(A Joint venture of SPMCIL – A Govt. of India Enterprise and BRBNMPL – A Subsidiary of Reserve Bank of India)
CIN:U21090KA2010PTC055475
Corporate Office, Paper Mill Compound, Note Mudran Nagar, Mysuru - 570 003

EMPLOYMENT NOTIFICATION NO. 01/2024 DTD 30.05.2024

The company invites On-line applications from eligible ITI/Diploma holders for Technical posts and Graduates for Non-Technical posts as under:

Name of the Post - Process Assistant Grade - I (Non-Executive Cadre)

Discipline	Approx. No. of Posts	SC	ST	OBC	EWS	UR	Emoluments
Mechanical	10	2	1	2	1	4	Min.BP Rs.24,500/- + DA 50% of BP + HRA 18% of BP & other benefits and perks as per company rules
Electrical	4	-	-	1	-	3	
Electronics	5	1	-	1	-	3	
Chemical	6	1	1	1	1	2	
Pulp & Paper	6	1	-	1	1	3	
Civil	2	-	1	-	-	1	
Chemistry	2	-	-	1	-	1	
Accounts Assistant	2	-	-	-	-	2	
Office Assistant	2	-	-	-	-	2	
TOTAL	39	5	3	7	3	21	

NOTE: The number of vacancies is provisional and may vary according to the actual requirement of BNPMIPL.

Abridged advertisement will also be published in Employment News dated 08.06.2024 or subsequent issues.

Start date for submission of On-line Application: 05.06.2024
Last date for submission of On-line Application: 30.06.2024

For further details, please visit company's website www.bnpmindia.com.

Interested candidates may periodically visit our website for any subsequent corrigendum/addendum relating to this advt. that will be hosted.

VAGBHARATHI VIDYA SAMSTHE

Hosahundi, Ashrama Post, Mysore 570025
(English Medium School)

TEACHERS WANTED

(English Knowledge is Essential)

1. B.A, B.Ed	:	English Major :	1
2. Puc, D.Ed	:	Science, English :	1
3. Puc, D.Ed	:	Social, English :	1

Contact Directly In School
9980029395

ಮೈಸೂರಲ್ಲಿ ಅರ್ಧ ತಾಸಿಗೂ ಹೆಚ್ಚು ಕಾಲ ಜೋರು ಮಳೆ

ಜೂ.9ರವರೆಗೆ ಸಾಧಾರಣ–ತುಂತುರು ಮಳೆ ಸಾಧ್ಯತೆ


ಮೈಸೂರು,ಜೂ.5(ಪಿಎಂ)– ಮೈಸೂರಿನಲ್ಲಿ ಬುಧವಾರ ಮಧ್ಯಾಹ್ನ ಜೋರು ಮಳೆಯಾಗಿದ್ದು, ಅರ್ಧ ತಾಸಿಗೂ ಹೆಚ್ಚು ಕಾಲ ಬಿರುಸಾಗಿ ಸುರಿದ ಮಳೆ, ಬಳಿಕ ಸಂಜೆವರೆಗೆ ತುಂತುರು ಹನಿ ಹಾಕಿತು.



ಮಧ್ಯಾಹ್ನ ಸುಮಾರು 3.15ರ ವೇಳೆಗೆ ಆರಂಭವಾದ ಮಳೆಯು ಧಾರಾಕಾರವಾಗಿ ಅರ್ಧ ಗಂಟೆಗೂ ಹೆಚ್ಚು ಕಾಲ ಸುರಿದ ಹಿನ್ನೆಲೆಯಲ್ಲಿ ನಗರದ ರಸ್ತೆಗಳಲ್ಲಿನ ತಗ್ಗು ಸ್ಥಳಗಳು ಜಲಾವೃತಗೊಂಡಿದ್ದವು. ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿ ಖಾಸಗಿ ಬಸ್ ನಿಲ್ದಾಣದ ಹಿಂಭಾಗ, ಸರ್ಕಾರಿ ಆಯುರ್ವೇದ ಕಾಲೇಜು ವೃತ್ತ, ಜೆಕೆ ಮೈದಾನದ ರಸ್ತೆಯ ತಗ್ಗು ಜಾಗಗಳಲ್ಲಿ ಮೊಣಕಾಲುದ್ದ ನೀರು ನಿಂತಿತ್ತು. ಸಂಜೆ ವೇಳೆಗೆ ಮಳೆ ಬಿಡುವು ನೀಡಿತು. ಭಾರೀ ಗಾಳಿ ಇಲ್ಲದ ಹಿನ್ನೆಲೆಯಲ್ಲಿ ಯಾವುದೇ ಅನಾಹುತ ಉಂಟಾಗಿಲ್ಲ ಎನ್ನಲಾಗಿದೆ. ಈ ಸಂಬಂಧ ಮೈಸೂರು ಮಹಾನಗರ ಪಾಲಿಕೆ ಕಂಟ್ರೋಲ್ ರೂಮ್ ದೂರವಾಣಿ ಸಂಪರ್ಕಿಸಿದಾಗ, ಆವರೆಗೆ ಯಾವುದೇ ಅನಾಹುತದ ಬಗ್ಗೆ ದೂರು ಬಂದಿಲ್ಲ ಎಂಬ ಮಾಹಿತಿ ಲಭ್ಯವಾಯಿತು.

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಮೈಸೂರು, ಮಂಡ್ಯ, ಕೊಡಗು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಜೂ.9ರವರೆಗೆ ಮೋಡ ಕವಿದ ವಾತಾವರಣದೊಂದಿಗೆ ಸಾಧಾರಣ ಹಾಗೂ ತುಂತುರು ಮಳೆ ಬರುವ ಸಂಭವವಿದೆ ಎಂದು ನಾಗನಹಳ್ಳಿ ಕೃಷಿ ಹವಾಮಾನ ಕ್ಷೇತ್ರ ವಿಭಾಗ ಪ್ರಕಟಣೆಯಲ್ಲಿ ತಿಳಿಸಿದೆ.

ಕಾ.ಪು.ಸಿದ್ದಲಿಂಗಸ್ವಾಮಿ ಆರೋಗ್ಯ ವಿಚಾರಿಸಿದ್ದ ವಿ.ಸೋಮಣ್ಣ



ಮೈಸೂರಿಗೆ ಬುಧವಾರ ಬೆಳಗ್ಗೆ ಭೇಟಿ ನೀಡಿದ ತುಮಕೂರಿನಿಂದ ಲೋಕಸಭೆಗೆ ಆಯ್ಕೆಯಾಗಿರುವ ಮಾಜಿ ಸಚಿವ ವಿ.ಸೋಮಣ್ಣ ಅವರು ಅಪೋಲೋ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಬಿಜೆಪಿ ಮುಖಂಡ ಕಾ.ಪು.ಸಿದ್ದಲಿಂಗಸ್ವಾಮಿ ಅವರ ಆರೋಗ್ಯ ವಿಚಾರಿಸಿದ್ದರು.

ಮೂರನೇ ಪುಟದಿಂದ

ಜೂ.8ಕ್ಕೆ ನರೇಂದ್ರ ಮೋದಿ ಪ್ರಮಾಣ

ಟಿಡಿಪಿ 16, ಜೆಡಿಯು 12, ಶಿಂಧೆ ನೇತೃತ್ವದ ಶಿವಸೇನೆ 7 ಮತ್ತು ಎಲ್‌ಜೆಪಿ(ರಾಮ್ ವಿಲಾಸ್) ಐದು, ಜೆಡಿಎಸ್ 2 ಸ್ಥಾನಗಳನ್ನು ಗೆದ್ದು ಮೋದಿ ಮೂರನೇ ಬಾರಿಗೆ ಸರ್ಕಾರ ರಚನೆಯಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿವೆ. ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟದ (ಎನ್‌ಡಿಎ) ನಾಯಕರು ಔಪಚಾರಿಕವಾಗಿ ಮೋದಿಯವರ ನಾಯಕತ್ವವನ್ನು ಬೆಂಬಲಿಸಿದ್ದು, ಬಿಜೆಪಿ ನೇತೃತ್ವದಲ್ಲಿ ಸರ್ಕಾರ ರಚನೆಗೆ ಬೆಂಬಲ ಪತ್ರ ನೀಡಿವೆ ಎಂದು ಮೂಲಗಳು ತಿಳಿಸಿವೆ.

ರಾಜ್ಯದ ಎನ್‌ಡಿಎ ಸಂಸದರು!

ಜಗದೀಶ್ ಶೆಟ್ಟರ್, ಬಸವರಾಜ ಬೊಮ್ಮಾಯಿ ಮಂತ್ರಿ ಯಾಗಲು ಆಸಕ್ತಿ ಹೊಂದಿದ್ದಾರೆ. ಇದರ ಜೊತೆಗೆ ತಮ್ಮ ಮಿತ್ರ ಪಕ್ಷವಾದ ಜೆಡಿಎಸ್‌ನ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿಗೆ ಒಂದು ಅವಕಾಶ ಕಲ್ಪಿಸಬಹುದು. ಇದಲ್ಲದೆ, ಯಡಿಯೂರಪ್ಪ ಅವರ ಪುತ್ರ ಬಿ.ವೈ.ರಾಘವೇಂದ್ರ, ಪಿ.ಸಿ.ಗದ್ದಿಗೌಡರ್, ಪಿ.ಸಿ.ಮೋಹನ್ ನಾಲ್ಕನೇ ಬಾರಿಗೆ ಸಂಸತ್ ಪ್ರವೇಶಿಸಿದ್ದಾರೆ. ಇನ್ನು ಜಿಗಜಿಣಗಿ ಸತತವಾಗಿ ಏಳನೇ ಬಾರಿಗೆ ಬಿಜಾಪುರ ಮೀಸಲು ಕ್ಷೇತ್ರದಿಂದ ಆಯ್ಕೆಗೊಂಡಿದ್ದಾರೆ.

ಡಾ.ಮಂಜುನಾಥ್ ಅವರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವ ಮುನ್ನ ಅವರಿಗೆ ಒಳ್ಳೆ ಉತ್ತಮ ಸ್ಥಾನ ನೀಡುವುದಾಗಿ ಪ್ರಧಾನಿ ಅವರೇ ಭರವಸೆ ನೀಡಿದ್ದರಂತೆ. ಇದರ ನಡುವೆ ಪಕ್ಷದ ಹಿರಿಯ ನಾಯಕ ವಿ.ಸೋಮಣ್ಣ, ಮಾಜಿ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ್ ಮಂತ್ರಿಯಾಗುವ ಇಚ್ಛೆ ಹೊಂದಿದ್ದಾರೆ. ಯಾರು ಎಷ್ಟೇ ಪ್ರಯತ್ನ ಮಾಡಿದರೂ ರಾಜ್ಯ ಬಿಜೆಪಿ ಘಟಕ, ಸಂಘ ಪರಿವಾರ ಹಾಗೂ ಅವರ ಹಿನ್ನೆಲೆಯನ್ನು ಗಮನಿಸಿ, ಅರ್ಹತೆ ಇರುವವರಿಗೆ ಮಂತ್ರಿ ಮಾಡುತ್ತಾರೆ.

ಲೋಕಸಭಾ ಚುನಾವಣಾ ಫಲಿತಾಂಶ ಹೊರಬೀಳುತ್ತಿದ್ದಂತೆ ಸರ್ಕಾರ ರಚನೆಗೆ ಎನ್‌ಡಿಎ ಮೈತ್ರಿಕೂಟ ಸಭೆ ಸೇರಿ ಸಿದ್ಧತೆ ಮಾಡಿಕೊಂಡಿದೆ. ಎನ್‌ಡಿಎ ಕೂಟದ ಸಭೆಗೂ ಮುನ್ನ ಮೋದಿ ಅವರು ಪ್ರಧಾನಿ ಹುದ್ದೆಗೆ ರಾಜೀನಾಮೆ ಸಲ್ಲಿಸಿ ಹೊಸ ಸರ್ಕಾರ ರಚನೆಗೆ ಕಾರ್ಯತಂತ್ರ ನಡೆಸುತ್ತಿರುವ ಬೆನ್ನಲ್ಲೇ ಸಚಿವರಾಗಲು ರಾಜ್ಯದ ಬಿಜೆಪಿ ಸದಸ್ಯರು ತೆರೆಮರೆಯಲ್ಲಿ ಪ್ರಯತ್ನ ನಡೆಸಿದ್ದಾರೆ.

ನಾಗೇಂದ್ರ ರಾಜೀನಾಮೆ ಸಾಧ್ಯತೆ

ಸೇರ್ಪಡೆ ಮಾಡಿಕೊಳ್ಳಲಾಗುವುದು ಎಂದು ನಾಗೇಂದ್ರ ಅವರಿಗೆ ಸಿದ್ದರಾಮಯ್ಯ ಸೂಚಿಸಿದರು ಎಂದು ಹೇಳಲಾಗಿದೆ. ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ 187.33 ಕೋಟಿ ಅಕ್ರಮ ವರ್ಗಾವಣೆಯಾಗಿದೆ ಎಂದು ಡೆತ್‌ನೋಟ್ ಬರೆದಿಟ್ಟು ನಿಗಮದ ಅಧಿಕಾರಿ ಚಂದ್ರಶೇಖರ್ ಮೇ 26ರಂದು ಆತ್ಮಹತ್ಯೆಗೆ ಶರಣಾಗಿದ್ದರು. ಈ ಪ್ರಕರಣ ವನ್ನು ಸಿಬಿಐ ತನಿಖೆಗೆ ಒಳಪಡಿಸಬೇಕೆಂದು ವಿಪಕ್ಷಗಳು ಆಗ್ರಹಿಸಿತ್ತಾದರೂ, ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕರಣದ ತನಿಖೆಗೆ ಸಿಐಡಿ ಆರ್ಥಿಕ ಅಪರಾಧ ವಿಭಾಗದ ಎಡಿಜಿಪಿ ಮನೀಷ್ ಕರ್ಬೀಕರ್ ನೇತೃತ್ವದಲ್ಲಿ ಒಟ್ಟು ಐವರು ಅಧಿಕಾರಿಗಳ ನ್ನೊಳಗೊಂಡ ಎಸ್‌ಐಟಿ ರಚಿಸಿದ್ದರು. ಈ ತಂಡ ಆಂಧ್ರಪ್ರದೇಶದ ಇಬ್ಬರು ಸೇರಿದಂತೆ ಒಟ್ಟು ಐವರನ್ನು ಈಗಾಗಲೇ ಬಂಧಿಸಿದ್ದರು. ಬಂಧಿತರಲ್ಲಿ ಇಬ್ಬರು ಸಚಿವ ನಾಗೇಂದ್ರ ಆಪ್ತರು ಎಂದು ಹೇಳಲಾಗಿದೆ. ಈ ನಡುವೆ ಮೂರು ಕೋಟಿಗೂ ಹೆಚ್ಚು ಹಣ ಅವ್ಯವಹಾರವಾಗಿದ್ದಲ್ಲಿ ಸಿಬಿಐ ತನಿಖೆ ನಡೆಯಬೇಕು ಎಂಬ ಆರ್‌ಬಿಐ ನಿಯಮದಂತೆ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಈ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಿತ್ತು. ಒಂದೆಡೆ ರಾಜ್ಯ ಸರ್ಕಾರ ರಚಿಸಿರುವ ಎಸ್‌ಐಟಿ ತನಿಖೆ ಪ್ರಗತಿಯಲ್ಲಿದ್ದರೂ, ಇದೀಗ ಸಿಬಿಐ ಸಹ ತನಿಖೆಯನ್ನು ಕೈಗೊಂಡಿದ್ದು, ಎಸ್‌ಐಟಿ ತನಿಖೆಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿಯನ್ನು ಸಿಬಿಐಗೆ ಹಸ್ತಾಂತರಿಸುವ ನಿರ್ಬಂಧ ಉಂಟಾಗಿದೆ. ಇವೆಲ್ಲವನ್ನೂ ಮನಗಂಡಿರುವ ಸಿದ್ದರಾಮಯ್ಯ ಅವರು, ಸಚಿವ ನಾಗೇಂದ್ರ ಅವರನ್ನು ರಾಜೀನಾಮೆ ನೀಡುವಂತೆ ತಿಳಿಸಿದ್ದಾರೆ ಎನ್ನಲಾಗಿದೆ.

ವಿಧಾನಪರಿಷತ್ ಚುನಾವಣಾ ಮತ ಎಣಿಕೆ

11 ಅಭ್ಯರ್ಥಿಗಳು ಅಗ್ನಿ ಪರೀಕ್ಷೆ ಎದುರಿಸುತ್ತಿದ್ದಾರೆ. ಅವರಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡ, ಜೆಡಿಎಸ್(ಮೈತ್ರಿ) ಅಭ್ಯರ್ಥಿ ಕೆ.ವಿವೇಕಾನಂದ, ಕರ್ನಾಟಕ ಜನತಾ ಪಕ್ಷದಿಂದ ಎಂ.ನಾಗೇಂದ್ರಬಾಬು, ಕನ್ನಡ ಚಳವಳಿ ವಾಟಾಳ್ ಪಕ್ಷದಿಂದ ವಾಟಾಳ್ ನಾಗರಾಜ್, ಪಕ್ಷೇತರ ಅಭ್ಯರ್ಥಿಗಳಾಗಿ ಡಾ.ಎಸ್.ಅನಿಲ್‌ಕುಮಾರ್, ಕದಂಬ ನಾ ಅಂಬರೀಷ್, ನಾಗಮಲ್ಲೇಶ್, ನಿಂಗರಾಜು ಎಸ್ ಶಂಕನಪುರ, ಕೆ.ಸಿ.ಪುಟ್ಟಸಿದ್ದಶೆಟ್ಟಿ, ಡಾ.ಹ.ರಾ.ಮಹೇಶ್, ರಾಜು ಕೆ.ಸಿದ್ದಯ್ಯನಪುರ ಚುನಾವಣಾ ಕಣದಲ್ಲಿದ್ದಾರೆ.

ನೈರುತ್ಯ ಶಿಕ್ಷಕರ ಕ್ಷೇತ್ರ: ವಿಧಾನ ಪರಿಷತ್ ಮೊಗಸಾಲೆಯಲ್ಲಿ ಸ್ಥಾನ ಪಡೆಯಲು ನೈರುತ್ಯ ಶಿಕ್ಷಕರ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿ ಎಲ್.ಎಲ್.ಭೋಜೇಗೌಡ, ಕಾಂಗ್ರೆಸ್‌ನಿಂದ ಡಾ.ಕೆ.ಕೆ.ಮಂಜುನಾಥ್ ಕುಮಾರ್, ಪಕ್ಷೇತರ ಅಭ್ಯರ್ಥಿಗಳಾಗಿ ಡಾ.ಅರುಣ್ ಹೊಸಕೊಪ್ಪ, ಡಾ.ನರೇಶ್ಚಂದ್ರ ಹೆಗ್ಡೆ, ನಂಜೇಶ್ ಬೆಣ್ಣೂರು, ಟಿ.ಭಾಸ್ಕರ್ ಶೆಟ್ಟಿ, ಕೆ.ಕೆ.ಮಂಜುನಾಥ್ ಕುಮಾರ್, ಹಾಗೂ ಡಾ.ಎಸ್.ಆರ್.ಹರೀಶ್ ಆಚಾರ್ಯ ಚುನಾವಣಾ ಕಣದಲ್ಲಿದ್ದಾರೆ. ಈ ಕ್ಷೇತ್ರದಲ್ಲಿ 8 ಅಭ್ಯರ್ಥಿಗಳು ಕಣದಲ್ಲಿದ್ದರೂ ಕಾಂಗ್ರೆಸ್ ಹಾಗೂ ಮೈತ್ರಿ ಅಭ್ಯರ್ಥಿ ನಡುವೆ ಸ್ಪರ್ಧೆ ಏರ್ಪಟ್ಟಿದೆ.

ನೈರುತ್ಯ ಪದವೀಧರರ ಕ್ಷೇತ್ರ: ನೈರುತ್ಯ ಪದವೀಧರರ ಕ್ಷೇತ್ರದಿಂದ ವಿಧಾನ ಪರಿಷತ್ ಪ್ರವೇಶಿಸಲು 10 ಅಭ್ಯರ್ಥಿಗಳು ಚುನಾವಣೆ ಎದುರಿಸಿದ್ದಾರೆ. ಅವರಲ್ಲಿ ಕಾಂಗ್ರೆಸ್‌ನಿಂದ ಆಯನೂರು ಮಂಜುನಾಥ್, ಬಿಜೆಪಿ(ಮೈತ್ರಿ)ಯಿಂದ ಡಾ.ಧನಂಜಯ ಸರ್ಜಿ, ಸರ್ವ ಜನತಾ ಪಾರ್ಟಿಯಿಂದ ಜಿ.ಸಿ.ಪಟೇಲ್, ಪಕ್ಷೇತರ ಅಭ್ಯರ್ಥಿಯಾಗಿ ದಿನಕರ ಉಳ್ಳಾಲ್, ಎಸ್.ಪಿ.ದಿನೇಶ್, ಬಿ.ಮೊಹಮ್ಮದ್ ತುಂಬೆ, ಕೆ.ರಘುಪತಿ ಭಟ್, ಡಾ.ಶೇಕ್ ಬಾವ ಮಂಗಳೂರು, ಜಿ.ಆರ್.ಷಡಾಕ್ಷರಪ್ಪ, ಷಹಾರಾಜ್ ಮುಜಾಹಿದ್ ಸಿದ್ದಿಕ್ಕಿ ಚುನಾವಣೆ ಎದುರಿಸಿದ್ದಾರೆ. ಈ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಆಯನೂರು ಮಂಜುನಾಥ್, ಬಿಜೆಪಿ(ಮೈತ್ರಿ)ಯಿಂದ ಡಾ.ಧನಂಜಯ ಸರ್ಜಿ ಹಾಗೂ ಬಿಜೆಪಿ ಬಂಡಾಯ ಅಭ್ಯರ್ಥಿ, ಮಾಜಿ ಶಾಸಕ ಕೆ.ರಘುಪತಿ ಭಟ್ ನಡುವೆ ತ್ರಿಕೋನ ಸ್ಪರ್ಧೆ ಸಾಧ್ಯತೆ ಇದೆ.

ಫಲಿತಾಂಶ ವಿಳಂಬ ಸಾಧ್ಯತೆ: ಮೂರೂ ಕ್ಷೇತ್ರಗಳ ಫಲಿತಾಂಶದಲ್ಲಿ ಯಾವುದೇ ಅಭ್ಯರ್ಥಿ ನಿಗದಿತ ಪ್ರಮಾಣದ ಪ್ರಥಮ ಪ್ರಾಶಸ್ತ್ಯದ ಮತ ಗಳಿಸದೇ ಇದ್ದಲ್ಲಿ ಎರಡನೇ ಪ್ರಾಶಸ್ತ್ಯದ ಮತಗಳ ಎಣಿಕಾ ಕಾರ್ಯದ ಮೊರೆ ಹೋಗುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಫಲಿತಾಂಶ ಇಂತಿಷ್ಟೇ ಸಮಯದಲ್ಲಿ ಫಲಿತಾಂಶ ಪ್ರಕಟವಾಗಲಿದೆ ಎಂದು ಹೇಳಲಾಗದು.

ಪರಿಸರ ರಕ್ಷಣೆಯನ್ನು ಸರ್ಕಾರವೇ ಮಾಡಬೇಕೆಂದಿಲ್ಲ; ಸಂಘ ಸಂಸ್ಥೆಗಳು ಸಹ ಇದರಲ್ಲಿ ಕೈಜೋಡಿಸಬೇಕು

'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿಯವರ ಸಲಹೆ

ಮೈಸೂರು, ಜೂ.5(ಆರ್‌ಕೆ) ಮೈಸೂರಿನ ರಾಮಕೃಷ್ಣನಗರದಲ್ಲಿರುವ ಸುಯೋಗ ಆಸ್ಪತ್ರೆಯ ಕೈತೋಟದಲ್ಲಿ ಗಿಡಗಳನ್ನು ನೆಟ್ಟು ನೀರೆರೆಯುವ ಮೂಲಕ ಇಂದು ವಿಶ್ವ ಪರಿಸರ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಸುಯೋಗ ಆಸ್ಪತ್ರೆ ಮತ್ತು ಸುಯೋಗ್ ವೈದ್ಯಕೀಯ ಸಮೂಹ ಶಿಕ್ಷಣ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕ ಡಾ.ಕೆ.ಬಿ.ಗಣಪತಿ ಅವರು ಪರಿಸರ ಸಂರಕ್ಷಣೆಯಲ್ಲಿ ಪ್ರತಿಯೊಬ್ಬ ನಾಗರಿಕರೂ ಪಾಲ್ಗೊಳ್ಳಬೇಕು ಎಂದರು.

ಕೇವಲ ಪರಿಸರ ದಿನಾಚರಣೆ ದಿನ ಗಿಡ ನೆಟ್ಟು ನಂತರ ಮರೆತು ಬಿಟ್ಟರೆ ಪ್ರಯೋಜನವಿಲ್ಲ. ಅದಕ್ಕೆ ನೀರೆರೆದು ಬೆಳೆಯುವವರೆಗೆ ನಿರ್ವಹಣೆ ಮಾಡಿ ಪೋಷಿಸಿದಾಗ ಮಾತ್ರ ನಿಸರ್ಗವನ್ನು ಕಾಪಾಡಬಹುದು ಅವರು ಅಭಿಪ್ರಾಯ ಪಟ್ಟರು. ಅನೇಕ ವರ್ಷಗಳ ಹಿಂದೆ ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವರಾಗಿದ್ದ ಡಾ.ಕೆ.ಎಂ.ಮುನ್ಷಿ ಅವರು ದೇಶಾದ್ಯಂತ 'ವನಮಹೋತ್ಸವ ಯೋಜನೆ' ಜಾರಿ ಗೊಳಿಸಿದ ನಂತರ ಜನರಲ್ಲಿ ಪರಿಸರ ಉಳಿಸಬೇಕೆಂಬ ಅರಿವು ಮೂಡಲಾ ರಂಭವಾಯಿತು. ತಾಪಮಾನ ಮತ್ತು ಹವಾಮಾನ ಬದಲಾವಣೆಯಿಂದಾಗಿ ಅರಣ್ಯ ಪರಿಸರ ರಕ್ಷಣೆ ಪ್ರಾಮುಖ್ಯತೆ ಏನೆಂಬುದು ತಿಳಿಯಿತು ಎಂದು ಡಾ.ಗಣಪತಿ ನುಡಿದರು.



ಮೈಸೂರಿನ ರಾಮಕೃಷ್ಣನಗರದಲ್ಲಿರುವ ಸುಯೋಗ ಆಸ್ಪತ್ರೆಯ ಕೈತೋಟದಲ್ಲಿ ಗಿಡಗಳನ್ನು ನೆಟ್ಟು ನೀರೆರೆಯುವ ಮೂಲಕ ವಿಶ್ವ ಪರಿಸರ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರು ಗಿಡಕ್ಕೆ ನೀರೆರೆಯುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ನಾವೆಲ್ಲರು ಸೇರಿ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ವೃಕ್ಷ ಬೆಳೆಸುವ ಯೋಜನೆ ಆರಂಭಿಸಿದ್ದೆವು ಅಲ್ಲದೆ, ಬೆಟ್ಟದ ಮೇಲೆ ಮರಗಳಿಲ್ಲದ ಸ್ಥಳದಲ್ಲಿ ಸೂಕ್ತ ಗಿಡ ನೆಡುವ ಅಭಿಯಾನಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿಯೊಬ್ಬರು ಸಲಹೆ ನೀಡಿ, ಸಹಕರಿಸಿದ್ದರು ಎಂದು ಸ್ಮರಿಸಿದ ಅವರು, ಅದನ್ನು ಕೇವಲ ಸರ್ಕಾರವೇ ಮಾಡಬೇಕೆಂದು ನಿರೀಕ್ಷಿಸಬಾರದು ಅದಕ್ಕಾಗಿಯೇ ಎನ್‌ಜಿಓಗಳಿಗೆ ಅನುದಾನ ನೀಡಲಾಗುತ್ತದೆ. ಆದರೆ ಹಣವನ್ನು ದುರುಪಯೋಗ ಮಾಡಿಕೊಳ್ಳುವವರೇ ಹೆಚ್ಚಾಗಿರುವುದರಿಂದ ಪ್ರತಿಯೊಬ್ಬ ನಾಗರಿಕರೂ ಪರಿಸರ ರಕ್ಷಣೆಗೆ ಕೈಜೋಡಿಸಬೇಕು ಎಂದರು.

ಇತ್ತೀಚೆಗೆ ಬೀಜಗಳನ್ನು ಎರಚಿ ಗಿಡ ಬೆಳೆಸುವ ಪರಿಪಾಠ ಆರಂಭವಾಗಿದೆ. ನಾವೂ ಸಹ ಕೊಡಗಿನ ತೋಟಕ್ಕೆ ಹೋದಾಗ ಎಲ್ಲೆಲ್ಲಿ ಗಿಡಗಳಿಲ್ಲವೋ ಅಲ್ಲಿಗೆ ಸೀಡ್ ಬಾಲ್‌ಗಳನ್ನೆಸೆದು ಬಂದಿದ್ದೇವೆ ಎಂದು ಹೇಳುವ ಮೂಲಕ ತಮ್ಮ ಪರಿಸರ ಪ್ರೇಮವನ್ನು ವ್ಯಕ್ತಪಡಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಮುಡಾ ಅಧ್ಯಕ್ಷ ಕೆ.ಮರೀಗೌಡರು, ವಾಯು ಮಾಲಿನ್ಯ ತಡೆಗಟ್ಟಿ ಪರಿಸರ ಉಳಿಸುವುದು ಅತ್ಯಗತ್ಯವಾಗಿದ್ದು, ಸುಯೋಗ ಆಸ್ಪತ್ರೆಯ ಡಾ.ಎಸ್.ಪಿ.ಯೋಗಣ್ಣ ಅವರು ಇತರ ಸಂಘ–ಸಂಸ್ಥೆಗಳೊಂದಿಗೆ ವಿಶ್ವಮಾನವ ಜೋಡಿ ರಸ್ತೆಯಲ್ಲಿ ಕೈಗೊಳ್ಳಲುದ್ದೇಶಿಸಿರುವ ಹೂಗಿಡ ನೆಡುವ ಯೋಜನೆಗೆ ಹಣಕಾಸಿನ ನೆರವು ನೀಡುವುದಾಗಿ ಪ್ರಕಟಿಸಿದರು.

ಇದೇ ಸಂದರ್ಭ ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪದವಿ ಪಡೆದಿರುವ ಡಾ.ಕೆ.ಬಿ.ಗಣಪತಿ, ಗಿಡ ನೆಟ್ಟು ಪರಿಸರ ರಕ್ಷಿಸುತ್ತಿರುವ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಹಾಗೂ ಮುಡಾ ಅಧ್ಯಕ್ಷ ಕೆ.ಮರೀಗೌಡರನ್ನು ಸನ್ಮಾನಿಸಲಾಯಿತು.

ಸುಯೋಗ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಹಿರಿಯ ವಿದ್ವಾಂಸ ಡಾ.ಸಿ.ಪಿ.ಕೃಷ್ಣಕುಮಾರ್, ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಾಂಗದ ನಿವೃತ್ತ ನಿರ್ದೇಶಕ ಪ್ರೊ.ಕೆ.ವಿ.ವೀರಪ್ಪ, ಹಿರಿಯ ಕೈಗಾರಿಕೋದ್ಯಮಿ ಡಾ.ಬಿ.ಆರ್.ಪೈ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ.ಎನ್.ಎಸ್.ರಾಮೇಗೌಡ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ನಾಲ್ವಡಿಯವರ ತತ್ವಾದರ್ಶದಂತೆಯೇ ಕಾರ್ಯ ನಿರ್ವಹಿಸುವೆ

● ನೂತನ ಸಂಸದ ಯದುವೀರ್ ● ಸುತ್ತೂರು ಮಠಕ್ಕೆ ಭೇಟಿ, ಶ್ರೀಗಳಿಂದ ಆಶೀರ್ವಾದ



ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ದಾಖಲೆ ಮತಗಳ ಅಂತರದಿಂದ ಜಯ ಗಳಿಸಿದ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಬುಧವಾರ ಸುತ್ತೂರು ಮಠಕ್ಕೆ ಭೇಟಿ ನೀಡಿ, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದರು. ಈ ವೇಳೆ ಮಾಜಿ ಶಾಸಕ ಸಿ.ಎಸ್.ನಿರಂಜನ್‌ಕುಮಾರ್, ಮೈಸೂರು ಜಿಲ್ಲಾ ಬಿಜೆಪಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ನಂದೀಶ್ ಹಂಚೆ, ನಿಖಿಲೇಶ್ ಇತರ ಮುಖಂಡರು ಉಪಸ್ಥಿತರಿದ್ದರು.

ಮೈಸೂರು,ಜೂ.5(ಪಿಎಂ)– ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ತತ್ವಾದರ್ಶದಂತೆಯೇ ಸಂಸದನಾಗಿ ಕಾರ್ಯ ನಿರ್ವಹಿಸಲಿದ್ದೇನೆ ಎಂದು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ನೂತನ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಶಾಖಾ ಮಠಕ್ಕೆ ಬುಧವಾರ ಭೇಟಿ ನೀಡಿದ ಅವರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ ಆಶೀರ್ವಾದ ಪಡೆದ ಬಳಿಕ ಮಾಧ್ಯಮದವರೊಂದಿಗೆ ಅವರು ಮಾತನಾಡಿದರು.

ತಮ್ಮ ಗೆಲುವಿಗೆ ಕಾರಣಗಳೇನು ಎಂಬುದಕ್ಕೆ ಪ್ರತಿಕ್ರಿಯಿಸಿ, ಈ ವಿಜಯ ನನ್ನದಲ್ಲ, ನಮ್ಮ ಪಕ್ಷದ ನಾಯಕರು ಹಾಗೂ ಕಾರ್ಯಕರ್ತರಿಗೆ ಅರ್ಪಿತವಾಗಬೇಕು. ನನ್ನ ಗೆಲುವಿಗೆ ಹತ್ತಾರು ಅಂಶಗಳು ಕಾರಣ. ಕಳೆದ 10 ವರ್ಷಗಳಲ್ಲಿ ಪ್ರಧಾನಿ ಮೋದಿಯವರು ಉತ್ತಮ ಆಡಳಿತವನ್ನು ಗುರುತಿಸಿ ಮತದಾರರು ಸ್ಪಂದಿಸಿದ್ದಾರೆ. ಜೊತೆಗೆ ಅಂದಿನ ಮೈಸೂರು ಮಹಾರಾಜರ ಉತ್ತಮ ಆಡಳಿತ ಹಾಗೂ ಜನಪರ ಕಾರ್ಯಕ್ರಮಗಳನ್ನೂ ಮತದಾರರು ಗುರುತಿಸಿದ್ದಾರೆ. ನಮ್ಮ ಪಕ್ಷದ ಸಂಘಟನೆ ಹಾಗೂ ಜೆಡಿಎಸ್ ಜೊತೆಗಿನ ಮೈತ್ರಿ ಕೂಡ ಇಲ್ಲಿ ಕಾರಣವಾಗಿದೆ ಎಂದು ತಿಳಿಸಿದರು

ತಮ್ಮ ಮುತ್ತಜ್ಜ (ನಾಲ್ವಡಿ ಕೃಷ್ಣರಾಜ ಒಡೆಯರ್) ಅವರ ಜನ್ಮದಿನದಂದೇ ತಮಗೆ ಗೆಲುವು ಒಲಿದು ಬಂದಿದೆ. ಈ ಬಗ್ಗೆ ಏನು ಹೇಳುತ್ತೀರಿ ಎಂಬುದಕ್ಕೆ ಉತ್ತರಿಸಿ, ಚಾಮುಂಡೇಶ್ವರಿ ತಾಯಿ ಆಶೀರ್ವಾದಿಂದ ನಾಲ್ವಡಿಯವರ ಜಯಂತಿ ದಿನದಂದೇ ಫಲಿತಾಂಶ ಪ್ರಕಟಣೆ ನಿಗದಿಯಾಗಿ, ನನಗೆ ಭಾರೀ ಅಂತರದ ಗೆಲುವೂ ಲಭಿಸಿದೆ. ನಾಲ್ವಡಿ ಅವರು ಅಪಾರ ಕೊಡುಗೆ ನೀಡಿದ್ದಾರೆ. ಅವರ ತತ್ವಾದರ್ಶದಂತೆಯೇ ನಾನೂ ಕೆಲಸ ಮಾಡುತ್ತೇನೆ ಎಂದರು.

ರಾಜ್ಯ ಮತ್ತು ದೇಶದಲ್ಲಿ ಬಿಜೆಪಿಗೆ ಸ್ಥಾನಗಳು ಕಡಿಮೆಯಾಗಲು ಕಾರಣವೇನಿರಬಹುದು ಎಂಬುದಕ್ಕೆ ಪ್ರತಿಕ್ರಿಯಿಸಿ, ಅದನ್ನು ಇನ್ನು ವಿಶ್ಲೇಷಣೆ ಮಾಡಬೇಕಿದೆ. ನಿರೀಕ್ಷೆ ಮಾಡಿದಂತೆ ನಮಗೆ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಫಲಿತಾಂಶ ಬಂದಿಲ್ಲ. ಅದನ್ನು ವಿಮರ್ಶೆ ಮಾಡಲಾಗುತ್ತಿದೆ. ಆದರೂ ನಮಗೆ ವಿಶ್ವಾಸವಿದೆ. ನಾವೇ ಸರ್ಕಾರ ರಚನೆ ಮಾಡುತ್ತೇವೆ. ಮೋದಿಯವರೇ ಮತ್ತೆ ಪ್ರಧಾನಿಯಾಗುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ದೆಹಲಿ ಪ್ರಯಾಣ ಯಾವಾಗ ಎಂಬುದಕ್ಕೆ ಪ್ರತಿಕ್ರಿಯಿಸಿ, ನಮ್ಮ ಪಕ್ಷದ ಆಹ್ವಾನದ ಮೇರೆಗೆ ನಾಳೆ ಪ್ರಯಾಣ ಬೆಳೆಸಲಿದ್ದೇನೆ ಎಂದು ತಿಳಿಸಿದರು. ಚಾಮುಂಡಿಬೆಟ್ಟದ ದೇವಿಕೆರೆ ರಸ್ತೆಯಲ್ಲಿ ರಾಜಮನೆತನದಿಂದ ಅಳವಡಿಸಿದ್ದ ಗೇಟ್ ಅನ್ನು ತೆರವುಗೊಳಿಸಿರುವ ಸಂಬಂಧ ಪ್ರತಿಕ್ರಿಯಿಸಿ, ಈ ಸಂಬಂಧ ರಾಜಮನೆತನದಿಂದಲೇ ಕ್ರಮವಾಗಲಿದೆ. ಸಂಸದನಾಗಿ ಯಾವುದೇ ಪ್ರಭಾವ ಬೀರಲು ಇಲ್ಲಿ ಅವಕಾಶ ಇಲ್ಲ. ಕಾನೂನಾತ್ಮಕವಾಗಿ ಎಲ್ಲವೂ ನಡೆಯಲಿದೆ ಎಂದರು. ಮಾಜಿ ಶಾಸಕ ಸಿ.ಹೆಚ್.ನಿರಂಜನಕುಮಾರ್, ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷ ನಂದೀಶ್ ಹಂಚೆ, ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ನಗರ ಪ್ರಧಾನ ಕಾರ್ಯದರ್ಶಿ ಕೇಬಲ್ ಮಹೇಶ್ ಮತ್ತಿತರರು ಹಾಜರಿದ್ದರು.

ನಾವು ನಿರೀಕ್ಷಿಸಿದಷ್ಟು ಸ್ಥಾನ ಗಳಿಸಲಾಗಿಲ್ಲ

ಬೆಂಗಳೂರು, ಜೂನ್ 5(ಕೆಎಂಶಿ)–



ನಾವು ನಿರೀಕ್ಷೆ ಮಾಡಿದಷ್ಟು ಸ್ಥಾನಗಳನ್ನು ಪಡೆಯುವಲ್ಲಿ ವಿಫಲವಾಗಿದ್ದೇವೆ, ಕಳೆದ 2019ರ ಲೋಕಸಭಾ ಚುನಾವಣೆಗೆ ಹೋಲಿಸಿದರೆ ಕಾಂಗ್ರೆಸ್ ದೇಶದಾದ್ಯಂತ ಹೆಚ್ಚು ಸ್ಥಾನಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿದೆ ಎಂದು ಸಚಿವ ಕೆ.ಎಚ್.ಮುನಿಯಪ್ಪ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಾಯಕರಾದ ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಬಡವರ ಪರ ಪ್ರಣಾಳಿಕೆಯನ್ನು ಘೋಷಿಸಿದ್ದರು, ಅದರಿಂದಾಗಿ ಪಕ್ಷ ಉತ್ತರ ಭಾರತದ ರಾಜ್ಯಗಳಲ್ಲಿ ಹಲವು ಸ್ಥಾನಗಳನ್ನು ಗೆಲ್ಲಲು ಕಾರಣವಾಯಿತು, ದಕ್ಷಿಣ ಭಾರತದ ರಾಜ್ಯಗಳಲ್ಲಿ ಮಿಶ್ರ ಫಲಿತಾಂಶದಿಂದ ಸ್ವಲ್ಪ ಹಿನ್ನಡೆಯಾಯಿತು ಎಂದು ಹೇಳಿದರು.

ಕೋಲಾರ ಜಿಲ್ಲೆಯಲ್ಲಿ ನಾಯಕರ ಒಗ್ಗಟ್ಟಿನ ಕೊರತೆಯಿಂದಾಗಿ ಕ್ಷೇತ್ರವನ್ನು ಗೆಲ್ಲುವಲ್ಲಿ ವಿಫಲವಾಗಿದ್ದೇವೆ, ಹಲವಾರು ಬಾರಿ ಹೈಕಮಾಂಡ್ ನಾಯಕರು ಹಾಗೂ ರಾಜ್ಯ ನಾಯಕರ ಗಮನಕ್ಕೆ ತಂದರೂ ಸಮಸ್ಯೆ ಬಗೆಹರಿಸಲು ಸಾಧ್ಯವಾಗಲಿಲ್ಲ.

ಕೋಲಾರ ಜಿಲ್ಲೆಯಲ್ಲಿ ಶಾಸಕರ ಒಗ್ಗಟ್ಟಿನ ಕೊರತೆ ಹಾಗೂ ಶಾಸಕರ ಸ್ವಪ್ರತಿಷ್ಠೆಗಳಿಂದಾಗಿ ಕೋಲಾರ, ಚಿಕ್ಕಬಳ್ಳಾಪುರ ಕ್ಷೇತ್ರಗಳ ಸೋಲಿಗೆ ಕಾರಣವಾಯಿತು.

ಮುಂಬರುವ ತಾಲೂಕು ಹಾಗೂ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಗೆಲ್ಲಬೇಕಾದರೆ ಒಗ್ಗಟ್ಟಿನಿಂದ ಕೆಲಸ ಮಾಡಬೇಕು ಎಂದರು.

ಪರಿಸರ ಸಂರಕ್ಷಣೆ ವಿಚಾರದಲ್ಲಿ ಜನರ ಜಾಣ ಕುರುಡು ಪ್ರದರ್ಶನ

ಕಲಾಮಂದಿರದಲ್ಲಿ ಆಯೋಜಿಸಿದ್ದ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ನ್ಯಾಯಾಧೀಶರಾದ ಬಿ.ಜಿ.ದಿನೇಶ್ ವಿಷಾದ

ಮೈಸೂರು,ಜೂ.5(ಎಂಟಿವೈ)– ಪರಿಸರ ಸಂರಕ್ಷಣೆ ವಿಚಾರದಲ್ಲಿ ಜನ ಜಾಣ ಕುರುಡು ಪ್ರದರ್ಶಿಸದೆ ಮಕ್ಕಳ ಮುಂದಿನ ಭವಿಷ್ಯಕ್ಕಾಗಿ ಪರಿಸರ ಸಂರಕ್ಷಣೆಯೊಂದಿಗೆ ನೈಸರ್ಗಿಕ ಸಂಪತ್ತು ಕಾಪಾಡುವುದಕ್ಕೆ ಬದ್ಧರಾಗಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ನ್ಯಾಬಿ.ಜಿ.ದಿನೇಶ್ ಸಲಹೆ ನೀಡಿದ್ದಾರೆ.

ಮೈಸೂರಿನ ಕಲಾಮಂದಿರುವ ಕಿರು ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕರ್ನಾಟಕ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಮಡಿಲು ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ಬುಧವಾರ ಆಯೋಜಿಸಿದ್ದ 'ವಿಶ್ವ ಪರಿಸರ ದಿನ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿಶ್ವ ಪರಿಸರ ದಿನದ ಕಾರ್ಯಕ್ರಮವನ್ನು ಕೆಲವು ಇಲಾಖೆ ಹಾಗೂ ಕೆಲವು ಸಂಘ–ಸಂಸ್ಥೆಗಳು ಮಾತ್ರ ವರ್ಷವಿಡೀ ನಡೆಸುತ್ತವೆ. ವರ್ಷವಿಡೀ ಪರಿಸರ ಸಂರಕ್ಷಣೆ ಮಾಡುವ ವಿಚಾರದಲ್ಲಿ ಜನ ಜಾಣ ಕುರುಡುತನ ಪ್ರದರ್ಶಿಸುತ್ತಿರುವುದು ವಿಷಾದನೀಯ. ನೈಸರ್ಗಿಕ ಸಂಪಪತ್ತನ್ನು ಕಾಪಾಡುವುದು ಪ್ರತಿಯೊಬ್ಬರ ನಾಗರಿಕ ಕರ್ತವ್ಯವೂ ಆಗಿದೆ. ಕೆರೆ, ಕಟ್ಟೆ, ನದಿ, ಸರೋವರ, ಅರಣ್ಯ, ಪರಿಸರ ಸಂರಕ್ಷಣೆ ಮಾಡುವುದು ಎಲ್ಲರ ಜವಾಬ್ದಾರಿಯಾಗಿದೆ. ಕೇವಲ ಒಂದು ವರ್ಷ ಬಾಳಿಕೆ ಬರುವ ಯಾವುದಾದರೂ ಒಂದು ವಸ್ತುವನ್ನು ಖರೀದಿಸಲು ಸಾಕಷ್ಟು ಚಿಂತಿಸುವ ನಾವು, ನಮ್ಮ ಮಕ್ಕಳು 50–60 ವರ್ಷ ಬಾಳಲು ಬೇಕಾದ ಸ್ವಚ್ಛ ಗಾಳಿ, ಶುದ್ಧ ಕುಡಿಯುವ ನೀರು, ಪರಿಸರ ಸಂರಕ್ಷಣೆಗೆ ಒತ್ತು ನೀಡುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.



ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಮನುಷ್ಯರಂತೆ ಭೂಮಿ ಮೇಲೆ ಜೀವಿಸಲು ಕೀಟ, ಪ್ರಾಣಿ–ಪಕ್ಷಿ, ಗಿಡ–ಮರಗಳಿಗೂ ಹಕ್ಕು ಇದೆ. ಪ್ರಾಣಿ–ಪಕ್ಷಿಗಳೊಂದಿಗೆ ಸಾಮರಸ್ಯದಿಂದ ಜೀವನ ಮಾಡಬೇಕಾಗಿದೆ. ನೈಸರ್ಗಿಕ ಸಂಪತ್ತನ್ನು ಅಗತ್ಯಕ್ಕಿಂತ ಹೆಚ್ಚಾಗಿ ಬಳಸದೇ ಇರಲು ಬದ್ಧರಾಗಬೇಕು. ನಾವು ಮಿತಿ ಮೀರಿದ ಪ್ರಮಾಣದಲ್ಲಿ ನೈಸರ್ಗಿಕ ಸಂಪತ್ತನ್ನು ಬಳಸುತ್ತಿದ್ದೇವೆ. ನೂರಾರು ವರ್ಷದಿಂದ ಭೂಮಿ ಮೇಲೆ ಜೀವಿಸುತ್ತಿದ್ದ ಪೂರ್ವಿಕರು ನಮಗೆ ಉತ್ತಮ ಪರಿಸರ, ಅರಣ್ಯ, ವನ್ಯಸಂಪತ್ತನ್ನು ಕೊಡುಗೆಯಾಗಿ ನೀಡಿದ್ದಾರೆ. ಈಗ ನಾವು ನಮ್ಮ ಮುಂದಿನ ಪೀಳಿಗೆಗೆ ಉತ್ತಮ ಪರಿಸರವನ್ನು ಕೊಡುಗೆಯಾಗಿ ನೀಡುವ ಅಗತ್ಯವಿದೆ ಎಂದರು.

ಕಳೆದ ಕೆಲವು ದಶಕಗಳಿಂದ ಪರಿಸರದ ಮೇಲೆ ಆದ ದೌರ್ಜನ್ಯ, ಗಿಡ–ಮರಗಳ ಹನನದ ಪರಿಣಾಮ ಇಂದು ಜನ ವಿವಿಧ ಸಮಸ್ಯೆಗೆ ಗುರಿಯಾಗುತ್ತಿದ್ದಾರೆ. ಮೈಸೂರು ಸೇರಿದಂತೆ ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಗರಿಷ್ಠ ತಾಪಮಾನ ಜನರನ್ನು ತತ್ತರಿಸುವಂತೆ ಮಾಡಿದೆ. ಮೈಸೂರಲ್ಲಿ ಮರಗಳಿದ್ದರೂ 41 ಡಿಗ್ರಿ ತಾಪಮಾನ ದಾಖಲಾಗಿದೆ. ಮರಗಳಿಲ್ಲದಿದ್ದರೆ, ತಾಪಮಾನ 45 ಡಿಗ್ರಿ ಆಗುವ ಸಾಧ್ಯತೆ ಇತ್ತು. ದೆಹಲಿಯಲ್ಲಿ 52 ಡಿಗ್ರಿ ತಾಪಮಾನವಿದೆ. ಈ ಎಲ್ಲಾ ಬೆಳವಣಿಗೆ ಎಚ್ಚರಿಕೆ ಗಂಟೆಯಾಗಿದೆ. ಅಭಿವೃದ್ಧಿ ಹೆಸರಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಮರಗಳನ್ನು ಹನನ ಮಾಡುವುದನ್ನು ನಿಲ್ಲಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಸಮಸ್ಯೆ ಇನ್ನಷ್ಟು ಉಲ್ಬಣಗೊಳ್ಳಲಿದೆ ಎಂದು ಎಚ್ಚರಿಕೆ ನೀಡಿದರು.

ಇದಕ್ಕೂ ಮುನ್ನ ಕಿರುರಂಗ ಮಂದಿರ ಆವರಣದಲ್ಲಿ ಗಿಡ ನೆಟ್ಟು ಪರಿಸರ ದಿನ ಆಚರಿಸಲಾಯಿತು. ಇದೆ ವೇಳೆ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಿರಿಯ ಪರಿಸರ ಅಧಿಕಾರಿ ವೈ.ಎಸ್.ಹರಿಶಂಕರ್ ವಹಿಸಿದ್ದರು.

> "ಇತ್ತೀಚಿನ ವರ್ಷಗಳಲ್ಲಿ ಪ್ಲಾಸ್ಟಿಕ್ ಹಾವಳಿ ಮಿತಿ ಮೀರಿದ ಪ್ರಮಾಣದಲ್ಲಿ ಪರಿಸರದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಯಾವುದೇ ಪ್ರವಾಸಿ ತಾಣಗಳಿಗೆ ಬರುವ ಪ್ರವಾಸಿಗರು ದಾರಿಯುದ್ದಕ್ಕೂ ವಾಹನಗಳಿಂದಲೇ ಪ್ಲಾಸ್ಟಿಕ್ ಬಾಟಲ್, ಪ್ಲಾಸ್ಟಿಕ್ ಪೇಪರ್ ಎಸೆದು ಹೋಗುತ್ತಿದ್ದಾರೆ. ಇದರಿಂದ ವನ್ಯಜೀವಿಗಳ ಹೊಟ್ಟೆಗೆ ಪ್ಲಾಸ್ಟಿಕ್ ಸೇರುತ್ತಿದೆ. ಪ್ಲಾಸ್ಟಿಕ್ ಬಾಟಲ್, ಏಕಬಳಕೆಯ ಪ್ಲಾಸ್ಟಿಕ್ ಕವರ್ ಬಳಕೆ ನಿಷೇಧಿಸಿದ್ದರೂ, ಜನ ಬಳಸುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ನ್ಯಾನೋ ಹಾಗೂ ಮೈಕ್ರೋ ಪ್ಲಾಸ್ಟಿಕ್ ನೀರು, ಗಾಳಿ ಮೂಲಕ ದೇಹ ಸೇರುತ್ತಿವೆ. ಇದರಿಂದ ಕ್ಯಾನ್ಸರ್ ಸೇರಿದಂತೆ ಇನ್ನಿತರ ಮಾರಕ ರೋಗಕ್ಕೆ ಜನ ತುತ್ತಾಗುತ್ತಿದ್ದಾರೆ. ಪರಿಸರ ಮಾಲಿನ್ಯದ ಪರಿಣಾಮ ಚಿಕ್ಕ ಮಕ್ಕಳಲ್ಲೇ ವಿವಿಧ ರೋಗದ ಬಾಧೆ ಕಾಡುತ್ತಿದೆ.
>
> –ನ್ಯಾ.ಬಿ.ಜಿ.ದಿನೇಶ್

ಕಾರ್ಯಕ್ರಮದಲ್ಲಿ ಇತಿಹಾಸಕಾರ ಧರ್ಮೇಂದ್ರ ಕುಮಾರ್, ಪರಿಸರ ಅಧಿಕಾರಿ ಕೆ.ಎಲ್.ಸವಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಎಸ್‌ಜೆಸಿಇ ಕಾಲೇಜಿನ ಉಪನ್ಯಾಸಕ ಬಿ.ಎಂ.ಸದಾಶಿವಮೂರ್ತಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಜಾಗತಿಕ ತಾಪಮಾನ ತಡೆಗಟ್ಟಲು ಗಿಡ-ಮರ ಬೆಳೆಸಿ



ಮೈಸೂರಿನ ನವ ಭಾರತ್ ನಿರ್ಮಾಣ ಸೇವಾ ಟ್ರಸ್ಟ್ ವತಿಯಿಂದ ವಿಶ್ವ ಪರಿಸರ ದಿನವನ್ನು ಆಚರಿಸಲಾಯಿತು.

ಮೈಸೂರು, ಜೂ.5(ಬಿಎಲ್‌ಯು)– ಮೈಸೂರಿನ ನವ ಭಾರತ್ ನಿರ್ಮಾಣ ಸೇವಾ ಟ್ರಸ್ಟ್ ವತಿಯಿಂದ ಇಂದು ವಿಶ್ವ ಪರಿಸರ ದಿನ ಆಚರಿಸಲಾಯಿತು.

ವಿಜಯನಗರ ರೈಲ್ವೆ ಬಡಾವಣೆಯಲ್ಲಿ ಗಿಡಗಳನ್ನು ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಪ್ರತಿ ವರ್ಷದಂತೆ ಈ ಬಾರಿ ಕೂಡ ಪಾರ್ಕ್ ಸೇರಿದಂತೆ ರಸ್ತೆ ಬದಿ ಗಿಡಗಳನ್ನು ನೆಡುವ ಕಾರ್ಯಕ್ರಮ ಆಯೋಜಿಸಲಾಗಿದ್ದು, ನಾಳೆಯಿಂದಲೇ ಇದು ಆರಂಭವಾಗಲಿದೆ.


ಈ ವೇಳೆ ಮಾತನಾಡಿದ ಟ್ರಸ್ಟ್ ಅಧ್ಯಕ್ಷ ಶ್ರೀಧರ್, ಇತ್ತೀಚೆಗೆ 43 ಡಿಗ್ರಿ ಸೆಲ್ಸಿಯಸ್‌ಗಿಂತಲೂ ಅಧಿಕ ಉಷ್ಣಾಂಶ ದಾಖಲಾಗಿತ್ತು. ಹವಾಮಾನ ವೈಪರೀತ್ಯದ ಕಾರಣ ನಾನಾ ಆರೋಗ್ಯ ಸಮಸ್ಯೆ ಕೂಡ ಎದುರಾಗುತ್ತಿದೆ. ಇದರಿಂದ ಈಗಲೇ ಎಚ್ಚೆತ್ತುಕೊಳ್ಳಬೇಕಾದ ಅನಿವಾರ್ಯತೆ ಇದೆ. ಈ ಹಿನ್ನೆಲೆ ಜಾಗತಿಕ ತಾಪಮಾನ ತಡೆಗಟ್ಟಲು ಗಿಡ ಮರ ಬೆಳೆಸಬೇಕು ಎಂದು ಸಲಹೆ ನೀಡಿದರು.

ವಾಹನಗಳಿಂದ ಮಾಲಿನ್ಯ ಉಂಟಾಗುವುದನ್ನು ತಡೆಗಟ್ಟುವುದು ಸೇರಿದಂತೆ ಹಲವು ಮುನ್ನೆಚ್ಚರಿಕಾ ಕ್ರಮಗಳಿಗೆ ಮುಂದಾಗಬೇಕು. ಪರಿಸರ ಉಳಿಸಲು ಕಾಡು ಸಂರಕ್ಷಿಸಬೇಕು ಎಂದು ಶ್ರೀಧರ್ ಹೇಳಿದರು.

ಹಲವು ವರ್ಷಗಳಿಂದ ತಮ್ಮ ಸಂಸ್ಥೆ ವತಿಯಿಂದ ಮೈಸೂರಿನಲ್ಲಿ ಅದರಲ್ಲೂ ಹೆಬ್ಬಾಳು, ವಿಜಯನಗರ ಇನ್ನಿತರೆ ಭಾಗದಲ್ಲಿ ಸಾವಿರಾರು ಗಿಡಗಳನ್ನು ನೆಡುವುದರ ಜೊತೆಗೆ ಅವುಗಳ ಸಂರಕ್ಷಣೆಗೆ ಟ್ರೀಕಾರ್ಡ್ ಅಳವಡಿಸುವ ಮೂಲಕ ಪರಿಸರ ಸಂರಕ್ಷಣೆ ಸಂದೇಶ ಸಾರುತ್ತಿದ್ದಾರೆ. ಇವರು ನೆಟ್ಟಿರುವಂತಹ ಸಾವಿರಾರು ಗಿಡಗಳು ಈಗ ಮರಗಳಾಗಿ ಜನ-ಜಾನುವಾರುಗಳಿಗೆ ಆಶ್ರಯವಾಗಿವೆ.

ಮೋದಿ ಸರ್ಕಾರ ಅಧಿಕಾರಕ್ಕೆ ಬಂದರೂ ಹೆಚ್ಚು ದಿನ ಉಳಿಯಲ್ಲ

ನೂತನ ಸಂಸದ ಸುನೀಲ್ ಬೋಸ್ ಅವರನ್ನು ಸನ್ಮಾನಿಸಿ, ಮಾಜಿ ಶಾಸಕ ಯತೀಂದ್ರ ಭವಿಷ್ಯ



ಮೈಸೂರು, ಜೂ.5(ಬಿಎಲ್‌ಯು)– ಒಂದು ವೇಳೆ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ಸರ್ಕಾರ ಅಧಿಕಾರಕ್ಕೆ ಬಂದರೂ ಹೆಚ್ಚು ದಿನ ಉಳಿಯುವುದಿಲ್ಲ ಎಂದು ಮಾಜಿ ಶಾಸಕ ಯತೀಂದ್ರ ಭವಿಷ್ಯ ನುಡಿದಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಇಂದು ನೂತನ ಸಂಸದ ಸುನೀಲ್ ಬೋಸ್‌ಗೆ ಕಾಂಗ್ರೆಸ್ ಪಕ್ಷ ಆಯೋಜಿಸಿದ್ದ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, ರಾಜಕೀಯ ಕಾರಣಗಳಿಂದ ಎನ್‌ಡಿಎ ಸರ್ಕಾರ ಪತನವಾದರೆ, ಕಾಂಗ್ರೆಸ್ ನೇತೃತ್ವದ ಇಂಡಿಯಾ ಒಕ್ಕೂಟ ಸರ್ಕಾರ ಅಧಿಕಾರಕ್ಕೆ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕೇಂದ್ರದಲ್ಲಿ ಅಧಿಕಾರದಲ್ಲಿದ್ದಷ್ಟು ದಿನ ಬಿಜೆಪಿಯವರು ಐಟಿ, ಇಡಿ ಸೇರಿದಂತೆ ಇತರೆ ಸಂವಿಧಾನಿಕ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಂಡರು. ಈ ಮೂಲಕ ವಿಪಕ್ಷಗಳ ದಮನ ಮಾಡುವ ಚಟುವಟಿಕೆಗಳ ನಡೆಸಿದರು. ಇಂತಹ ವರ್ತನೆ ತೋರಿದ ಮೋದಿ ಸರ್ಕಾರದ ದುರಾಡಳಿತಕ್ಕೆ ಈ ಲೋಕಸಭಾ ಚುನಾವಣೆಯಲ್ಲಿ ಜನರು ತಕ್ಕ ಪಾಠ ಕಲಿಸಿದ್ದಾರೆ. ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಗೆಲುವು ಸಾಧಿಸಲು ಪ್ರಯತ್ನ ಪಟ್ಟೆವು. ಆದರೆ ಅದು ಸಾಧ್ಯವಾಗಲಿಲ್ಲ ಎಂದು ಯತೀಂದ್ರ ಅಸಮಾಧಾನ ವ್ಯಕ್ತಪಡಿಸಿದರು.

ಗ್ರಾಪಂ ಸದಸ್ಯನೂ ಆಗದೇ ನೇರ ಸಂಸದ: ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಹೆಚ್ಚು ಸ್ಥಾನ ಗೆಲ್ಲಲು ಸಾಧ್ಯವಾಗಲಿಲ್ಲ. ಬಿಜೆಪಿಯವರ ಕೋಮುವಾದಕ್ಕೆ ಜನರು ತಕ್ಕ ಪಾಠ ಕಲಿಸಿದ್ದಾರೆ ಎಂದು ಮಾಜಿ ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಟೀಕಿಸಿದರು.

ಗ್ರಾಮ ಪಂಚಾಯಿತಿ ಸದಸ್ಯ ಕೂಡ ಆಗದೆ ನೇರವಾಗಿ ಸುನೀಲ್ ಬೋಸ್ ಲೋಕಸಭೆ ಪ್ರವೇಶಿಸಿದ್ದಾರೆ. ಈಗ ಸಿಕ್ಕಿರುವ ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಜನಸೇವೆಯ ಮೂಲಕ ದೀರ್ಘ ಕಾಲದ ತನಕ ಅಧಿಕಾರ ಉಳಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಶ್ರೀನಿವಾಸಪ್ರಸಾದ್ ನನ್ನ ಗೆಲ್ಲಿಸುವಂತೆ ಕಾರ್ಯಕರ್ತರಿಗೆ ಕರೆ ನೀಡಿದ್ದರು

ಚಾಮರಾಜನಗರ ಲೋಕಸಭಾ ಕ್ಷೇತ್ರದ ನೂತನ ಸಂಸದ ಸುನೀಲ್ ಬೋಸ್, ಚುನಾವಣೆ ವೇಳೆ ನನ್ನ ವಿರುದ್ಧ ವಿರೋಧಿಗಳು ಅಪಪ್ರಚಾರ ಮಾಡಿದರು. ಸೋಷಿಯಲ್ ಮೀಡಿಯಾದಲ್ಲಿ ಅವುಗಳನ್ನು ವೈರಲ್ ಮಾಡಿದರು. ಆದರೆ ಚಾಮರಾಜನಗರ ಲೋಕಸಭಾ ಕ್ಷೇತ್ರದ ಜನರು ಅದನ್ನೆಲ್ಲಾ ನಂಬದೆ ನನ್ನನ್ನು ಬೆಂಬಲಿಸಿದ್ದಾರೆ. ನನ್ನ ಗೆಲುವಿಗೆ ಗ್ಯಾರಂಟಿ ಯೋಜನೆಗಳು ಕೂಡ ಕಾರಣವಾಗಿವೆ ಎಂದರು. ಈಗ ಗೆಲುವು ಸಾಧಿಸಿದ್ದೇನೆ. ಆದರೆ ಜನರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡುವ ದೊಡ್ಡ ಜವಾಬ್ದಾರಿ ನನ್ನ ಮೇಲಿದೆ. ಅದನ್ನು ಸಮರ್ಥವಾಗಿ ಮಾಡುತ್ತೇನೆ ಎಂಬ ವಿಶ್ವಾಸವಿದೆ. ಶ್ರೀನಿವಾಸ ಪ್ರಸಾದ್ ಈ ಕ್ಷೇತ್ರ ಪ್ರತಿನಿಧಿಸಿದ್ದರು. ಕೊನೆಯ ದಿನಗಳಲ್ಲಿ ನನ್ನ ಗೆಲುವಿಗೆ ಶ್ರೀನಿವಾಸ ಪ್ರಸಾದ್ ಆಶೀರ್ವಾದ ಮಾಡಿದ್ದರು. ನನ್ನನ್ನು ಗೆಲ್ಲಿಸುವಂತೆ ತಮ್ಮ ಕಾರ್ಯಕರ್ತರಿಗೆ ಕರೆ ನೀಡಿದ್ದರು. ಈ ಕಾರಣದಿಂದ ಕೂಡ ನಾನು ಗೆಲುವು ಸಾಧಿಸಲು ಸಾಧ್ಯವಾಯಿತು ಎಂದರು. ನನಗೆ ಟಿಕೆಟ್ ಸಿಗಲು ಯತೀಂದ್ರ ಹೈಕಮಾಂಡ್‌ಗೆ ಒತ್ತಡ ಹೇರಿದ್ದರು. ತರುವಾಯ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆಶೀರ್ವಾದ ಮಾಡಿ, ಟಿಕೆಟ್ ನೀಡಿದರು. ಕಾಂಗ್ರೆಸ್ ಕಾರ್ಯಕರ್ತರೆಲ್ಲಾ ಸೇರಿ ಒಗ್ಗಟ್ಟಿನಿಂದ ಚುನಾವಣೆ ನಡೆಸಿದ್ದರು. ಕ್ಷೇತ್ರದ ಕಾಂಗ್ರೆಸ್ ಶಾಸಕರು ನನ್ನ ಗೆಲುವಿಗೆ ಶ್ರಮಿಸಿದ್ದರು. ಇದರಿಂದ ನಾನು ಗೆದ್ದೆ ಗೆಲ್ಲುತ್ತೇನೆ ಎಂಬ ವಿಶ್ವಾಸವಿತ್ತು ಎಂದು ಸುನೀಲ್ ಬೋಸ್ ತಿಳಿಸಿದರು.

ಗಿಡ ನೆಡುವ ಕಾರ್ಯಕ್ರಮ



ಮೈಸೂರಿನ ಪಿಂಜರಾಪೋಲ್ ಸೊಸೈಟಿ ಆವರಣದಲ್ಲಿ ಬುಧವಾರ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ 200 ಗಿಡಗಳನ್ನು ನೆಡಲಾಯಿತು.

ಮೈಸೂರು, ಜೂ.5(ಬಿಎಲ್‌ಯು)– ಮೈಸೂರಿನ ಪಿಂಜರಾಪೋಲ್ ಸೊಸೈಟಿ ಆವರಣದಲ್ಲಿ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮ ಆಯೋಜಿಸಲಾಗಿತ್ತು. ವಿಶ್ವ ಪರಿಸರ ದಿನಾಚರಣೆ ಅಂಗವಾಗಿ 200 ಗಿಡಗಳನ್ನು ನೆಡಲಾಯಿತು.

ಈ ವೇಳೆ ಮಾತನಾಡಿದ ಲೇಖಕ ಡಾ.ಕಾಳಚೆನ್ನೇಗೌಡ, ಗೃಹಪ್ರವೇಶ ಸೇರಿದಂತೆ ಇತರೆ ಶುಭ ಸಮಾರಂಭದ ಸಂಕೇತವಾಗಿ ಒಂದೊಂದು ಗಿಡ ನೆಟ್ಟು ಬೆಳೆಸುವ ಅಭ್ಯಾಸ ರೂಢಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಹೀಗೆ ಗಿಡಗಳನ್ನು ಬೆಳೆಸಿದರೆ ಮತ್ತಷ್ಟು ಹಸಿರು ಹೆಚ್ಚಿಸಬಹುದು ಎಂದು ಅಭಿಪ್ರಾಯಪಟ್ಟರು. ಈ ವೇಳೆ ಪಿಂಜಾರಾಪೋಲ್‌ನ ಸುಮತಿಲಾಲ್ ಪಗಾರಿಯಾ, ಪ್ರವೀಣ್ ಲುಂಕರ್ ಹಾಗೂ ರಾಗಿಣಿ ಆಲನಹಳ್ಳಿ ಹಾಜರಿದ್ದರು. ಭಾರತೀಯ ಜೈನ ಸಂಘಟನೆಯ ಪರಿಸರ ಬಳಗ, ಪಿಂಜರಾಪೋಲ್ ಸೊಸೈಟಿ, ಕ್ಲೀನ್ ಮೈಸೂರು ಫೌಂಡೇಷನ್, ಪರಿಸರಕ್ಕಾಗಿ ನಾವು ಸಂಘಟನೆ ಹಾಗೂ ಪ್ರಗತಿ ಒಕ್ಕಲಿಗ ಮಹಿಳಾ ಸಂಘ ಸಂಯುಕ್ತವಾಗಿ ಕಾರ್ಯಕ್ರಮ ಆಯೋಜಿಸಿತ್ತು.

ಮೋದಿ ಸೋತಿದ್ದಾರೆ, ಇಂಡಿಯಾ ಒಕ್ಕೂಟ ಗೆದ್ದಿದೆ

- ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಅಭಿಪ್ರಾಯ
- ಎನ್‌ಡಿಎ ಸರ್ಕಾರ ಉಳಿಯಲ್ಲ



ಮೈಸೂರು, ಜೂ.5(ಜಿಎ)–ಈ ಬಾರಿ ಲೋಕಸಭಾ ಚುನಾವಣೆ ವೇಳೆ ಗಂಭೀರವಾದ ಫಲಿತಾಂಶ ಬಂದಿದೆ. ಎನ್‌ಡಿಎ ಅಧಿಕಾರ ಹಿಡಿಯುವಷ್ಟು ಸ್ಥಾನ ಗಳಿಸಿದೆ. ಅದರೆ ನರೇಂದ್ರ ಮೋದಿ ಒಂದರ್ಥದಲ್ಲಿ ಸೋತಿದ್ದು, ಇಂಡಿಯಾ ಒಕ್ಕೂಟ ವಾಸ್ತವವಾಗಿ ಗೆದ್ದಿದೆ ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿಯ ಚುನಾವಣೆ ಜನರು ಮತ್ತು ಸರ್ವಾಧಿಕಾರಿ ನಡುವೆ ನಡೆದ ಚುನಾವಣೆಯಾಗಿತ್ತು. ಜನರು ಪ್ರಜಾಪ್ರಭುತ್ವ ಉಳಿಸಿಕೊಟ್ಟಿದ್ದಾರೆ. ಬಹುಕಾಲ ನಾವೇ ಅಧಿಕಾರದಲ್ಲಿರುತ್ತೇವೆ. 400ಕ್ಕೂ ಅಧಿಕ ಸ್ಥಾನ ಪಡೆದುಕೊಳ್ಳುತ್ತೇವೆ ಎಂದು ಹೇಳುತ್ತಿದ್ದರು. ಆದರೆ, ಕಡಿಮೆ ಸ್ಥಾನ ನೀಡುವ ಮೂಲಕ ಜನರು ತಿರಸ್ಕರಿಸಿದ್ದಾರೆ. ಈ ಹಿಂದೆ ಯುಪಿಎ ಭ್ರಷ್ಟಾಚಾರ, ಪುಲ್ವಾಮಾ ದಾಳಿ ಅಸ್ತ್ರ ಬಳಸಿ ಗೆದ್ದಿತ್ತು. ಆದರೆ ಈ ಬಾರಿ ಅದು ಆಗಲಿಲ್ಲ. ಎನ್‌ಡಿಎ ಅಧಿಕಾರ ಆರಂಭಿಸಿದರೂ ದೀರ್ಘಕಾಲ ಉಳಿಯುವುದಿಲ್ಲ. ನಾಯಕರ ಆಲೋಚನೆ, ಸಿದ್ಧಾಂತ ಬೇರೆಯಾಗಿದೆ ಎಂದರು.

ಈಗ ಚುನಾವಣೆ ಕಾರಣದಿಂದಾಗಿ ದೇಶದಲ್ಲಿ ಜಾತಿ ಧ್ರುವೀಕರಣ, ಕೋಮುವಾದ ಧ್ರುವೀಕರಣ ಆಗಿದೆ. ಹೀಗಾಗಿ ರಾಜ್ಯದ ಕಾಂಗ್ರೆಸ್ ಸರ್ಕಾರ ಇದನ್ನು ಎದುರಿಸಲೆಂದು ಜನತೆಯ ನೈಜ ಸಮಸ್ಯೆ, ರೈತರ ಸಂಕಷ್ಟ, ಜನಪರ ನೀತಿಗಳತ್ತ ಗಮನಹರಿಸಬೇಕು. ಭೂಸುಧಾರಣಾ ಕಾಯ್ದೆ ಕೂಡಲೇ ರದ್ದುಗೊಳಿಸಬೇಕು. ವಿದ್ಯುತ್ ಸಂಪರ್ಕ ಪಡೆಯುವುದು, ಶುಲ್ಕ ಮೊದಲಾದವು ದುಬಾರಿಯಾಗಿವೆ. ಈ ಬಗ್ಗೆ ಗಮನ ಹರಿಸಬೇಕು. ರೈತರಿಗೆ ಕೇಂದ್ರದಿಂದ ಕಡಿಮೆ ಬರ ಪರಿಹಾರದ ಮೊತ್ತ ಬಂದಿದೆ. ಆದರೂ ರಾಜ್ಯ ಸರ್ಕಾರ ಮಧ್ಯಮ ವರ್ಗದವರನ್ನು ಹೊರತುಪಡಿಸಿ, ಬಂಡವಾಳಶಾಹಿಗಳ ಮೇಲೆ ಹೆಚ್ಚಿನ ಕಾರ್ಪೊರೇಟ್ ತೆರಿಗೆ ವಿಧಿಸುವ ಅವಕಾಶದ ಮೂಲಕ ರೈತರ ನೆರವಿಗೆ ಬರಬೇಕೆಂದು ಸಲಹೆ ನೀಡಿದರು.

ಯಾವುದೇ ಪಕ್ಷ ಅಧಿಕಾರದಲ್ಲಿದ್ದರೂ ತಮ್ಮ ಸಂಘಟನೆ ಹೋರಾಟ ಮುಂದುವರಿಯುತ್ತದೆ. ಇನ್ನು, ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಸರ್ವೋದಯ ಕರ್ನಾಟಕ ಮೊದಲಾದ ಪಕ್ಷಗಳ ನೆರವಿನಿಂದ ತನ್ನ ಅಸ್ತಿತ್ವ ತೋರಿಸಲಿದೆ ಎಂದರು.

ಹೊಸೂರು ಕುಮಾರ್ ಮಾತನಾಡಿ, ರೈತರು ರಾಗಿ ಖರೀದಿ ಕೇಂದ್ರಕ್ಕೆ ರಾಗಿ ನೀಡಿ ಮಾರಾಟ ಮಾಡಿ ಮೂರು ತಿಂಗಳಾಗಿದ್ದರೂ ಇನ್ನೂ ಹಣ ಬಂದಿಲ್ಲ. ಹೀಗಾಗಿ ಇದೇ ಹತ್ತರ ಮುನ್ನ ಬರದಿದ್ದರೆ ಡಿಸಿ ಕಚೇರಿ ಎದುರು ಹೋರಾಟ ನಡೆಸಬೇಕಾಗುತ್ತದೆಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಶ್ಯಾನುಭೋಗನಹಳ್ಳಿ ಈಶ್ವರ್, ನಾಗನಹಳ್ಳಿ ವಿಜೇಂದ್ರ ಉಪಸ್ಥಿತರಿದ್ದರು.

ಕಾ.ಪು.ಸಿದ್ದಲಿಂಗಸ್ವಾಮಿ ನಿಧನ



ಮೈಸೂರು, ಜೂ.5– ಬಿಜೆಪಿ ಹಿರಿಯ ಮುಖಂಡ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಆಪ್ತ ಸಹಾಯಕರಾಗಿದ್ದ ಕಾ.ಪು.ಸಿದ್ದಲಿಂಗಸ್ವಾಮಿ(56) ಅವರು ಬುಧವಾರ ರಾತ್ರಿ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಯಡಿಯೂರಪ್ಪ ಅವರ ಆಪ್ತರಾಗಿದ್ದ ಅವರು 2013ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ವರುಣ ಕ್ಷೇತ್ರದಲ್ಲಿ ಕೆಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಭವಗೊಂಡಿದ್ದರು. ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ, ರಾಜ್ಯ ಬಿಜೆಪಿ ರೈತ ಮೋರ್ಚಾ ಉಪಾಧ್ಯಕ್ಷರಾಗಿ ಪಕ್ಷದ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ಮೃತರು ತಂದೆ ಕೆ.ಸಿ.ಪುಟ್ಟಸ್ವಾಮಪ್ಪ, ಸಹೋದರ ಜಿಪಂ ಮಾಜಿ ಅಧ್ಯಕ್ಷ ಕಾ.ಪು.ಸಿದ್ದವೀರಪ್ಪ, ಸಹೋದರಿ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಇವರ ನಿಧನಕ್ಕೆ ಚಾಮರಾಜನಗರ ವಕೀಲರ ಸಂಘದ ಮಾಜಿ ಅಧ್ಯಕ್ಷ ಇಂದುಶೇಖರ್ ಸಂತಾಪ ಸೂಚಿಸಿದ್ದಾರೆ.

ನಾಳೆ (ಜೂ.6) ಬೆಳಗ್ಗೆ 8 ಗಂಟೆವರೆಗೆ ಮೈಸೂರಿನ ಜೆಪಿ ನಗರದಲ್ಲಿರುವ ಅವರ ನಿವಾಸದಲ್ಲಿ ಪಾರ್ಥಿವ ಶರೀರವನ್ನು ಸಾರ್ವಜನಿಕರ ದರ್ಶನಕ್ಕೆ ಇಡಲಾಗುವುದು. ಸಂಜೆ 4 ಗಂಟೆಗೆ ಅವರ ಸ್ವಗ್ರಾಮವಾದ ಕಾರ್ಯದಲ್ಲಿ ಇರುವ ತೋಟದ ಮನೆಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಯದುವೀರ್ ಅವರಿಗೆ ಅಭಿನಂದನೆ



ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ನೂತನ ಸಂಸದ ಯದುವೀರ್ ಅವರನ್ನು ಮೈಸೂರು ಮಹಾನಗರಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು, ಬಾಬಣ್ಣ, ಮುದ್ದುರಾಜ್, ಮಹೇಶ್‌ರಾಜೇಶ್ ಅರಸ್ ಅಭಿನಂದಿಸಿದರು.

ಅಯೋಧ್ಯೆಯ ರಾಮನ ಹೆಸರಲ್ಲಿ ಚುನಾವಣೆ ನಡೆಸಲು ಸಾಧ್ಯವಿಲ್ಲ ಎಂದು ಮತದಾರರು ಎಚ್ಚರಿಸಿದ್ದಾರೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಎಂಎಲ್‌ಸಿ ಹೆಚ್.ವಿಶ್ವನಾಥ್ ಮಾತನಾಡಿದರು.

ಮೈಸೂರು, ಜೂ.5(ಜಿಎ)–ಅಯೋಧ್ಯೆ ರಾಮನ ಹೆಸರಿನಲ್ಲಿ ಚುನಾವಣೆ ಮಾಡಲು ಸಾಧ್ಯವಿಲ್ಲ ಎಂದು ಮತದಾರರು ಈ ಚುನಾವಣೆಯಲ್ಲಿ ಎಚ್ಚರಿಸಿದ್ದಾರೆ ಎಂದು ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚುನಾವಣೆಗೂ ಮುನ್ನ ಏನೆಲ್ಲ ಮಾತುಗಳನ್ನು ಆಡಿದವರಿದ್ದಾರೆ. ಧರ್ಮ, ರಾಮ ಎಂದರು. ಆದರೆ, ಜನ ಅದನ್ನು ಒಪ್ಪುವುದಿಲ್ಲ ಎಂಬುದು ಸ್ವತಃ ಅಯೋಧ್ಯೆಯ ಫಲಿತಾಂಶದಿಂದಲೇ ಸಾಬೀತಾಗಿದೆ ಎಂದರು.

ಯದುವಂಶದವರು ಚುನಾವಣೆಗೆ ಸ್ಪರ್ಧಿಸುತ್ತಿದ್ದಾರೆ ಎಂದಾಗ ಮುಖ್ಯಮಂತ್ರಿಗಳು ಮತ್ತು ಕೆಪಿಸಿಸಿ ಅಧ್ಯಕ್ಷ ಡಿಕೆಶಿ ಅವರಿಗೆ ಕಾಂಗ್ರೆಸ್‌ನಿಂದ ಯಾರನ್ನೂ ಕಣಕ್ಕಿಳಿಸದಂತೆ ಬಹಿರಂಗವಾಗಿ ಮನವಿ ಮಾಡಿದ್ದೆ. ಆದರೆ ಅವರು ಕೇಳಲಿಲ್ಲ. ಜಾತಿ ಮೊದಲಾದ ಲೆಕ್ಕಾಚಾರ ಹಾಕಿದರು. ಮಹಾರಾಜರಿಗೆ ಯಾವುದೇ ಪಕ್ಷ, ಜಾತಿ ಧರ್ಮದ ಅಡ್ಡಿಯಾಗಲಿಲ್ಲ. ಅವರು ಈಗ 1 ಲಕ್ಷಕ್ಕೂ ಹೆಚ್ಚು ಮತಗಳ ಅಂತರದಿಂದ ಗೆದ್ದಿದ್ದಾರೆ. ಮುಖ್ಯಮಂತ್ರಿಗಳು ಮೈಸೂರಲ್ಲಿ 12 ದಿನ ಕ್ಯಾಂಪ್ ಹಾಕಿ ಮಲಗಿದ್ದರು. ಅದರಿಂದ ಏನಾಯಿತು, ಅವರ ದುರಹಂಕಾರದಿಂದ ಏನೂ ಆಗುವುದಿಲ್ಲ. ಈ ಬಾರಿ ಕಾಂಗ್ರೆಸ್ 9 ಸ್ಥಾನ ಗಳಿಸಿದ್ದರೂ, ಇದರಲ್ಲಿ ಮಂತ್ರಿಗಳ ಮಕ್ಕಳು ಸೇರಿದ್ದಾರೆ. ಹೀಗಾಗಿ ಸರ್ಕಾರದ ನಡವಳಿಕೆಯನ್ನು ಜನರು ನೋಡುತ್ತಾರೆ. ಜನರನ್ನು ಏಕವಚನದಲ್ಲಿ ಮಾತನಾಡುವುದನ್ನು ಸಿಎಂ ನಿಲ್ಲಿಸಲಿ ಎಂದರು.

ನೂತನ ಸಂಸದ ಯದುವೀರ್ ಕುರಿತಂತೆ ಜನತೆಗೆ ಸಾಕಷ್ಟು ನಿರೀಕ್ಷೆಗಳಿವೆ. ಮೈಸೂರಿನ ಪ್ರವಾಸೋದ್ಯಮಕ್ಕೆ ಹೆಚ್ಚು ಒತ್ತು ನೀಡಿ. ಜಗತ್ತಿನ ಜನ ಮತ್ತೆ ಇಲ್ಲಿಗೆ ಬರುವಂತೆ ಮಾಡಬೇಕು. ಇದರಿಂದ ಜನರ ಹೊಟ್ಟೆ ತುಂಬುತ್ತದೆ. ನಿಮ್ಮ ಮೇಲೆ ಬಹಳ ಜವಾಬ್ದಾರಿ ಇದೆ. ನೆಲ, ಜಲ, ಸೇರಿದಂತೆ ರಾಜ್ಯದ ಬಗ್ಗೆ ಗಮನಿಸಿ ಎಂದು ವಿಶ್ವನಾಥ್ ತಿಳಿಸಿದರು.

ಪ್ರಧಾನಮಂತ್ರಿ ಮೋದಿ ಮಹಾತ್ಮ ಗಾಂಧಿ ಬಗ್ಗೆ ಹಗುರವಾಗಿ ಮಾತನಾಡಬಾರದು. ಮನಸನ್ನು ಒಡೆಯುವ, ಧರ್ಮ ಧರ್ಮಗಳನ್ನು ಒಡೆಯುವ ರೀತಿಯ ಮಾತು ಬೇಡ. ಇದೇ ವೇಳೆ ಯದುವೀರ್ ಜನರ ವಿಶ್ವಾಸದ ಅಲೆಯಿಂದ ಗೆದ್ದಿದ್ದಾರೆ ಹೊರತು ಬೇರೆ ಯಾವುದೇ ಅಲೆಯಿಂದಲ್ಲ ಎಂದರು.

ಇದೇ ಸಂದರ್ಭದಲ್ಲಿ ಸುದ್ದಿಗಾರರು ಹಾಸನದ ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣ ಕುರಿತಂತೆ ಕೇಳಿದ ಪ್ರಶ್ನೆಗೆ, 'ಯಾಕ್ರೀ ಅವನು ಈಗ ಅವನ ಬಗ್ಗೆ ಮಾತು ಬೇಡ, ದೇಶದ ಬಗ್ಗೆ ಯೋಚಿಸಿ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಪಂಚಾಯತ್ ಮಾಜಿ ಉಪಾಧ್ಯಕ್ಷ ಎ.ಎಸ್. ಚನ್ನಬಸಪ್ಪ ಉಪಸ್ಥಿತರಿದ್ದರು.

ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಅಭಿಮತ

"ರಾಜ್ಯದಿಂದ ಲೋಕಸಭೆಗೆ ಆಯ್ಕೆಗೊಂಡಿರುವ ನೂತನ ಸಂಸದರು ರಾಜ್ಯದ ಅಭಿವೃದ್ಧಿಗೆ ಒಟ್ಟಾಗಿ ಶ್ರಮಿಸಿ, ಕಳೆದ ಅವಧಿಯಲ್ಲಿ ರಾಜ್ಯದಿಂದ ಲೋಕಸಭೆಗೆ ಆಯ್ಕೆಯಾಗಿದ್ದವರು ನಾಡು, ಜಲ, ಅಭಿವೃದ್ಧಿ ವಿಷಯ ಕುರಿತಂತೆ ಪ್ರಧಾನಿಯನ್ನು ಭೇಟಿ ಮಾಡಿ, ಕೇಂದ್ರದ ಮೇಲೆ ಒತ್ತಡ ಹೇರುವ ಕೆಲಸ ಮಾಡಲಿಲ್ಲ. ಆದರೆ ಈಗ ಆಯ್ಕೆಯಾಗಿರುವವರು ರಾಜ್ಯದ ಹಿತ ಕಾಯುವ ಕೆಲಸ ಮಾಡಲಿ. ರಾಜ್ಯ 28 ಸಂಸದರು ಪಕ್ಷಾತೀತವಾಗಿ ರಾಜ್ಯದ ಸಮಸ್ಯೆಗಳನ್ನು ಕೇಂದ್ರದಲ್ಲಿ ತಿಳಿಸಿ ಪರಿಹಾರ ಪಡೆದುಕೊಳ್ಳಬೇಕು ಎಂಬುದು ನಮ್ಮ ಆಶಯ. ಈ ಬಾರಿ ಎಚ್.ಡಿ. ಕುಮಾರಸ್ವಾಮಿ, ಬಸವರಾಜ ಬೊಮ್ಮಾಯಿ ಮತ್ತು ಜಗದೀಶ್ ಶೆಟ್ಟರ್ ಮೂವರು ಮಾಜಿ ಸಿಎಂಗಳು ರಾಜ್ಯ ಸಮಸ್ಯೆಗಳ ಬಗ್ಗೆ ಗಮನಹರಿಸಲಿ.**–ಎ.ಹೆಚ್.ವಿಶ್ವನಾಥ್**

ಟಿ20 ವಿಶ್ವಕಪ್ ಪಂದ್ಯಾವಳಿ

ಭಾರತ ಶುಭಾರಂಭ

ಐರ್ಲೆಂಡ್ ವಿರುದ್ಧ 8 ವಿಕೆಟ್ ಜಯ




ನ್ಯೂಯಾರ್ಕ್, ಜೂ.5– ವೆಸ್ಟ್ ಇಂಡಿಸ್ ಮತ್ತು ಅಮೆರಿಕಾ ಜಂಟಿ ಆತಿಥ್ಯದಲ್ಲಿ ನಡೆಯುತ್ತಿರುವ 9ನೇ ಆವೃತ್ತಿಯ ಐಸಿಸಿ ಟಿ20 ವಿಶ್ವಕಪ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾರತ ತಂಡ ಐರ್ಲೆಂಡ್ ವಿರುದ್ಧ 8 ವಿಕೆಟ್‌ಗಳ ಜಯದೊಂದಿಗೆ ಟೂರ್ನಿಯಲ್ಲಿ ಶುಭಾರಂಭ ಮಾಡಿದೆ.

ಟಾಸ್ ಗೆದ್ದ ಭಾರತ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮೊದಲು ಬ್ಯಾಟಿಂಗ್ ಮಾಡಿದ ಐರ್ಲೆಂಡ್, ಭಾರತದ ಬೌಲರ್‌ಗಳ ದಾಳಿಗೆ ತತ್ತರಿಸಿತು. 16 ಓವರ್‌ಗಳಿಗೆ ಕೇವಲ 96 ರನ್‌ಗಳಿಗೆ ಆಲೌಟ್ ಆಯಿತು. ಐರ್ಲೆಂಡ್ ಪರ ಗೆಲಾನಿ 26 ರನ್ ಗಳಿಸಿದ್ದು ಬಿಟ್ಟರೆ, ಉಳಿದೆಲ್ಲಾ ಬ್ಯಾಟ್ಸ್‌ಮನ್‌ಗಳು ಪೆವಿಲಿಯನ್ ಪರೇಡ್ ನಡೆಸಿದರು. ಭಾರತದ ಪರ ಹಾರ್ದಿಕ್ ಪಾಂಡ್ಯ ಮೂರು ವಿಕೆಟ್ ಪಡೆದರೆ, ಅರ್ಷದೀಪ್ ಸಿಂಗ್, ಜಸ್ಪ್ರೀತ್ ಬುಮ್ರಾ ತಲಾ 2 ವಿಕೆಟ್ ಪಡೆದು ಮಿಂಚಿದರು.

97 ರನ್‌ಗಳ ಸಾಧಾರಣ ಗುರಿ ಬೆನ್ನತ್ತಿದ ಭಾರತ ತಂಡ 12.2 ಓವರ್‌ಗಳಲ್ಲಿ 2 ವಿಕೆಟ್ ಕಳೆದುಕೊಂಡು ಗೆಲುವಿನ ನಗೆ ಬೀರಿತು. ನಾಯಕ ರೋಹಿತ್ ಶರ್ಮಾ 37 ಎಸೆತಗಳಲ್ಲಿ 3 ಸಿಕ್ಸ್, 4 ಬೌಂಡರಿ ಸಹಿತ 52 ರನ್ ಗಳಿಸುವ ಮೂಲಕ ಟೂರ್ನಿಯ ಮೊದಲ ಪಂದ್ಯದಲ್ಲೇ ಅರ್ಧ ಶತಕಗಳಿಸಿ ಮಿಂಚಿದರೆ, ಅನುಭವಿ ವಿರಾಟ್ ಕೊಹ್ಲಿ 1, ಸೂರ್ಯಕುಮಾರ್ ಯಾದವ್ 2 ರನ್ ಗಳಿಸಿದ್ದ ವೇಳೆ ಕ್ಯಾಚ್ ನೀಡಿ ಅಭಿಮಾನಿಗಳಿಗೆ ನಿರಾಸೆ ಉಂಟು ಮಾಡಿದರು. ಬಳಿಕ ಎಚ್ಚರಿಕೆಯ ಆಟವಾಡಿದ ವಿಕೆಟ್ ಕೀಪರ್ ರಿಷಭ್ ಪಂತ್ 26 ಎಸೆತಗಳಲ್ಲಿ 2 ಸಿಕ್ಸ್, 3 ಬೌಂಡರಿ ಸಹಿತ ಅಜೇಯ 36 ರನ್‌ಗಳಿಸಿ ಗೆಲುವಿನ ದಡ ಸೇರಿಸಿದರು. ಐರ್ಲೆಂಡ್ ಪರ ಬೆಂಜಮಿನ್ ವೈಟ್, ಮಾರ್ಕ್ ಅಡೇರ್ ತಲಾ 1 ವಿಕೆಟ್ ಪಡೆದರು. 3 ಓವರ್ ಬೌಲಿಂಗ್ ಮಾಡಿ 2 ವಿಕೆಟ್ ಪಡೆದು ಕೇವಲ 6 ರನ್ ಬಿಟ್ಟುಕೊಟ್ಟ ಜಸ್ಪ್ರೀತ್ ಬುಮ್ರಾ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

6.06.2024 ಗುರುವಾರ, ಮಳೆ ನಕ್ಷತ್ರ: ರೋಹಿಣಿ, 25.05.2024ರಿಂದ 07.06.2024 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ಅಮಾವಾಸ್ಯೆ, ನಕ್ಷತ್ರ: ರೋಹಿಣಿ ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆವರೆಗೆ

- **ಶ್ರೀ ರಾಮಕೃಷ್ಣ ಆಶ್ರಮ:** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ
- **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10ರಿಂದ
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಹೈಪೋಥೈರಾಯ್ಡಿಸಮ್ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರಂ ರಸ್ತೆ, ಬೆಳಗ್ಗೆ 9 ಗಂಟೆಯಿಂದ.
- **ಜಗದ್ಗುರು ಶ್ರೀ ಮನ್ಮಧ್ವಾಚಾರ್ಯ ಮೂಲ ಮಹಾ ಸಂಸ್ಥಾನ ಶ್ರೀ ರಾಜೇಂದ್ರ ತೀರ್ಥಿಯ ಪೂರ್ವಾದಿ ಮಠ, ಮುನಿತ್ರಯ ಪೀಠ, ಶ್ರೀ ವ್ಯಾಸರಾಜ ಮಠ (ಸೋಸಲೆ) ಶ್ರೀ ವ್ಯಾಸತೀರ್ಥ ವಿದ್ಯಾಪೀಠ:** ಶ್ರೀ ಮದ್ಬ್ರಹ್ಮ ಸೂತ್ರ-ಶ್ರೀಮದುನ ವ್ಯಾಖ್ಯಾನ-ಸಹಿತ ಶ್ರೀ ಮನ್ನ್ಯಾಯ ಸುಧಾ ಮಂಗಳ ಮಹೋತ್ಸವ ಶ್ರೀ ಮನ್ನ್ಯಾಯ ಸುಧಾ ಪರೀಕ್ಷೆ ಹಾಗೂ ಶ್ರೀ ಶ್ರೀ 1008 ಶ್ರೀ ವಿದ್ಯಾಶ್ರೀಶ ತೀರ್ಥ ಶ್ರೀಪಾದರ ಸಹಸ್ರಚಂದ್ರ ದರ್ಶನ ಶಾಂತಿ ಮಹೋತ್ಸವ, ಬೆಳಗ್ಗೆ 6ಕ್ಕೆ ವೈಶಾಖ ಕೃಷ್ಣ ಅಮಾವಾಸ್ಯೆ, ಸಂಸ್ಥಾನಪೂಜೆ, ಬೆಳಗ್ಗೆ 9ರಿಂದ. ಮಧ್ಯಾಹ್ನ 12 ಮತ್ತು ಮಧ್ಯಾಹ್ನ 2.30ರಿಂದ ಸಂಜೆ 6.30ರವರೆಗೆ ಶ್ರೀ ಮನ್ನ್ಯಾಯ ಸುಧಾ ಪರೀಕ್ಷೆ, ಮಧ್ಯಾಹ್ನ 12.30ರಿಂದ ತೀರ್ಥ ಪ್ರಸಾದ, ಪೀಠಾಧಿಪತಿಗಳಿಂದ ಅನುಗ್ರಹ ಸಂದೇಶ, ಸ್ಥಳ: ಶ್ರೀ ವ್ಯಾಸತೀರ್ಥ ವಿದ್ಯಾಪೀಠ, ಕೃಷ್ಣಮೂರ್ತಿಪುರಂ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ ಶುಭಶ್ರೀ ಪ್ರಸಾದ್, 6.15 –ಗೀತಾರಾಧನ, 6.35– "ಸಂವಹನ ಸಮಾಚಾರ" ಬಾನುಲಿ ಸರಣಿ. ಪ್ರಸ್ತುತಿ: ಅಲಕಾ ಕಟ್ಟೆಮನೆ, 6.40–ಪದಸಂಸ್ಕೃತಿ–ಪ್ರಸ್ತುತಿ: ಡಾ.ಬಿ.ವಿ.ವಸಂತ ಕುಮಾರ್, 6.50–ರೈತರಿಗೆ ಸಲಹೆ, 7.15–ಭಾವಗೀತೆಗಳು, 10.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಆರ್.ಮೋಹನ್ ಕ್ಲಾರಿಯೋನೆಟ್ ವಾದನ, 11.00–ಮಿಶ್ರ ಮಾಧುರ್ಯ, 12.30–ದೇವರನಾಮ ಎಂ.ವೆಂಕಟೇಶಾಚಾರ್, 12.45–ಚಟ್–ಪಟ್ ಚುರುಮುರಿ, ಪ್ರಸ್ತುತಿ: ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ.ಮೀನಾ, 1.20–ಭಾವಗೀತೆಗಳು ವರ್ಷ ಬಿ.ಸುರೇಶ್ ಮತ್ತು ಅಮೂಲ್ಯ ಶಾಸ್ತ್ರಿ, 4.00–ಜನಪದ ಸಂಗೀತ, 4.30–ಸಂಧ್ಯಾರಾಗ: ವಿಶ್ರಾಂತ ಪ್ರಾಧ್ಯಾಪಕರಾದ ಎನ್.ಬೋರಲಿಂಗಯ್ಯ ಹಾಗೂ ಅವರ ಮಡದಿ ಸರಸ್ವತಿ ಬೋರಲಿಂಗಯ್ಯ ಅವರೊಂದಿಗೆ ಮಾತುಕತೆ. ಭಾಗವಹಿಸುತ್ತಾರೆ : ಅಬ್ದುಲ್ ರಶೀದ್ 6.10– "ಸಂವಹನ ಸಮಾಚಾರ" ಬಾನುಲಿ ಸರಣಿ. ಪ್ರಸ್ತುತಿ: ಅಲಕಾ ಕಟ್ಟೆಮನೆ –6.55 ಕೃಷಿರಂಗ–ಕಿಸಾನ್‌ವಾಣಿ ಹತ್ತಿ ಬೆಳೆಯ ಸುಧಾರಿತ ಬೇಸಾಯ ಕ್ರಮಗಳು. ಈ ಕುರಿತು ಚಾಮರಾಜನಗರ ತಾಲೂಕು ಹರದನಹಳ್ಳಿಯ ಅಖಿಲ ಭಾರತ ಸುಸಂಘಟಿತ ಹತ್ತಿ ಸಂಶೋಧನಾ ಯೋಜನೆಯ ಮುಖ್ಯಸ್ಥರಾದ ಡಾ.ಸಿ.ಶಶಿಕುಮಾರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45 ಬೊಪ್ಪೇಗೌಡನಪುರದ ವಿಶೇಷತೆ ಕುರಿತು ಮಾತನಾಡುತ್ತಾರೆ: ಡಾ.ಕೃಷ್ಣಮೂರ್ತಿ ಹನೂರು ಹಾಗೂ ಮೈಸೂರು ಗುರುರಾಜ್ ಅವರಿಂದ ಪೂರಕ ಹಾಡುಗಾರಿಕೆ 8.00–ಯುವವಾಣಿ: ಯುವಪ್ರತಿಭೆ–ಹರಿಕಥಾ ಕಲಾವಿದೆ ಶ್ರೀಲಲಿತಾ ಉಳಿಯಾರು ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್. 10.00 ನಾಟಕ: "ಶರಪಂಜರ" ರಚನೆ: ಶ್ರೀರಂಗ, ನಿರ್ಮಾಣ: ಪ್ರಭುಸ್ವಾಮಿ ಮಳೀಮಠ್ 10.30 ಸವಿನೆನಪು

ಮೈಸೂರು ಮಿತ್ರ ಗುರುವಾರ 6 ಜೂನ್ 2024

ಕುಶಾಲನಗರ ವ್ಯಾಪ್ತಿ ಶ್ರೀಗಂಧ ಮರ ಕಳವು

ಕುಶಾಲನಗರ, ಜೂ.5– ತಾಲೂಕಿನ ಅರಣ್ಯದಂಚಿನ ಗ್ರಾಮಗಳಲ್ಲಿ ಶ್ರೀಗಂಧದ ಮರಗಳನ್ನು ಕಳ್ಳತನ ಮಾಡಲಾಗುತ್ತಿದ್ದು, ನಿರಂತರವಾಗಿ ನಾಟಾ ಸಾಗಣೆ ನಡೆಯುತ್ತಿವೆ.

ತಾಲೂಕಿನ ಕೂಡಿಗೆ, ಕಣಿವೆ, ಹುದುಗೂರು ಹೆಬ್ಬಾಲೆ, ಸಿದ್ದಲಿಂಗಪುರ ಸೇರಿದಂತೆ ಅರಣ್ಯ ದಂಚಿನ ಗ್ರಾಮಗಳಲ್ಲಿ ಶ್ರೀಗಂಧದ ಮರ ಗಳನ್ನು ಕಡಿದು ಸಾಗಿಸಲಾಗುತ್ತಿದೆ. ಕಳ್ಳರ ತಂಡ ರಾತ್ರಿ ಮರಗಳ ಬುಡಕ್ಕೆ ಗರಗಸ ಹಾಕಿ ಅರಣ್ಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಕಣ್ಣು ತಪ್ಪಿಸಿ ಶ್ರೀಗಂಧವನ್ನು ಸಾಗಿಸುತ್ತಿದೆ.

ಕೂಡಿಗೆ ಬಳಿಯ ಹಾರಂಗಿ ದಂಡೆ ಮೇಲೆ ಶ್ರೀಗಂಧದ ಮರಗಳನ್ನು ತುಂಡು ಮಾಡಿ, ಸಾಗಿಸಿರುವುದು ಪತ್ತೆಯಾಗಿದೆ. ಕಳ್ಳರು ಗಂಧದ ಮರಗಳ ಒಳಭಾಗವನ್ನು ಮಾತ್ರ ತೆಗೆದುಕೊಂಡು, ಉಳಿದ ಭಾಗವನ್ನು ಅಲ್ಲೇ ಬಿಟ್ಟು ಹೋಗಿದ್ದಾರೆ. ಈ ಭಾಗದಲ್ಲಿ ಶ್ರೀಗಂಧ ಮರಗಳ ಕಳವು ನಿರಂತರವಾಗಿ ನಡೆಯುತ್ತಿದ್ದು, ಅರಣ್ಯ ಸಿಬ್ಬಂದಿ ಕೈಚೆಲ್ಲಿ ಕುಳಿತ್ತಿದ್ದಾರೆ ಎಂದು ಹಕ್ಕೆ ಗ್ರಾಮದ ನಿವಾಸಿ ಧರ್ಮ ದೂರಿದ್ದಾರೆ.

ಸ್ಥಳಕ್ಕೆ ಕುಶಾಲನಗರ ವಲಯ ಅರಣ್ಯಾಧಿಕಾರಿ ರತನ್ ಹಾಗೂ ಸಿಬ್ಬಂದಿ ಭೇಟಿ ನೀಡಿ, ಪರಿಶೀಲಿಸಿದ್ದಾರೆ.



ಅಂಗಡಿಯಲ್ಲಿದ್ದ 40 ಗ್ರಾಂ ಚಿನ್ನಾಭರಣ ಕಳವು

ಮಡಿಕೇರಿ, ಜೂ.5–ಕಳ್ಳರು ಅಂಗಡಿಯ ಬೀಗ ಮುರಿದು 10 ಸಾವಿರ ರೂ. ನಗದು, 40 ಗ್ರಾಂ ಚಿನ್ನಾಭರಣ ಮತ್ತು ಅಂಗಡಿ ಮುಂದೆ ನಿಲ್ಲಿಸಿದ್ದ ಸ್ಕೂಟರ್ ಅನ್ನು ಕಳವು ಮಾಡಿರುವ ಘಟನೆ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯ ತಾಳತ್ತಮನೆ ಬಳಿ ಮಂಗಳವಾರ ರಾತ್ರಿ ನಡೆದಿದೆ.

ತಾಳತ್ತಮನೆ ನಿವಾಸಿ ಭರತ್ ಅವರ ಅಂಗಡಿಯಲ್ಲಿ ಕಳ್ಳತವಾಗಿದ್ದು, ಅಂಗಡಿಯ ಬೀಗ ಮುರಿದ ಕಳ್ಳರು, ಹಣ ಹಾಗೂ ಚಿನ್ನಾಭರಣ ದೋಚಿದ್ದಾರೆ. ಬುಧವಾರ ಬೆಳಗೆ ಎಂದಿನಂತೆ ಅಂಗಡಿ ಬಾಗಿಲು ತೆರಯಲು ಮನೆಯಿಂದ ಆಗಮಿಸಿ ಮಾಲೀಕ ಭರತ್, ಮೊದಲು ಅಂಗಡಿ ಮುಂದೆ ನಿಲ್ಲಿಸಿದ್ದ ಸ್ಕೂಟರ್ ನಾಪತ್ತೆಯಾಗಿರುವುದನ್ನು ಕಂಡು ಗಾಬರಿಯಾಗಿದ್ದಾರೆ. ಬಳಿ ಅಂಗಡಿಯ ಬಾಗಿಲು ಮುರಿದು ಕಳ್ಳತನ ಮಾಡಿರುವುದು ಪತ್ತೆಯಾಗಿದೆ.

ವೃತ್ತ ನಿರೀಕ್ಷಕ ಉಮೇಶ್ ಉಪ್ಪಳಿಕೆ, ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣಾಧಿಕಾರಿ ಶ್ರೀನಿವಾಸಲು ಹಾಗೂ ಸಿಬ್ಬಂದಿ ಶ್ವಾನ ದಳ, ಬೆರಳಚ್ಚು ತಜ್ಞರೊಂದಿಗೆ ಸ್ಥಳ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.



ತಾಳತ್ತಮನೆ ಗ್ರಾಮದ ಭರತ್ ಅವರ ಅಂಗಡಿಯಲ್ಲಿ ಕಳ್ಳತನವಾಗಿರುವುದನ್ನು ಪೊಲೀಸರು ಪರಿಶೀಲಿಸಿದರು.

ವಿರಾಜಪೇಟೆಯಲ್ಲಿ ಪರಿಸರ ದಿನಾಚರಣೆ



ವಿರಾಜಪೇಟೆ ನ್ಯಾಯಾಲಯ ಆವರಣದಲ್ಲಿ ಗಿಡ ನೆಡುವ ಕಾರ್ಯಕ್ರಮಕ್ಕೆ ನ್ಯಾಯಾಧೀಶೆ ಎಸ್.ಸುಜಾತ ಚಾಲನೆ ನೀಡಿದರು.

ವಿರಾಜಪೇಟೆ: ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ಬುಧವಾರ ವಿರಾಜಪೇಟೆ ತಾಲೂಕು ಕಾನೂನು ಸೇವೆಗಳ ಸಮಿತಿ, ವಕೀಲರ ಸಂಘ ಹಾಗೂ ಅರಣ್ಯ ಇಲಾಖೆ ವತಿಯಿಂದ ಗಿಡ ನೆಡುವ ಮೂಲಕ ವಿಶ್ವ ಪರಿಸರ ದಿನ ಆಚರಿಸಲಾಯಿತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ನ್ಯಾಯಾಧೀಶರಾದ ಎಸ್.ಸುಜಾತ, ಪ್ರತಿಯೊಬ್ಬರಿಗೂ ಪರಿಸರದ ಅವಶ್ಯವಿರುವುದರಿಂದ ಎಲ್ಲರೂ ಗಿಡ–ಮರಗಳನ್ನು ಪೋಷಣೆ ಮಾಡಿ ಸಂರಕ್ಷಿಸಬೇಕು. ಅರಣ್ಯ ಮನುಷ್ಯನಿಗೆ ಬೇಕಾದ ಅಗತ್ಯ ವಸ್ತುಗಳನ್ನು ನೀಡುತ್ತಿದೆ. ಪ್ರಾಣಿ–ಪಕ್ಷಿಗಳು ಸೇರಿದಂತೆ ಅನೇಕ ಜೀವರಾಶಿಗಳು ಅರಣ್ಯದಲ್ಲಿ ಜೀವಿಸುರುವುದರಿಂದ ನಾವುಗಳು ಪರಿಸರವನ್ನು ರಕ್ಷಣೆ ಮಾಡುವುದು ಕರ್ತವ್ಯವಾಗಿದೆ ಎಂದರು.

ಉಪ ಅರಣ್ಯ ಸಂರಕ್ಷಣಾಧಿಕಾರಿ ಎನ್.ಹೆಚ್.ಜಗನಾಥ್ ಮಾತನಾಡಿ, ಶೇ.48ರಷ್ಟು ಅರಣ್ಯ ಮತ್ತು ಹಸಿರು ಹೊದಿಕೆ ಹೊಂದಿರುವ ಕೊಡಗು ಜಿಲ್ಲೆಯನ್ನು ನಾವುಗಳು ಉಳಿಸಿಕೊಳ್ಳಬೇಕು. ಅರಣ್ಯ ಬೆಳೆಸುವುದರಿಂದ ಕಾಲಕಾಲಕ್ಕೆ ಮಳೆ ಬೆಳೆ ಆಗಲಿದೆ. ಜೊತೆಗೆ ನೀರನ್ನು ಭೂಮಿಗೆ ಹಿಂಗಿಸುವುದರಿಂದ ಜಲ ಸಂರಕ್ಷಣೆ ಆಗಲಿದೆ. ಜಿಲ್ಲೆಯ ಕೃಷಿಕರಿಗೆ ಈ ಸಾಲಿನಲ್ಲಿ 80 ಸಾವಿರ ಗಿಡಗಳನ್ನು ವಿತರಿಸಲಾಗುವುದು ಎಂದು ತಿಳಿಸಿದರು.

ಇದೇ ವೇಳೆ ನ್ಯಾಯಾಧೀಶರಾದ ಆರ್.ಮಂಜುನಾಥ್, ಸಂತೋಷ ಕೊಠಾರಿ, ವಕೀಲರ ಸಂಘದ ಕಾರ್ಯದರ್ಶಿ ವಿ.ಜಿ.ರಾಕೇಶ್, ಅರಣ್ಯ ಸಹಾಯಕ ಸಂರಕ್ಷಣಾಧಿಕಾರಿ ನೆಹರು, ವಲಯ ಅರಣ್ಯಾಧಿಕಾರಿ ದೇವಯ್ಯ, ಎಸಿಎಫ್ ಮಹಾಲಕ್ಷ್ಮೀ, ಉಪವಲಯಾಧಿಕಾರಿ ಸಚಿನ್ ನಿಂಬಾಳ್ಕರ್, ಅರಣ್ಯ ಹಾಗೂ ನ್ಯಾಯಾಲಯದ ಸಿಬ್ಬಂದಿ ಹಾಜರಿದ್ದರು.

ಜೂ.10 ರಂದು ಅಂಚೆ ಅದಾಲತ್ ಸಭೆ

ಮಡಿಕೇರಿ: ಅಂಚೆ ಅದಾಲತ್ ಸಭೆ ಜೂ.10 ರಂದು ಬೆಳಗ್ಗೆ 11 ಗಂಟೆಗೆ ಕೊಡಗು ಅಂಚೆ ವಿಭಾಗೀಯ ಕಚೇರಿ, ಸಿದ್ದಾಪುರ ರಸ್ತೆ ಅಶೋಕ್ ಪುರದಲ್ಲಿ ನಡೆಯಲಿದೆ. ಸಭೆಯಲ್ಲಿ ಅಂಚೆ ಸಂಬಂಧ ದೂರುಗಳನ್ನು ಸ್ವೀಕರಿಸಲಾಗುವುದು.

ಅಪಘಾತದಲ್ಲಿ ಗಾಯಗೊಂಡಿದ್ದ ಯುವಕ ಸಾವು

ನಾಪೋಕು, ಜೂ.5–ನಾಪೋಕ್ಲು–ಭಾಗಮಂಡಲ ಮುಖ್ಯ ರಸ್ತೆಯ ಬಲ್ಲಮಾವಟಿ ಬಳಿ ಮೇ 13ರಂದು ಟಿಪ್ಪರ್ ಮತ್ತು ಬೈಕ್ ನಡುವೆ ನಡೆದ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದ ಯುವಕ ಬುಧವಾರ ಮುಂಜಾನೆ ಮೃತಪಟ್ಟಿದ್ದಾರೆ.

ಅಯ್ಯಂಗೇರಿ ಗ್ರಾಮದ ದಿ.ತೊತ್ತಿಯಂಡ ಸೋಮಯ್ಯ ಮತ್ತು ಪುಷ್ಪಾ ದಂಪತಿ ಪುತ್ರ ತೊತ್ತಿಯಂಡ ಮುಕೇಶ್ (24) ಮೃತ ಯುವಕ.

ಈತ ಮೇ 13ರಂದು ನಾಪೋಕ್ಲುವಿನಲ್ಲಿ ಮದುವೆ ಮುಗಿಸಿ ತನ್ನ ಸ್ನೇಹಿತ ತೊತ್ತಿಯಂಡ ರಾಕೇಶ್‌ನೊಂದಿಗೆ ಬೈಕ್‌ನಲ್ಲಿ ಅಯ್ಯಂಗೇರಿ ಕಡೆಗೆ ಹೋಗುತ್ತಿದ್ದ. ಇದೇ ವೇಳೆ ಬಲ್ಲಮಾವಟಿ ಬಳಿಯ ರಸ್ತೆ ತಿರುವಿನಲ್ಲಿ ಎದುರಿಗೆ ಬಂದ ಟಿಪ್ಪರ್ ನಡುವೆ ಡಿಕ್ಕಿ ಸಂಭವಿಸಿದೆ. ಪರಿಣಾಮ ಇಬ್ಬರು ಯುವಕರು ಗಂಭೀರವಾಗಿ ಗಾಯಗೊಂಡಿದ್ದರು.

ತಲೆಯ ಭಾಗಕ್ಕೆ ತೀವ್ರ ಪೆಟ್ಟು ಬಿದ್ದಿದ್ದರಿಂದ ಮುಕೇಶ್‌ನನ್ನು ಮಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಬುಧವಾರ ಮುಂಜಾನೆ ಮೃತಪಟ್ಟಿದ್ದಾರೆ.

ತಂದೆ– ತಾಯಿಯನ್ನು ಕಳೆದುಕೊಂಡಿದ್ದ ಮುಕೇಶ್, ಇಬ್ಬರು ಸಹೋದರಿಯರೊಂದಿಗೆ ವಾಸವಾಗಿದ್ದರು. ಘಟನೆ ಸಂಬಂಧ ಟಿಪ್ಪರ್ ಚಾಲಕ ಕಟ್ಟೆಮಾಡು ಗ್ರಾಮದ ನಿವಾಸಿ ಟಿ.ಬಿ.ಚೇತನ್ ವಿರುದ್ಧ ನಾಪೋಕ್ಲು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಮುಕೇಶ್

ಅಪಘಾತದಲ್ಲಿ ಗಾಯಗೊಂಡಿದ್ದ ವ್ಯಕ್ತಿ ಸಾವು

ಮಂಡ್ಯ: ತಾಲೂಕಿನ ಕೆರಗೋಡು–ಮರಿಲಿಂಗನದೊಡ್ಡಿ ನಡುವೆ ಸಂಭವಿಸಿದ್ದ ಅಪಘಾತದಲ್ಲಿ ಸ್ಥಳದಲ್ಲೇ ಮೃತಪಟ್ಟಿದ್ದ ಮಹಿಳೆಯ ಪತಿಯೂ ಬೆಂಗಳೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದಿದ್ದಾರೆ.

ಕೆರಗೋಡು ಸಮೀಪದ ಚಿಕ್ಕಬಾಣಸವಾಡಿಯ ಸಿ.ಮಂಜು(46) ಮತ್ತು ಅವರ ಪತ್ನಿ ಎಚ್.ಎಸ್.ಸುನೀಲ(40) ಮೃತ ದಂಪತಿ. ಇಬ್ಬರೂ ಸೋಮವಾರ ಮಧ್ಯಾಹ್ನ 1 ಗಂಟೆ ವೇಳೆ ತಮ್ಮ ಹೀರೋ ಹೊಂಡ ಬೈಕ್‌ನಲ್ಲಿ ಕೆರಗೋಡು ಗ್ರಾಮದ ದೇವಾಲಯಕ್ಕೆ ಹೋಗುತ್ತಿದ್ದ ವೇಳೆ ಮರಿಲಿಂಗ ನದೊಡ್ಡಿಯ ಬಳಿ ಹಿಂದಿನಿಂದ ಬಂದ ಕಾರೊಂದು ಡಿಕ್ಕಿ ಹೊಡೆದ ಪರಿಣಾಮ ಮಂಜು ಅವರ ಪತ್ನಿ ಸುನೀಲ ಸ್ಥಳದಲ್ಲೇ ಮೃತಪಟ್ಟಿದ್ದರು. ತೀವ್ರ ಗಾಯಗೊಂಡಿದ್ದ ಮಂಜು ಅವರನ್ನು ಮಂಡ್ಯ ಜಿಲ್ಲಾಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಬೆಂಗಳೂರಿನ ಬಿಜಿಎಸ್ ಅಪೋಲೋ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಬುಧವಾರ ಮಧ್ಯಾಹ್ನ ಚಿಕಿತ್ಸೆ ಫಲಕಾರಿಯಾಗದೆ ಸಿ.ಮಂಜು ಅವರು ಕೊನೆಯುಸಿರೆಳೆದಿದ್ದಾರೆ.

ಮೃತ ಸಿ.ಮಂಜು ಅವರ ಅಂಗಾಂಗವನ್ನು ಕುಟುಂಬದವರು ದಾನ ಮಾಡುವ ಮೂಲಕ ಸಾರ್ಥಕತೆ ಮೆರೆದಿದ್ದಾರೆ. ಮೃತರಿಗೆ ಓರ್ವ ಪುತ್ರ ಇದ್ದಾರೆ. ಮೃತರ ಅಂತ್ಯಕ್ರಿಯೆ ಗುರುವಾರ ಚಿಕ್ಕಬಾಣಸವಾಡಿಯಲ್ಲಿ ಬೆಳಗ್ಗೆ 11 ಗಂಟೆಗೆ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದು, ಕೆರಗೋಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕುಮಾರಸ್ವಾಮಿಗೆ ಪಕ್ಷಾತೀತವಾಗಿ ಮತ ಕೊಟ್ಟಿದ್ದಾರೆ

ಮತದಾರರಿಗೆ ಕೃತಜ್ಞತೆ ಸಲ್ಲಿಸಿದ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು

ಪಾಂಡವಪುರ, ಜೂ.5– ಲೋಕಸಭಾ ಚುನಾವಣೆಯಲ್ಲಿ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಪಕ್ಷಾತೀತವಾಗಿ ಅತ್ಯಧಿಕ ಮತ ಕೊಟ್ಟುಕೊಟ್ಟು ಗೆಲ್ಲಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚುನಾವಣೆಯಲ್ಲಿ ಜಿಲ್ಲೆಯ ಜನತೆ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಪಕ್ಷಾತೀತವಾಗಿ ಬೆಂಬಲ ನೀಡಿ, 2.80 ಲಕ್ಷಕ್ಕೂ ಅಧಿಕ ಮತಗಳ ಅಂತರದಿಂದ ಗೆಲ್ಲಿಸಿ ಸಂಸದರನ್ನಾಗಿ ಆಯ್ಕೆ ಮಾಡುವ ಮೂಲಕ ಋಣದ ಭಾರವನ್ನು ಹೆಗಲಿಗೆ ಹೊರೆಸಿದ್ದಾರೆ. ಮುಂದಿನ ದಿನಗಳಲ್ಲಿ ಜಿಲ್ಲೆಯ ಜನರ ಋಣ ತೀರಿಸುವ ಕೆಲಸ ಮಾಡುತ್ತೇವೆ. ಎಚ್.ಡಿ.ಕುಮಾರಸ್ವಾಮಿ ಅವರು ಗೆಲುವಿಗೆ ಶ್ರಮಿಸಿದ ಜೆಡಿಎಸ್ ಹಾಗೂ ಬಿಜೆಪಿ ಪಕ್ಷದ ಎಲ್ಲಾ ಮುಖಂಡರು, ಕಾರ್ಯಕರ್ತರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ ಎಂದರು.

ಎಚ್.ಡಿ.ಕುಮಾರಸ್ವಾಮಿ ಅವರು ಸಂಸದರಾಗಿದ್ದು, ದೇಶದಲ್ಲಿ ಮೂರನೇ ಬಾರಿಗೆ ನರೇಂದ್ರಮೋದಿ ಅವರು ಪ್ರಧಾನಮಂತ್ರಿಯಾಗಲಿದ್ದಾರೆ, ನರೇಂದ್ರ ಮೋದಿ ಅವರ ಸಂಪುಟದಲ್ಲಿ ಎಚ್.ಡಿ.ಕುಮಾರಸ್ವಾಮಿ ಅವರು ಮಂತ್ರಿಯಾಗುವುದು ಖಚಿತವಾಗಿದೆ. ಎಚ್.ಡಿ.ಕುಮಾರಸ್ವಾಮಿ ಅವರು ಮಂತ್ರಿಯಾಗಿ ಜಿಲ್ಲೆಯ ಅಭಿವೃದ್ಧಿಗೆ ಶ್ರಮಿಸಲಿದ್ದಾರೆ ಎಂದು ತಿಳಿಸಿದರು.

2023 ವಿಧಾನಸಭೆಯ ಚುನಾವಣೆಯ ಸೋಲಿನ ಬಳಿಕ ನನ್ನ ಮನಸ್ಸಿಗೆ ಸಾಕಷ್ಟು ನೋವುಂಟಾಗಿತ್ತು. ಲೋಕಸಭೆ ಚುನಾವಣೆಯ ಗೆಲುವು ನನ್ನ ಸೋಲಿನ ನೋವು ಮರೆಸಿದೆ. ನಾನು ಶಾಸಕನಾಗಿದ್ದ ಸಂದರ್ಭದಲ್ಲಿ ಪಟ್ಟಣದ ತಮ್ಮ ನಿವಾಸದಲ್ಲಿ ಪ್ರತಿ ಸೋಮವಾರ ಮತ್ತು ಗುರುವಾರ ಜನರ ಸಮಸ್ಯೆಯನ್ನು ಆಲಿಸುವ ಕೆಲಸ ಮಾಡುತ್ತಿದ್ದೆ. ನನ್ನ ಸೋಲಿನ ಬಳಿಕ ಆ ಕೆಲಸವನ್ನು ಸಹ ಮಾಡುತ್ತಿರಲಿಲ್ಲ. ಕ್ಷೇತ್ರದ ಜನತೆ ಎಚ್.ಡಿ.ಕುಮಾರಸ್ವಾಮಿ ಅವರಿಗೆ 50,369 ಅಧಿಕ ಮತಗಳ ಕೊಟ್ಟು ಅವರ ಗೆಲುವಿಗೆ ಕಾರಣರಾಗಿದ್ದಾರೆ. ಮುಂದಿನ ದಿನಗಳಲ್ಲಿ ವಾರದ ಪ್ರತಿ ಸೋಮವಾರ ಮತ್ತು ಗುರುವಾರ ಮತ್ತೆ ಜನರ ಸಮಸ್ಯೆ ಆಲಿಸುವ ಕೆಲಸವನ್ನು ಮಾಡುವ ಮೂಲಕ ಕ್ಷೇತ್ರದ ಜನರ ಸೇವೆ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಜಿಪಂ ಮಾಜಿ ಸದಸ್ಯ ಎಚ್.ಮಂಜುನಾಥ್, ಜೆಡಿಎಸ್ ತಾಲೂಕು ಅಧ್ಯಕ್ಷ ಎಸ್.ಎ.ಮಲ್ಲೇಶ್, ಜಿಪಂ ಮಾಜಿ ಸದಸ್ಯ ಎಚ್.ಮಂಜುನಾಥ್, ಮುಖಂಡ ಲಿಂಗರಾಜು,ಪುರಸಭೆ ಸದಸ್ಯರಾದ ಎಂ.ಗಿರೀಶ್, ಆರ್.ಸೋಮಶೇಖರ್, ಶಿವಣ್ಣ, ಸುನೀತ, ಗೀತಾ, ಚಂದ್ರು, ಶಿವಕುಮಾರ್, ಸಗಾಯಂ ಇದ್ದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು.

ಜೆಡಿಎಸ್, ಬಿಜೆಪಿ ಕಾರ್ಯಕರ್ತರು ಸಿಹಿ ಹಂಚಿ ಸಂಭ್ರಮಾಚರಣೆ



ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಅಭೂತಪೂರ್ವ ಗೆಲುವಿನ ಹಿನ್ನೆಲೆಯಲ್ಲಿ ಶ್ರೀರಂಗಪಟ್ಟಣದ ಲಕ್ಷ್ಮಿ ದೇವಿ ದೇವಸ್ಥಾನದ ವೃತ್ತದ ಬಳಿ ಇಂಡವಾಳು ಸಚ್ಚಿದಾನಂದ ನೇತೃತ್ವದಲ್ಲಿ ಜೆಡಿಎಸ್ ಹಾಗೂ ಬಿಜೆಪಿ ಕಾರ್ಯಕರ್ತರು ಸಿಹಿ ಹಂಚಿ ಪಟಾಕಿ ಸಿಡಿಸುವ ಮೂಲಕ ಸಂಭ್ರಮಾಚರಣೆ ಮಾಡಿದರು.

ನಾಳೆ ಮಿನಿ ಉದ್ಯೋಗ ಮೇಳ

ಮಂಡ್ಯ, ಜೂ.5– ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ ಹಾಗೂ ಮೆ॥ ಗ್ರಾಸಿಂ ಇಂಡಸ್ಟ್ರೀಸ್–ಆದಿತ್ಯಾ ಬಿರ್ಲಾ ಗ್ರೂಪ್, ಮೆ॥ ಟೊಯೋಟಾ ಇಂಡಸ್ಟ್ರೀಸ್ ಇಂಜಿನ್ ಇಂಡಿಯಾ, ಬಂಧನ್ ಬ್ಯಾಂಕ್ ಲಿಮಿಟೆಡ್ ಮತ್ತು ಮೆ॥ ಶಾಹಿ ಎಕ್ಸ್‌ಪೋರ್ಟ್ ಪ್ರೈ ಲಿ, ಸಂಸ್ಥೆಗಳ ಸಹಭಾಗಿತ್ವದಲ್ಲಿ ಉದ್ಯೋಗ ನೀಡುವ ಕುರಿತು ಜೂ.7 ರಂದು ಬೆಳಗ್ಗೆ 10.30 ಗಂಟೆಗೆ ಮಿನಿ ಉದ್ಯೋಗ ಮೇಳ ಏರ್ಪಡಿಸಲಾಗಿದೆ.

ಪಿ.ಯು.ಸಿ. ಐ.ಟಿ.ಐ (ಯಾವುದೇ ಟ್ರೇಡ್), ಡಿಪ್ಲಮೋ (ಪ್ಯಾರಾಮೆಡಿಕಲ್, ಆಟೋಮೊಬೈಲ್, ಫಿಟ್ಟರ್, ಟರ್ನರ್ & ಮೆಕ್ಯಾನಿಕಲ್) ಹಾಗೂ ಯಾವುದೇ ಪದವಿ/ ಯು.ಜಿ ಉತ್ತೀರ್ಣರಾದ 18 ರಿಂದ 32 ವರ್ಷದೊಳಗಿನ ಆಸಕ್ತ ಅಭ್ಯರ್ಥಿಗಳು ಜೂನ್ 07 ರಂದು ಬೆಳಗ್ಗೆ 10.30 ಗಂಟೆಗೆ ಮಂಡ್ಯ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಗೆ ತಮ್ಮ ಬಯೋಡೇಟಾಗಳೊಂದಿಗೆ ಸಂದರ್ಶನಕ್ಕೆ ಹಾಜರಾಗಬೇಕು.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ 08232–295124, 8660061488 & 9164642684 ನ್ನು ಸಂಪರ್ಕಿಸಬಹುದು ಎಂದು ಮಂಡ್ಯ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ ಉದ್ಯೋಗಾಧಿಕಾರಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಾಂಡವಪುರದ ಬಳಿ ವಿದ್ಯುತ್ ತಂತಿ ತುಳಿದು ರೈತ ಸಾವು

ಸ್ಥಳಕ್ಕೆ ಮಾಜಿ ಸಚಿವ ಪುಟ್ಟರಾಜು ಭೇಟಿ, 2 ಲಕ್ಷ ರೂ. ಪರಿಹಾರ ವಿತರಣೆ



ವಿದ್ಯುತ್ ಸ್ಪರ್ಶದಿಂದ ಮೃತಪಟ್ಟ ಹಿನ್ನೆಲೆಯಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ಸ್ಥಳಕ್ಕೆ ಭೇಟಿಕೊಟ್ಟು ಪರಿಶೀಲನೆ ನಡೆಸಿದರು.



ಮೃತ ಮಹದೇವು

ಪಾಂಡವಪುರ: ವಿದ್ಯುತ್ ಸ್ಪರ್ಶವಾಗಿ ರೈತನೋರ್ವ ಸಾವನ್ನಪ್ಪಿರುವ ಘಟನೆ ತಾಲೂಕಿನ ನುಗ್ಗಹಳ್ಳಿ ಗ್ರಾಮದಲ್ಲಿ ಸಂಭವಿಸಿದೆ.

ಗ್ರಾಮದ ಮಹದೇವು(52) ಮೃತ ರೈತ. ಗ್ರಾಮದ ಹೊರವಲಯದಲ್ಲಿರುವ ತಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ತುಳಿದಿದ್ದಾರೆ. ಇದರಿಂದಾಗಿ ರೈತ ಮಹದೇವು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಜಮೀನಿಗೆ ಹೋದ ತಂದೆ ಸಂಜೆಯಾದರು ಮನೆಗೆ ಬಾರದ ಹಿನ್ನೆಲೆಯಲ್ಲಿ ಪುತ್ರ ಜಮೀನಿಗೆ ಹೋಗಿ ನೋಡಿದಾಗ ತಂದೆ ಮಹದೇವು ಸಾವಪ್ಪಿನವರುವುದು ಬೆಳಕಿಗೆ ಬಂದಿದೆ. ವಿಷಯ ತಿಳಿದ ಅಧಿಕಾರಿಗಳು ಸ್ಥಳಕ್ಕೆ ಭೇಟಿನೀಡಿ ಪರಿಶೀಲನೆ ನಡೆಸಿದ್ದಾರೆ.

ಸಿಎಸ್‌ಪಿ ಭೇಟಿ: ವಿಷಯ ತಿಳಿದ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ತಕ್ಷಣ ಸ್ಥಳಕ್ಕೆ ಆಗಮಿಸಿ ಪರಿಶೀಲಿಸಿ ಮೃತರ ಕುಟುಂಬಸ್ಥರಿಗೆ ಸಾಂತ್ವಾನ ಹೇಳಿದರು. ಬಳಿಕ ಸೆಸ್ಕ್ ಇಲಾಖೆಯಿಂದ ಮೃತರ ಕುಟುಂಬಕ್ಕೆ 5 ಲಕ್ಷ ಪರಿಹಾರ ನೀಡಬೇಕೆಂದು ಒತ್ತಾಯಿಸಿದರು. ಸೆಸ್ಕ್ ಇಲಾಖೆಯ ಅಧಿಕಾರಿಗಳು ಸ್ಥಳದಲ್ಲಿಯೇ 2 ಲಕ್ಷ ಪರಿಹಾರದ ಚೆಕ್ ವಿತರಣೆ ಮಾಡಿದರು. ಉಳಿಕೆ ಪರಿಹಾರದ ಹಣವನ್ನು ಸೆಸ್ಕ್ ಇಲಾಖೆಯಿಂದ ಬರಿಸಲಾಗುವುದು ಎಂದು ಭರವಸೆ ನೀಡಿದರು.

ಮಾಜಿ ಸಚಿವ ಪುಟ್ಟರಾಜು ಮಾತನಾಡಿ, ರೈತರು ಜಮೀನುಗಳಿಗೆ ಹೋದಂತಹ ಸಂದರ್ಭದಲ್ಲಿ ಇಂತಹ ಆಕಸ್ಮಿಕ ಘಟನೆಗಳು ನಡೆಯುತ್ತಿದೆ. ಇಂತಹ ಅನಾಹುತಗಳು ನಡೆದ ಸಂದರ್ಭದಲ್ಲಿ ಸರಕಾರ ಹಾಗೂ ಇಲಾಖೆಗಳು ರೈತರ ನೆರವಿಗೆ ದಾವಿಸಬೇಕು, ಕನಿಷ್ಠ 5 ರಿಂದ 10 ಪಕ್ಷ ಪರಿಹಾರ ನೀಡಬೇಕು, ಸೆಸ್ಕ್ ಇಲಾಖೆಯವರು ತಕ್ಷಣ 2 ಲಕ್ಷ ಪರಿಹಾರ ನೀಡಿದ್ದಾರೆ ಉಳಿಕ ಪರಿಹಾರವನ್ನು ಶೀಘ್ರ ನೀಡಬೇಕು ಎಂದು ಒತ್ತಾಯಿಸಿದರು. ಬಳಿಕ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಮೃತರ ಶವ ಪರೀಕ್ಷೆ ನಡೆಸಿ ವಾರಸುದಾರರಿಗೆ ನೀಡಲಾಯಿತು. ಘಟನೆ ಸಂಬಂಧ ಪಾಂಡವಪುರ ಠಾಣೆಯಲ್ಲಿ ದೂರು ದಾಖಲಾಗಿದೆ.

ಕಾಂಗ್ರೆಸ್ ಗೆಲುವಿನಿಂದ ಮತ್ತಷ್ಟು ಅಭಿವೃದ್ಧಿ



ಗುಂಡ್ಲುಪೇಟೆ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಶಾಸಕ ಗಣೇಶ್ ಪ್ರಸಾದ್ ಮಾತನಾಡಿದರು.

ಗುಂಡ್ಲುಪೇಟೆ, ಜೂ.5– ಈ ಬಾರಿ ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ದಾಖಲೆಯ ಗೆಲುವು ಸಾಧಿಸಿರುವುದರಿಂದ ಗುಂಡ್ಲುಪೇಟೆ ವಿಧಾನಸಭೆ ಕ್ಷೇತ್ರದ ಅಭಿವೃದ್ಧಿಗೆ ಮತ್ತಷ್ಟು ನೆರವಾಗಲಿದೆ ಎಂದು ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಹೇಳಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮತದಾರರಿಗೆ ಕೃತಜ್ಞತೆ ಸಲ್ಲಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಜನಸಾಮಾನ್ಯರಿಗೆ ಅನುಕೂಲವಾಗುವ ಯೋಜನೆಗಳನ್ನು ಜಾರಿಗೊಳಿಸಿದೆ. ಇದರಿಂದ ಈ ಬಾರಿ ಚಾ.ನಗರ ಲೋಕಸಭಾ ಕ್ಷೇತ್ರದ ಮತದಾರರು ಕಾಂಗ್ರೆಸ್ ಮೇಲೆ ವಿಶ್ವಾಸವಿಟ್ಟು 1.80 ಲಕ್ಷ ಮತಗಳ ಅಂತರದಲ್ಲಿ ಸುನೀಲ್ ಬೋಸ್ ಅವರನ್ನು ಸಂಸದರಾಗಿ ಆಯ್ಕೆ ಮಾಡಿದ್ದಾರೆ ಎಂದರು.

ಚಾಮರಾಜನಗರ ಜಿಲ್ಲೆ ಕಾಂಗ್ರೆಸ್‌ನ ಭದ್ರಕೋಟೆ ಎಂಬುದು ಮತ್ತೊಮ್ಮೆ ಸಾಬೀತಾಗಿದೆ. ಇದು ಮುಂದಿನ ದಿನಗಳಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಸದ್ಯದಲ್ಲೇ 490 ಕೋಟಿ ರೂ. ವೆಚ್ಚದ ತಾಲೂಕಿನ ಕೆರೆಗಳಿಗೆ ನದಿ ಮೂಲದಿಂದ ನೀರು ತುಂಬಿಸುವ ಯೋಜನೆಯನ್ನು ಜಾರಿಗೊಳಿಸಲಾಗುವುದು ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಚಾಮುಲ್ ನಿರ್ದೇಶಕ ಹೆಚ್.ಎಸ್.ನಂಜುಂಡ ಪ್ರಸಾದ್, ಜಿಪಂ ಮಾಜಿ ಸದಸ್ಯರಾದ ಕೆ.ಎಸ್.ಮಹೇಶ್, ಕೆರೆಹಳ್ಳಿ ನವೀನ್, ತಾಪಂ ಮಾಜಿ ಅಧ್ಯಕ್ಷ ಹೆಚ್.ಎನ್.ಬಸವರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಬಿ.ಎಂ.ಮುನಿರಾಜು. ಪಿ.ಬಿ.ರಾಜಶೇಖರ, ಮುಖಂಡರಾದ ಕುಮಾರಸ್ವಾಮಿ, ಸುರೇಶ್ ಕಾರ್ಗಳ್ಳಿ, ಎಸ್‌ಆರ್‌ಎಸ್ ರಾಜಣ್ಣ ಇದ್ದರು.

ನಾಳೆ ತಾಲೂಕಿನ ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಜೂ.5– ಸೆಸ್ಕ್‌ನ ಹರದನಹಳ್ಳಿ ಉಪವಿಭಾಗ ವ್ಯಾಪ್ತಿಯಲ್ಲಿ ತ್ರೈಮಾಸಿಕ ನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಜೂ.7ರಂದು ಬೆಳಗ್ಗೆ 9 ರಿಂದ ಸಂಜೆ 5 ಗಂಟೆ ವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಸಿದ್ದಯ್ಯನಪುರ, ಹೊಂಗಲವಾಡಿ, ಕೋಳಿಪಾಳ್ಯ, ಬಂದಿಗೌಡನಹಳ್ಳಿ, ಅಟ್ಟುಗೂಳಿಪುರ, ಕೊತ್ತಲವಾಡಿ, ಅರಕಲವಾಡಿ, ಯರಗನಹಳ್ಳಿ, ಸುವರ್ಣನಗರ, ಫ್ಯಾಕ್ಟರಿ, ಬಿಸಿಲವಾಡಿ, ಪುಣಜನೂರು, ಡೊಳ್ಳಿಪುರ, ಚನ್ನಪನಪುರ, ಅಮಚವಾಡಿ, ಮಾದಲವಾಡಿ ಮತ್ತು ಕಿಲಿಗೆರೆ, ಮಾದಲವಾಡಿ, ಯನಗುಂಬ, ಯರಗನಹಳ್ಳಿ, ಅಚ್ಚಟ್ಟಿಪುರ, ಯಾನಗಳ್ಳಿ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಂಗ್ರೆಸ್ ಮುನ್ನಡೆಯಿಂದ ಹನೂರಿನಲ್ಲಿ ಕೈ ಬಲ

ಹನೂರು, ಜೂ.5– ಚಾಮರಾಜನಗರ ಲೋಕಸಭಾ ಮೀಸಲು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಗೆ ಹನೂರು ವಿಧಾನಸಭಾ ಕ್ಷೇತ್ರದಲ್ಲಿ 37 ಸಾವಿರ ಮತಗಳ ಮುನ್ನಡೆ ಬಂದಿರುವುದು ನನ್ನ ಕೈ ಬಲಪಡಿಸಿದೆ ಎಂದು ಮಾಜಿ ಶಾಸಕ ಆರ್.ನರೇಂದ್ರ ಸಂತಸ ವ್ಯಕ್ತಪಡಿಸಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಬುಧವಾರ ನಡೆದ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರ ಕೃತಜ್ಞತಾ ಸಭೆಯಲ್ಲಿ ಮಾತನಾಡಿದ ಅವರು, ಈ ಬಾರಿ ಕಾರ್ಯಕರ್ತರು ಒಗ್ಗಟ್ಟಿನಿಂದ ಪಕ್ಷ ಸಂಘಟನೆ ಮಾಡಿ ಎಲ್ಲಾ ಮತದಾರರನ್ನು ಸಂಪರ್ಕ ಮಾಡಿರುವುದರಿಂದ ಪಕ್ಷದ ಅಭ್ಯರ್ಥಿ ಸುನೀಲ್ ಬೋಸ್‌ಗೆ ಹೆಚ್ಚಿನ ಮತ ಬಂದಿದೆ. ರಾಜ್ಯದಲ್ಲಿ ಇನ್ನು ಹೆಚ್ಚಿನ ಸ್ಥಾನ ಪಡೆಯಬಹುದಾಗಿತ್ತು. ಆದರೆ, ಪಕ್ಷದ ನಾಯಕರುಗಳ ಒಳಜಗಳ ಹಾಗೂ ವೈಯಕ್ತಿಕ ಕಾರಣಗಳಿಂದ 4–5 ಸ್ಥಾನವನ್ನು ಕಳೆದುಕೊಂಡಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಜಾಪ್ರಭುತ್ವದ 4ನೇ ಅಂಗ ಎಂದು ಕರೆಯುವ ಪತ್ರಿಕೋದ್ಯಮ ಮೋದಿಯ ಪರವಾಗಿಯೇ ಕೆಲಸ ಮಾಡುತ್ತಿರುವುದು ದುರದೃಷ್ಟಕರ. ಚುನಾವಣಾ ಪೂರ್ವದಲ್ಲಿ ಇಡೀ ದೇಶದಲ್ಲಿ 400ಕ್ಕೂ ಹೆಚ್ಚು ಸ್ಥಾನ ಪಡೆಯುತ್ತೇವೆ ಎಂದು ನೀಡಿರುವ ಹೇಳಿಕೆಯನ್ನೇ ಸಮೀಕ್ಷೆಗಳಲ್ಲಿ ತೋರಿಸಿದ್ದಾರೆ. ಕಳೆದ ಹತ್ತು ವರ್ಷಗಳಲ್ಲಿ ಒಂದೇ ಒಂದು ಸುದ್ದಿಗೋಷ್ಠಿ ನಡೆಸದ ಪ್ರಧಾನಿ ಮೋದಿ ಅವರ ಕಾರ್ಯವೈಖರಿ ಬಗ್ಗೆ ಯಾವುದೇ ಮಾಧ್ಯಮ ಧ್ವನಿ ಎತ್ತದಿರುವುದು ವಿಷಾದನೀಯ. ಮಾಧ್ಯಮಗಳ ಎಲ್ಲಾ ಸಮೀಕ್ಷೆಗಳು ಸುಳ್ಳಾಗಿದೆ. ಆದರೆ, ಮತದಾರರು ನಿಜವಾದ ಫಲಿತಾಂಶ ನೀಡಿದ್ದಾರೆ ಎಂದರು.

ಸಭೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಮುಕುಂದ ವರ್ಮ, ಈಶ್ವರ್, ಪಟ್ಟಣ ಪಂಚಾಯಿತಿ ಸದಸ್ಯ ಗಿರೀಶ್, ಸಂಪತ್, ಸುದೇಶ್, ಜಿಲ್ಲಾ ಗ್ಯಾರಂಟಿ ಸಮಿತಿ ಉಪಾಧ್ಯಕ್ಷ ಸಿದ್ದರಾಜು, ಕೆಪಿಸಿಸಿ ಸದಸ್ಯ ಬಸವರಾಜು, ಮುಖಂಡ ಮಧುವನಹಳ್ಳಿ ಶಿವಕುಮಾರ್, ಅಜ್ಜೀಪುರ ನಾಗರಾಜು, ಚೇತನ್ ದೊರೆರಾಜ್, ಮಾದೇಶ್, ಅಂಕರಾಜು, ಕಂಡಯ್ಯನಪಾಳ್ಯ ಮಾದೇಶ್, ಗ್ರಾಪಂ ಸದಸ್ಯ ಸಿದ್ದರಾಜು ಇನ್ನಿತರರು ಹಾಜರಿದ್ದರು.



ಹನೂರಿನ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಕೃತಜ್ಞತಾ ಸಭೆಯಲ್ಲಿ ಮಾಜಿ ಶಾಸಕ ನರೇಂದ್ರ ಮಾತನಾಡಿದರು.

> **ಪ್ರಧಾನಿ ನರೇಂದ್ರ ಮೋದಿ ಹಿಂದುತ್ವ ಹಾಗೂ ಶ್ರೀರಾಮನ ಹೆಸರಿನಲ್ಲಿ ಮತ ಯಾಚಿಸಿದ್ದರು. ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಿಸಿ ಕ್ರೆಡಿಟ್ ಪಡೆಯಲು ಯತ್ನಿಸಿದರು. ಆದರೆ, ಇವರ ಕಾರ್ಯವೈಖರಿಯನ್ನು ಶ್ರೀರಾಮನೇ ತಿರಸ್ಕಾರ ಮಾಡಿ ಅಯೋಧ್ಯೆಯ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯನ್ನು ಸೋಲಿಸಿದ್ದಾರೆ.**
> –ನಂಜುಂಡಸ್ವಾಮಿ, ಚಾಮುಲ್ ನಿರ್ದೇಶಕ

ಕಾಂಗ್ರೆಸ್, ಬಿಜೆಪಿ ಅಪಪ್ರಚಾರದಿಂದ ಬಿಎಸ್‌ಪಿಗೆ ಸೋಲು

ಚಾಮರಾಜನಗರ, ಜೂ.5–ಕಾಂಗ್ರೆಸ್ ಹಾಗೂ ಬಿಜೆಪಿ ಅಪಪ್ರಚಾರದಿಂದ ಬಿಎಸ್‌ಪಿಗೆ ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಕಡಿಮೆ ಮತಗಳು ಬಂದಿವೆ ಎಂದು ಬಿಎಸ್‌ಪಿ ಪರಾಜಿತ ಅಭ್ಯರ್ಥಿ ಎಂ.ಕೃಷ್ಣಮೂರ್ತಿ ಆರೋಪಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿ ಬಿಎಸ್‌ಪಿಗೆ ಹಿನ್ನಡೆಯಾಗಲು ಬಿಜೆಪಿ ಗೆದ್ದರೆ ಸಂವಿಧಾವನ್ನು ಬದಲಾಯಿಸುತ್ತಾರೆ ಎಂದು ಕಾಂಗ್ರೆಸ್ ಹಾಗೂ ಡಿಎಸ್‌ಎಸ್ ಸಂಘಟನೆಯ ಅನೇಕರು ಹಳ್ಳಿಹಳ್ಳಿಗಳಿಗೆ ಹೋಗಿ ಯಾವುದೇ ಕಾರಣಕ್ಕೂ ಬಿಎಸ್‌ಪಿಗೆ ಮತ ಹಾಕಬೇಡಿ. ಇದರಿಂದ ಬಿಜೆಪಿಗೆ ಶಕ್ತಿ ಬರುತ್ತದೆ ಎಂದು ಅಪಪ್ರಚಾರ ಮಾಡಿದರು. ಪ್ರಜ್ಞಾವಂತರು ಸಂವಿಧಾನ ಉಳಿವಿಗಾಗಿ ಕಾಂಗ್ರೆಸ್‌ಗೆ ಮತ ಹಾಕಿದ್ದಾರೆ ಹೊರತು, ಬಿಎಸ್‌ಪಿ ಸೋಲಿಸಲು ಹಾಗೂ ತಿರಸ್ಕರಿಸಬೇಕೆಂದಲ್ಲ. ಈ ನಡುವೆಯೂ ಬಿಎಸ್‌ಪಿಗೆ 15,903 ಮತಗಳು ಬಂದಿವೆ ಎಂದರು.

ಕ್ಷೇತ್ರ ಅಭಿವೃದ್ಧಿಗೆ ಆಗ್ರಹ: 1.80 ಲಕ್ಷ ಅಂತರ ಮತಗಳಿಂದ ಜಯಗಳಿಸಿರುವ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಅವರು ತಂದೆ ಸಚಿವ ಹೆಚ್.ಸಿ.ಮಹದೇವಪ್ಪ, ಕ್ಷೇತ್ರದ 7 ಕಾಂಗ್ರೆಸ್ ಶಾಸಕರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಕ್ಷೇತ್ರದ ಅಭಿವೃದ್ಧಿಗೊಳಿಸಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿಎಸ್‌ಪಿ ಜಿಲ್ಲಾಧ್ಯಕ್ಷ ಎನ್.ನಾಗಯ್ಯ, ಉಪಾಧ್ಯಕ್ಷ ಬ್ಯಾಡಮೂಡ್ಲು ಬಸವಣ್ಣ, ಜಿಲ್ಲಾ ಸಂಯೋಜಕ ಅಮಚವಾಡಿ ಪ್ರಕಾಶ್, ಜಿಲ್ಲಾ ಉಸ್ತುವಾರಿ ರಾಜಶೇಖರ್ ಮೂರ್ತಿ, ಟೌನ್ ಅಧ್ಯಕ್ಷ ಗಾಳೀಪುರ ರಂಗಸ್ವಾಮಿ, ಮುಖಂಡ ಕೃಷ್ಣಮೂರ್ತಿ ಹಾಜರಿದ್ದರು.



ಚಾ.ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಬಿಎಸ್‌ಪಿ ಪರಾಜಿತ ಅಭ್ಯರ್ಥಿ ಕೃಷ್ಣಮೂರ್ತಿ ಮಾತನಾಡಿದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮನೆ ಬಾಡಿಗೆಗೆ ಇದೆ
ಅನಿಕೇತನ ರಸ್ತೆ, ಕುವೆಂಪುನಗರ 3 ಬೆಡ್ ರೂಂ, ಪೂರ್ವ ಮೊದಲ ಮಹಡಿ ಕಚೇರಿ ಉಪಯೋಗಕ್ಕಾಗಿ
7349340596
9900699524
BROKER EXECUSE

ಬೇಕಾಗಿದ್ದಾರೆ ಸಂಥಿಲ್ ಕುಮಾರ್ ಟೆಕ್ಸ್‌ಟೈಲ್
ದಾಸಪ್ರಕಾಶ್ ಹೋಟೆಲ್ ಹತ್ತಿರ, ಗಾಂಧಿ ಚೌಕ, ಹಳೆ ಬ್ಯಾಂಕ್ ರಸ್ತೆ, ಮೈಸೂರು–570001
ಖಾಲಿ ಇರುವ ಕೆಲಸಗಳು
1. ಅಕೌಂಟೆಂಟ್ (B.Com, Tally ERP 9 Pref.)
2. ಇನ್‌ವೆಂಟರೀ (Data Entry Programmers)
3. ಡೆಲಿವರಿ ಕೌಂಟರ್ (ಅನುಭವವುಳ್ಳವರಿಗೆ)
ಆಸಕ್ತಿವುಳ್ಳವರು 1) ಆಧಾರ್ ಕಾರ್ಡ್ 2) ಫೋಟೋ, 3) ಬಯೋಡಾಟಾ ತರತಕ್ಕದ್ದು
ಸಂದರ್ಶನದ ದಿನಾಂಕ ಮತ್ತು ವೇಳೆ: 5–06–2024 ರಿಂದ 7–06–2024ರವರೆಗೆ ಬೆಳಿಗೆ 11.00 ರಿಂದ ಸಂಜೆ 4.00 ರವರೆಗೆ
ಸಂಪರ್ಕಿಸಿ: 8884450015

PG ಬಾಡಿಗೆಗೆ ಇದೆ
14 ರೂಂ, ಅಟ್ಯಾಚ್ ಬಾತ್‌ರೂಂ ಒಂದು ದೊಡ್ಡ ಹಾಲ್, ರಾಮಕೃಷ್ಣನಗರ ಸಾಯಿಬಾಬಾ ದೇವಸ್ಥಾನ, ಸುಯೋಗ ಆಸ್ಪತ್ರೆ ಹತ್ತಿರ, ಮೈಸೂರು
7676265267
9448890254

WE ARE HIRING...
RETIRED OFFICIALS & HOUSE WIVES IN ESTEEMED COMPANY
MINIMUM QUALIFICATION 10 + PUC AGE BETWEEN 30 TO 65
EARNING OPPORTUNITIES 20000 TO UPTO 50000/- PM
Plus Incentives & Other Perks
Type - Part TIME, Location: Mysore
HEMALATHA
9483516648

WANTED
DISTRIBUTOR OPPORTUNITY (FMCG) REFUNDABLE INVESTMENT: 1 LAC TO 5 LAC
EARN FIXED INCOME MONTHLY
MARGIN UP TO 20%
9740914857

ತಕ್ಷಣ ಬೇಕಾಗಿದ್ದಾರೆ
ಆಫೀಸ್ ಬಾಯ್ ಕೆಲಸಕ್ಕೆ ಹುಡುಗ ಬೇಕಾಗಿದ್ದಾರೆ. ಆಫೀಸ್ ಕೆಲಸಕ್ಕೆ ಕಂಪ್ಯೂಟರ್ ಜ್ಞಾನವುಳ್ಳ ಮಹಿಳೆ ಬೇಕಾಗಿದ್ದಾರೆ. ಸೇಲ್ಸ್ ಮನ್ ಕೆಲಸಕ್ಕೆ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಉತ್ತಮ ಸಂಬಳ ಮತ್ತು ಇನ್ಸೆಂಟೀವ್ ನೊಂದಿಗೆ
9902721839
7676582019
ವಿಳಾಸ: ಶ್ರೀ ಭ್ರಮರಾಂಭ ಟ್ರ್ಯಾಕ್ಟರ್ಸ್, ಮೈಸೂರು ಟಿನರೀಪುರ ಮೇನ್ ರೋಡ್, ಆಲನಹಳ್ಳಿ ಸಿಗ್ನಲ್ ಹತ್ತಿರ, ಮೈಸೂರು

ADMISSION OPEN
Govt.of Karnataka Dept. of Tourism
FOOD CRAFT INSTITUTE-MYSURU
EXHIBITION GROUND. ITTEGEGUDU
HOTEL MANAGEMENT
100% Job Placements | Govt. College | 80% Practical Classes
www.fcimysuru.com
6362018821

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
9008711654

ಮನೆ ಬಾಡಿಗೆಗೆ
2BHK (ನೆಲ ಮಹಡಿ,) ಸುಣ್ಣದ ಕೇರಿ 8ನೇ ಕ್ರಾಸ್, ನಾಲಬೀದಿ
9742210516

Can work form home!!!
EE/EC Engineers, If interested to work on ES, IOT and FPGA Hardware and software, Please send your brief resume with photo to smnarasimhan@hotmail.com

ತಕ್ಷಣ ಬೇಕಾಗಿದ್ದಾರೆ
1. ಗಾರ್ಡನ್ ಕಟ್ಟರ್–ಅನುಭವವಿರಬೇಕು (ಮೇಟಗಳ್ಳಿ)
2) ಗಾರ್ಡನ್ ಕೆಲಸಕ್ಕೆ – ಮಹಿಳೆಯರು (ಮೇಟಗಳ್ಳಿ)
3) ಹೌಸ್ ಕೀಪಿಂಗ್ – ಹುಡುಗರು ಮತ್ತು ಮಹಿಳೆಯರು (ಒಂಟಿಕೊಪ್ಪಲ್, ವಿಜಯನಗರ, ಹಿನಕಲ್)
ESI + PF + ಊಟ ವ್ಯವಸ್ಥೆ ಇರುತ್ತದೆ.
9739973927
9880419847

ಉದ್ಯೋಗವಕಾಶ
ಮಹಿಳೆಯರು, ಯುವತಿಯರು, ನಮ್ಮ ಶಾಖೆಗಳಲ್ಲಿ ವಯಸ್ಸಾದ ಹಿರಿಯ ನಾಗರೀಕರನ್ನು ನೋಡಿಕೊಳ್ಳಲು ಹೋಂ ನರ್ಸ್‌ಗಳು ಬೇಕಾಗಿದ್ದಾರೆ, ತಿಂಗಳ ವೇತನ :13000 ರಿಂದ 20000 ರೂ.ವರೆಗೆ
ಉಚಿತ ಊಟ ಮತ್ತು ವಸತಿಯೊಂದಿಗೆ ವಯೋಮಿತಿ :18–50 ವರ್ಷ
9035113222

FREE COACHING COMMERCE
Excellent Coaching 1st & 2nd PUC in Accounts, Statistics, Basic Maths etc. Also for B.Com, BBM, Spoken English, English Vocabulary, Bank Exams, Only 6 Students per Batch 100% individual Attention
Prof. Sharma
9901932751

ಬೇಕಾಗಿದ್ದಾರೆ
ಸನ್ ಡೈರೆಕ್ಟ್ ಡಿ.ಟಿ.ಹೆಚ್‌ನಲ್ಲಿ ಟೆಕ್ನಿಷಿಯನ್ ಆಗಿ ಕೆಲಸ ಮಾಡಲು ದ್ವಿಚಕ್ರ ವಾಹನವಿರುವ ಹುಡುಗರು ಬೇಕಾಗಿದ್ದಾರೆ. ITI, SSLC, PUC ಪಾಸ್ ಅಥವಾ ಫೇಲ್ ಆಗಿದ್ದವರು ತರಬೇತಿಯನ್ನು ನಾವೇ ಕೊಡುತ್ತೇವೆ. ಆಕರ್ಷಕ ಸಂಬಳ ಮತ್ತು ಇನ್‌ಸೆಂಟೀವ್ ಇರುತ್ತದೆ. ಸಂಪರ್ಕಿಸಿ:
9964555920, 8867019475

HOUSES & OFFICE SPACE FOR RENT
@ Saraswathipuram Kuvempunagar & Surroundings
S.S. PROPERTY SERVICES (Opp. Kuvempu School) S.S. Puram, Mysore
9342125252

SITE FOR SALE
37.5X60 SQFT CH4, Dr.Ambedkar Road Krishnapurthypuram Mysuru-4
9886742765
0821-4246025

GODOWN FOR RENT
Hootagalli Industrial Area 2500 Sqft
9964450220
9060573900

ಬೇಕಾಗಿದ್ದಾರೆ
ಮೈಸೂರಿನ ರಾಮಕೃಷ್ಣನಗರ ಆಂದೋಲನ ಸರ್ಕಲ್ ಹತ್ತಿರವಿರುವ ಸಂಸ್ಥೆಗೆ ಆಫೀಸ್ ಅಟೆಂಡರ್ (ಆಫೀಸ್ ಬಾಯ್) ಕೆಲಸ ಮಾಡಲು SSLC ಹಾಗೂ ಕಂಪ್ಯೂಟರ್ ಬೇಸಿಕ್ ಜ್ಞಾನವಿರುವ 18 ರಿಂದ 35 ವರ್ಷ ವಯಸ್ಸು ಒಳಗಿನ ಹುಡುಗರು ಬೇಕಾಗಿದ್ದಾರೆ. ವೇತನ ತಿಂಗಳಿಗೆ 15500 ರೂಪಾಯಿಗಳು ಹಾಗೂ ESI, PF ಹಾಗೂ ಭಾನುವಾರ ರಜಾ ಇರುತ್ತದೆ. ಸಂಪರ್ಕಿಸಿ
9731976148

ಅನುಬಂಧ
ವಧುವರರನ್ನು ಹುಡುಕಲು ಸಹಾಯ ಬೇಕೇ? ನಮಗೆ ಕರೆ ಮಾಡಿ ಪ್ರತಿ ದಿನ ವಧುವರರ ನೇರ ಸಂದರ್ಶನ ಇರುತ್ತದೆ.
6361740552

ಹೆಲ್ತ್ ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲಮೋ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. GNM/BSC ನರ್ಸಿಂಗ್ ಆದವರಿಗೆ ಕೆಲಸವಿದೆ. ಸೆಂಟ್ ಮೇರಿಸ್ ಆಸ್ಪತ್ರೆ, ಸಿಲ್ಕ್ ಫ್ಯಾಕ್ಟರಿ ಸರ್ಕಲ್, NIE ಕಾಲೇಜ್ ಪಕ್ಕ, ಮೈಸೂರು
9916908454

WANTED SECURTIY GUARDS
Qualification SSLC & Above
Age - 22 Yrs to 45 Yrs
Salary - Rs. 19000/-
Benefits - ESI, PF, Bonus, EL, Gratuity Weekly Off.
9538014456
9008794218

WANTED
BAMS DOCTOR to work in a reputed Ayurvedic Wellness Centre
Contact Immedi-
8105912167

SITE FOR SALE
1) Jayapura 30x40 E/F (Next to CNM School)
2) Yelwala 20x30 W/F (KHB Nisarga Badavane Block-1) -15 L
3) Hunsur 30x40 S/F (Behind KSRTC Bus Depot) -20 L
Direct Owner
8892010520
9164682929

SITE FOR SALE
30X50 S/F BRAMMANANDHA SAGARA PHASE I
8050821108
8792207164

SITE FOR
30X40 EAST FACE VIJAYANAGAR 4TH STAGE
8217042841

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING Work
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳು ಕೈಗಾರಿಕ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ.
ವಯಸ್ಸು: 18 ರಿಂದ 30 ವರ್ಷ
ವಿದ್ಯಾರ್ಹತೆ: ITI & Diploma
ರಿಯಾಯಿತಿ ದರದಲ್ಲಿ ಊಟದ ಮತ್ತು ವಸತಿ ಸೌಲಭ್ಯವಿರುತ್ತದೆ.
8277047300

WANTED
Female graduates for montessori preschool in bogadi.
91132 57683

ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ಹುಣಸೂರಿನ ಎಪಿಎಂಸಿ ಮಾರುಕಟ್ಟೆ ಎದುರು ಬಿ.ಎಂ ರಸ್ತೆಯಲ್ಲಿರುವ ಶ್ರೀ ಮೈಲಾರಲಿಂಗೇಶ್ವರ ಸರ್ವಿಸ್ ಸ್ಟೇಷನ್‌ನಲ್ಲಿ ಪಂಪ್ ಮ್ಯಾನ್ ಕ್ಯಾಷಿಯರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ ದೂರವಾಣಿ ಸಂಖ್ಯೆ
9480380562
9964769783

ಮನೆ ಮಾರಾಟಕ್ಕಿದೆ
100% ವಾಸ್ತು 30x40 2BHK ಅರವಿಂದ ನಗರ, (ಕುವೆಂಪುನಗರ) 1.35 Cr. (Nego)
9844756558

AVAILABLE
SHOP NO.3 FOR RENT (WEST SIDE) MEASURING 10X10 FT
RENT RS.3500/- ADVANCE RS.35,000/-
GODOWN FOR RENT (NORTH SIDE) MEASURING 10X40 FT
RENT RS.10,000/- ADVANCE RS.100000
(BOTH ARE NEGOTIABLE)
NO.894/A, 4TH MAIN ROAD, 27TH CROSS, CORNER, VIDYARANYAPURAM, NEAR STERLING THEATRE, MYSORE
9448872684,9900079871

ಅಡುಗೆಯ ಟೀಕಾಫಿ ಸಪ್ಲೈಯರ್ಸ್ ಬೇಕಾಗಿದ್ದಾರೆ
Mess, PG ಗೆ ಅಡುಗೆ ಕೆಲಸಕ್ಕೆ ಫಾಸ್ಟ್‌ಫುಡ್‌ಗೆ (ಪುರುಷ) ಮಹಿಳಾ ಪಿಜಿಗೆ ಫ್ಯಾಕ್ಟರಿಗಳಿಗೆ ಊಟ ತಿಂಡಿ, ಟೀಕಾಫಿ ಸಪ್ಲೈ ಮಾಡಲು ಹುಡುಗರು ಬೇಕು ಊಟ–ವಸತಿ ಇರುತ್ತದೆ
7483894889

ಉಚಿತ ತಬೇತಿ
ಮನೆಯಿಂದಲೇ ಬತ್ತಿಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ. ತರಬೇತಿಗಾಗಿ
7406375196
9880548596

SAI NALANDA CENTRAL SCHOOL, K R NAGAR
WANTED
1.B.A. B.Sc./M.A. MSc. With B.Ed. (Hindi)
2. BCA, MCA, NTT.
3. HOUSE KEEPING.
*GOOD ENGLISH FLUENCY PREFERRED
*FREE ACCOMMODATION
8722073456,8722093456
nalandakrn@gmail.com, Web: www.sainalanda.com

ತಕ್ಷಣವೇ ಬೇಕಾಗಿದ್ದಾರೆ
ಮೈಸೂರು ಹೆಬ್ಬಾಳಿನ ಕಂಪನಿಯಲ್ಲಿ ಕೆಲಸ ಮಾಡಲು ಹುಡುಗರು, ಹುಡುಗಿಯರು, ಗಂಡಸರು, ಹೆಂಗಸರು, ಟೈಲರುಗಳು ಮತ್ತು ಹೆಲ್ಪರ್‌ಗಳು, ಸೆಕ್ಯೂರಿಟಿಗಳು ಬೇಕಾಗಿದ್ದಾರೆ.
ESI & PF ವಾರದ ರಜೆ ಇರುತ್ತದೆ.
7795285485
8105249880

VARSHA DEVELOPERS & BUILDERS SITES FOR SALES
MUDA & DTCP Approved
Mysore to Hunsur Highway road
Near Yelawala & Manugana halli
Near Hootagalli Housing Board
KRS Main Road Mogarahalli
8088189896
9620615226

ಬೇಕಾಗಿದ್ದಾರೆ
ಕರ್ನಾಟಕದಾದ್ಯಂತ Full time/part time ಹೆಸರಾಂತ MNC ಕಂಪನಿ, ಆಫೀಸ್ ಕೆಲಸಕ್ಕೆ (Receptionist, Data Entry Account) ಯುವಕ / ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+OT [Food and Room Free].
9964435081
9731029241

ಬೇಕಾಗಿದ್ದಾರೆ
ಸೆಕ್ಯೂರಿಟಿ ಮತ್ತು ಫೀಲ್ಡ್ ಆಫೀಸರ್ ಬೇಕಾಗಿದ್ದಾರೆ. ಸಂಬಳ ರೂ.15000 (+ESI, PF) Weekly Off)
ವಿದ್ಯಾರ್ಹತೆ – SSLC ಓದಲು, ಬರೆಯಲು, ಬರಬೇಕು) ಮೈಸೂರಿನ ಅಗ್ರಹಾರ, ಕೆ.ಜಿ.ಕೊಪ್ಪಲ್, ರಾಮಸ್ವಾಮಿ ಸರ್ಕಲ್, ಕೆ.ಆರ್.ಎಸ್. ಮತ್ತು ಶ್ರೀರಂಗಪಟ್ಟಣ ಸುತ್ತಮುತ್ತಲಿನವರಿಗೆ ಮೊದಲ ಆದ್ಯತೆ.
9148888861,8197269895
9606973419

WANTED URGENT
ಕಂಪನಿಯಲ್ಲಿ ಖಾಲಿ ಇರುವ ವಿವಿಧ ವಿಭಾಗಕ್ಕೆ Age (18-24) 10 PUC, Diploma, BBMಯಾದ Earn Start (10500 ರಿಂದ 16500)PM ನೇರ ಸಂಪರ್ಕಿಸಿ NO FEE ಪರಸ್ಥಳವರಿಗೆ ಮಾತ್ರ ವಸತಿಗಾಗಿ Call ಕಾವ್ಯ
9342827788
Walk In Time (9am to 5 pm) Mysore

ಬೇಕಾಗಿದ್ದಾರೆ
ಪ್ರಗತಿ ವಿದ್ಯಾಸಂಸ್ಥೆ, ಸರಗೂರು, ಮೈಸೂರು ಜಿಲ್ಲೆ – 571121
9448063043
E-mail: pragathi.edu.in@gmail.com
ಮುಖ್ಯ ಶಿಕ್ಷಕರು : M.A B.Ed/MSc, B.Ed -01 (Expericence)
ಸಮಾಜ ಶಿಕ್ಷಕರು: B.A B.Ed- 01
ಇಂಗ್ಲಿಷ್ ಶಿಕ್ಷಕರು: PUC, DEd- 01

ಮನೆ ಬಾಡಿಗೆಗೆ ಲಭ್ಯವಿದೆ
1200 Sqft 60x40 ನಿವೇಶನ, ಅನಿಕೇತನ ರಸ್ತೆ, ಕುವೆಂಪುನಗರ, 2 ಬೆಡ್ ರೂಮ್, 1 ಅಟ್ಯಾಚ್‌ಡ್ ಟಾಯ್ಲೆಟ್, AC Garage, ಸೋಲಾರ್, ಗಾರ್ಡನ್, ರೆಂಟ್ ರೂ.23000 ಅಡ್ವಾನ್ಸ್ 2,50,000 ಸಂಪರ್ಕಿಸಿ: ವೀಣಾ.
9619471970

ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ
HM- 01
BSc BED- 02
Spoken English - 02
9448071449
8147472526

ಮನೆ ಬಾಡಿಗೆಗೆ ಇದೆ
2BHK + ಕಿಚನ್ + ಸೋಲಾರ್ 8ನೇ ಕ್ರಾಸ್, ಡಿಪೋ ಪಕ್ಕ
8971338331

ಉದ್ಯೋಗವಕಾಶ
ನಿವೃತ್ತಿ, ಸ್ವಯಂ ನಿವೃತ್ತಿ ಸರ್ಕಾರಿ ಅಧಿಕಾರಿಗಳಿಗೆ ಹಾಗೂ ಗೃಹಿಣಿಯರಿಗೆ ಮತ್ತು ಆಸಕ್ತಿ ಇರುವ ಅಭ್ಯರ್ಥಿಗಳಿಗೆ ಅರ್ಜಿಗಳನ್ನು ಆಫೀಸರು ಹುದ್ದೆಗೆ ಆಹ್ವಾನಿಸಲಾಗಿದೆ. 50 ವರ್ಷ ಹಳೆಯ ಕಂಪನಿ ಫಿಕಡ್ ತಿಂಗಳ ಸಂಬಳ, ESI / PF, FMI
9110676257
9739239004

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ರೆಸ್ಟೋರೆಂಟ್ ಒಂದಕ್ಕೆ ಅಡುಗೆ ಸಹಾಯಕರು ಹಾಗೂ ಅನುಭವ ಇರುವ ಕ್ಯಾಷಿಯರ್ ಒಬ್ಬರು ಬೇಕಾಗಿದ್ದಾರೆ. ಒಳ್ಳೆಯ ಸಂಬಳ ನೀಡಲಾಗುವುದು. ಸಂಪರ್ಕಿಸಿ:
9900661620

ಬೇಕಾಗಿದ್ದಾರೆ
ಮೈಸೂರಿನ ಕಾಳಿದಾಸ ರೋಡ್, ಜಯಲಕ್ಷ್ಮೀಪುರಂನಲ್ಲಿ ಇರುವ ಶುದ್ಧ ಸಸ್ಯಾಹಾರಿ ರೆಸ್ಟೋರೆಂಟ್‌ಗೆ ಅನುಭವವುಳ್ಳ / Experienced 1) ಅಡುಗೆ ಭಟ್ಟರು South Cook, (2) Hindi Indian Allrounder ಕೆಲಸಕ್ಕೆ ಬೇಕಾಗಿದ್ದಾರೆ. ಆಕರ್ಷಕ ಸಂಬಳ, ವಸತಿ ಹಾಗೂ ಉತ್ತಮ ಸೌಲಭ್ಯಗಳನ್ನು ನೀಡಲಾಗುತ್ತದೆ. ಸಂಪರ್ಕಿಸಿ:
7899028086

WANTED IMMEDIATELY
Boiler Operator Class 2 Male Exp: 1 to 2 years.
Cooks Male Exp 1 to 2 years.
Quality Executive (Qualification B.Sc., Food Science)
Male Exp: Min. 1 year.
Address: The Akshayapatra Foundation, Mysore, No. 31, 18th Cross, Jayanagar, Mysore.
9964451366

ಸೈಟು ಮಾರಾಟಕ್ಕಿದೆ
25x35 ಅಳತೆಯ ಸೈಟು, ವಿಜಯನಗರ ನಾಲ್ಕನೇ ಹಂತ, ಮೈಸೂರು, ಮಾರಾಟಕ್ಕಿದೆ. Opposite SVEI School. Contact
9343666777

ಬೇಕಾಗಿದ್ದಾರೆ
ಗುಡ್ ವಿಶ್ ಫೌಂಡೇಷನ್ ಸೇವಾ ಸಂಸ್ಥೆಯೊಂದರಲ್ಲಿ ಅಡುಗೆ ಕೆಲಸ ಮಾಡಲು ಮಹಿಳೆಯೊಬ್ಬರು ಬೇಕಾಗಿದ್ದಾರೆ. ಊಟ ಮತ್ತು ವಸತಿ ಉಚಿತವಾಗಿ ನೀಡಲಾಗುತ್ತದೆ ಮತ್ತು ವೇತನವನ್ನು ನೀಡಲಾಗುತ್ತದೆ. ಪುರುಷ ಅಭ್ಯರ್ಥಿ Warden ಕೆಲಸಕ್ಕೆ ಬೇಕಾಗಿದ್ದಾರೆ. ಸ್ಥಳ: (ಎನ್‌ಪಿಎಸ್ ಸ್ಕೂಲ್ ಹಿಂಭಾಗ), ವಿಜಯನಗರ, ಮೈಸೂರು. ಸಂಪರ್ಕಿಸಿ:
7795708156, 9071107156


JNANAJYOTHI VIDYALAYA (Beerihundi)
Wanted Teachers Academic Coordinator - 1
English language teacher - 1
Hindi Teacher - 1, Computer Teacher.
Contact immediately
8197057626, 9845390377

WANTED
GUEST HOUSE, SIDDARTHA NAGAR, MYSORE
COOK, WAITER
PF AND ESI. ಊಟ ಮತ್ತು ವಸತಿ ಸೌಲಭ್ಯ ವ್ಯವಸ್ಥೆ ಇರುತ್ತದೆ.
9945609391, Satish

AFFIDAVIT
I, Mr. Mohammed Faisal Khan, residing at #174/4, 9, 2nd Stage, Revenue Extension, Kesare, R.S. Naidu Nagar, Mysore-570 007, do hereby solemnly affirm and state an oath as follows:I swear that my father's correct name is Mohammed Sayeed Khan and the same name has been mentioned in my all documents. But in my father's Aadhar Card and passport, my father's name is unfortunately mentioned as Sayeed Khan. I hereby state that both the names i.e. Mohammed Sayeed Khan and Sayeed Khan are belongs to one and the same person. I am swearing this affidavit.
Sd/- Mohammed Faisal Khan

ಬೇಕಾಗಿದ್ದಾರೆ (Job Vaccancy)
ಮೇಟಗಳ್ಳಿ ಕೈಗಾರಿಕೆ ಕಾರ್ಖಾನೆಯಲ್ಲಿ ಬೆಳಗ್ಗೆ 6 ರಿಂದ 2 ಮತ್ತು ಮಧ್ಯಾಹ್ನ 2 ರಿಂದ 6 ರವರೆಗೆ 2 ಶಿಫ್ಟ್‌ನಲ್ಲಿ ಕೆಲಸ ಮಡಲು ಮಹಿಳೆಯರು ಬೇಕಾಗಿದ್ದಾರೆ. ವಯೋಮಿತಿ: 18 ರಿಂದ 35. ವಿದ್ಯಾರ್ಹತೆ: SSLC Pass / Fail. ಸಂಬಳ: 11498/- + ESI + PF. ಸಂಪರ್ಕಿಸಿ:
Komal Enterprises
Near GRS Fantasy Park Backside, Metagallil, Mysore.

CHANGE OF NAME
I, Ashish Karnire, S/o. Late Dr. K. Yogish, aged 27 years residing at # 10808, 2nd phase, 4th stage, Vijayanagar, Mysuru-570017, swear that, I have changed my minor Daughter's name from KAIRA KENDALL KARNIRE to KAIRA KENDALL on my own accord. Hence I affirm on oath that in all the future records, deeds and transactions whatsoever, my Daughter's name will be KAIRA KENDALL vide affidavit sworn before Notary K.B. Nagesha, Mysore dated 03-06-2024.

GEMINI ROLLING SHUTTER
MANUFACTURER OF : ROLLING SHUTTER MATERIALS & PARTS

9740788263

FOR SALE
1. 20x30, 30x40, 30x50 Near Defence Apartments, HD Kote Road
2. 30x50 Near Varuna Lake
3. 2&3 BHK Flats at RK Nagar
4. 70x140 Farm House Plots @ KRS Back Water Attach 20L
5. 50x30 Site@Saraswathi Puram
6. 20x30, Sites For Sale At Yelwala
30x40 Sites at Bogadi Rainbow School
PRAKRUTHI PROPERTIES
95386 90359, 90359 90359

100% TEAK WOOD
FACTORY FINISH DOORS & FRAMES @ FACTORY DEPOT RATES

10 YEARS WARRANTY*
9845426862
9901291267

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ದಟ್ಟಗಳ್ಳಿ, ಮೈಸೂರು
ಬೇಕಾಗಿದ್ದಾರೆ
1. ಡ್ರೈವರ್ಸ್ ಶಾಲಾ ವಾಹನ ಚಲಾಯಿಸಲು ಹೆವಿ ಲೈಸನ್ಸ್ ಹೊಂದಿರುವ ಡ್ರೈವರ್ಸ್ ಬೇಕಾಗಿದ್ದಾರೆ.
2. ಮಹಿಳಾ ಆಯಾ ಅನುಭವಕ್ಕೆ ತಕ್ಕಂತೆ ಆಕರ್ಷಕ ವೇತನ ನೀಡಲಾಗುವುದು.
9110851597

KITCHEN INTERIOR
Starts @ ₹99,000/-*
Home Space Mart
Home Interiors ★ Office Interiors
*T&C Apply
91089 23123

REQUIRED
SALES ENGINEER
For Industrial Oils
Experience : 1- year / Fresher.
Qualification : ITI, Diploma, B.Com., B.Sc
Salary - Negotiable.
Vehicle - 2 Wheeler is a Must.
Place - Mysore.
99720 29007

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

SITES for SALE
JP Nagar Ring Road
30 x 40 - 33 Lakhs, Near Gurur Bus Stop, Ramabainagar,Mysore.
DTCP approved (Corporation limits)
1.5 Kms from JP Nagar Ring Road
8660105902


ಸ್ಕೂಲ್ ಯೂನಿಫಾರಂ ಹೋಲ್‌ಸೇಲ್ ಬೆಲೆಯಲ್ಲಿ
JSS, CKC ನಟರಾಜ ಕಾನ್ವೆಂಟ್ ಮರಿಮಲ್ಲಪ್ಪ, ಸೇಂಟ್‌ಮೇರೀಸ್ ಸೇಂಟ್ ರೊಸೆಲೋ
ಷೂಗಳು, ಸಾಕ್ಸ್ ಬ್ಯಾಗ್‌ಗಳು
ಭಾವಸಾರ್ ಶ್ರೀಗಣೇಶ್
ಅಗ್ರಹಾರ, ಬಸವೇಶ್ವರ ರಸ್ತೆ 5ನೇ ಕ್ರಾಸ್, ಮೈಸೂರು

ಬೇಕಾಗಿದ್ದಾರೆ
ಆಫೀಸ್ ರಿಸೆಪ್ಷನಿಸ್ಟ್ ಕಂಪ್ಯೂಟರ್ ಜ್ಞಾನ – ಟ್ಯಾಲಿ
ಮಾರುತಿ ವ್ಯಾನ್ ಡ್ರೈವರ್ ಡಿಎಲ್ ಹೊಂದಿರಬೇಕು
ಸನ್‌ಜೋನ್ ಸೋಲಾರ್ ಸಿಸ್ಟಮ್ಸ್ ಕುವೆಂಪುನಗರ ಮೈಸೂರು
98451 75443

ಕೆಲಸಕ್ಕೆ ಬೇಕಾಗಿದ್ದಾರೆ
ನಂದಿನಿ ಹಾಲಿನ ಕೇಂದ್ರದಲ್ಲಿ ಕೌಂಟರ್ ಸೇಲ್ಸ್ ಮಾಡಲು ಕೆಲಸಕ್ಕೆ ಬೇಕಾಗಿದ್ದಾರೆ
ವಯಸ್ಸು 20 ರಿಂದ 40 ವರ್ಷ
ವಿಳಾಸ : ಚಾಮುಂಡಿಪುರಂ ಜೆಎಲ್‌ಬಿ ರೋಡ್ ಮೈಸೂರು
9380405909

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋಚರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು-1

ಬೇಕಾಗಿದ್ದಾರೆ
ಗ್ರಾಫಿಕ್ ಡಿಸೈನರ್ Corel Draw & Photoshop ಕಲಿತಿರಬೇಕು
ಹೆಲ್ಪರ್ಸ್ ಹುಡುಗರು
ಟಾಟಾ ಏಸ್ ಡ್ರೈವರ್
ಆಕರ್ಷಕ ಸಂಬಳ
ಮಂಡಿ ಮೊಹಲ್ಲಾ, ಮೈಸೂರು
Call: 91082 20848

ಅಡುಗೆಯವರು ಬೇಕಾಗಿದ್ದಾರೆ
ಮೈಸೂರು ನಿವೇದಿತಾ ನಗರದಲ್ಲಿ ಇರುವ ಮನೆಯಲ್ಲಿಯೇ ಉಳಿದುಕೊಂಡು ಅಡುಗೆ ಕೆಲಸ ಮಾಡುವವರು ಬೇಕಾಗಿದ್ದಾರೆ, ಉತ್ತಮ ಸಂಬಳ ಉಳಿದುಕೊಳ್ಳಲು ವ್ಯವಸ್ಥೆ ಮತ್ತು ಇತರ ಸೌಲಭ್ಯಗಳನ್ನು ನೀಡಲಾಗುತ್ತದೆ. ಆಸಕ್ತರು ಕೂಡಲೇ ಸಂಪರ್ಕಿಸಿ
6364281515

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8880558064

ವಿವಾಹ ಭಾಗ್ಯ
ಎಲ್ಲಾ ಧರ್ಮದ, ಭಾಷೆಯ ಹಾಗೂ ಜಾತಿಯ ವಧು ವರರಿಗಾಗಿ ಸಂಪರ್ಕಿಸಿ
1) ಮೊದಲನೆ ಮದುವೆ
2) ಎರಡನೆ ಮದುವೆ
3) ವಿಧವೆ / ವಿಧುರರು
MRJ Matrimony
8904890413, 8904890419

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9108566022

ಬೇಕಾಗಿದ್ದಾರೆ
ಯುವಕ ಯುವತಿಯರಿಗೆ ಕಂಪೆನಿ ಕೆಲಸದಲ್ಲಿ ಸುವರ್ಣಾವಕಾಶ. ಸ್ಥಳ: ಸುಳ್ಯ; ಆಸಕ್ತರು ಸಂಪರ್ಕಿಸಿರಿ
8618761480

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡಿ ಪ್ರತಿ ತಿಂಗಳಿಗೆ ರೂ. 15,000 ಸಂಪಾದಿಸಿ.
Mob: 9731891409

ಮೈಸೂರು ಮಿತ್ರ 45 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಮತ ಎಣಿಕೆ ಪ್ರಕ್ರಿಯೆ ಪೂರ್ಣ: ಮೈಸೂರು ಡಿಸಿ ಕಚೇರಿ ಬಳಿಯ ಗೋದಾಮಿನಲ್ಲಿ ಇವಿಎಂಗಳು ಭದ್ರ





ಮೈಸೂರು, ಜೂ. 5(ಆರ್‌ಕೆ)– 2024ರ ಲೋಕಸಭಾ ಸಾರ್ವತ್ರಿಕ ಚುನಾವಣಾ ಮತ ಎಣಿಕೆ ನಿನ್ನೆಯಷ್ಟೇ ಪೂರ್ಣಗೊಂಡು ಫಲಿತಾಂಶ ಪ್ರಕಟವಾಗಿರುವುದರಿಂದ ಮೈಸೂರಿನ ಸಿದ್ಧಾರ್ಥ ನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಬಳಿಯ ಗೋದಾಮಿನಲ್ಲಿ ಇವಿಎಂ ಮತ್ತು ವಿವಿ ಪ್ಯಾಟ್ ಯಂತ್ರಗಳನ್ನು ಸುರಕ್ಷಿತವಾಗಿ ಇರಿಸಲಾಗಿದೆ.

ಮೈಸೂರಿನ ಪಡುವಾರಹಳ್ಳಿ ಬಳಿ ವಾಲ್ಮೀಕಿ ರಸ್ತೆಯ ಮಹಾರಾಣಿ ಸರ್ಕಾರಿ ಮಹಿಳಾ ಕಾಲೇಜು ಮತ್ತು ನಿರ್ವಹಣಾ ಕಾಲೇಜು ಕೇಂದ್ರದಲ್ಲಿ ಮತ ಎಣಿಕೆ ನಡೆದು ಪ್ರಕ್ರಿಯೆ ಪೂರ್ಣಗೊಳ್ಳುತ್ತಿದ್ದಂತೆಯೇ ಮಂಗಳವಾರ ರಾತ್ರಿ ವಿರಾಜಪೇಟೆ ಮತ್ತು ಮಡಿಕೇರಿ ವಿಧಾನಸಭಾ ಕ್ಷೇತ್ರಗಳ ಇವಿಎಂ ಮತ್ತು ವಿವಿ ಪ್ಯಾಟ್‌ಗಳನ್ನು, ಕೊಡಗು ಜಿಲ್ಲಾ ಕೇಂದ್ರದ ವಿದ್ಯುನ್ಮಾನ ಮತಯಂತ್ರಗಳ ಭದ್ರತಾ ಕೊಠಡಿಗೆ ಎರಡು ಪ್ರತ್ಯೇಕ ವಾಹನಗಳಲ್ಲಿ ಶಸ್ತ್ರಸಜ್ಜಿತ ಪೊಲೀಸ್ ಬೆಂಗಾವಲಿನಲ್ಲಿ ಕಳುಹಿಸಿ ಕೊಡಲಾಯಿತು.

ಉಳಿದಂತೆ ಮೈಸೂರು ನಗರ ಮತ್ತು ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರಗಳ ವಿದ್ಯುನ್ಮಾನ ಮತಯಂತ್ರ ಹಾಗೂ ವಿವಿ ಪ್ಯಾಟ್‌ಗಳನ್ನು ಸಿದ್ಧಾರ್ಥ ಬಡಾವಣೆಯ ವೇರ್‌ಹೌಸ್‌ಗೆ ಕೊಂಡೊಯ್ದು ಸುರಕ್ಷಿತವಾಗಿ ಇರಿಸಲಾಗಿದೆ.

ಆಯಾ ಕ್ಷೇತ್ರಗಳ ಸಹಾಯಕ ಚುನಾವಣಾಧಿಕಾರಿಗಳು, ಸಿಬ್ಬಂದಿ, ಪೊಲೀಸ್ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಇವಿಎಂ ಮತ್ತು ವಿವಿ ಪ್ಯಾಟ್‌ಗಳನ್ನು ಜಿಪಿಎಸ್ ಹೊಂದಿರುವ ವಾಹನಗಳಲ್ಲಿ ಭದ್ರತೆಯೊಂದಿಗೆ ಕೊಂಡೊಯ್ದು ಭಾರತ ಚುನಾವಣಾ ಆಯೋಗದ ಇವಿಎಂ ವೇರ್‌ಹೌಸ್‌ನಲ್ಲಿ ನಿಗದಿಪಡಿಸಿರುವ ಸಂಖ್ಯೆಗನುಗುಣವಾಗಿ ಸುರಕ್ಷಿತವಾಗಿ ಇರಿಸಲಾಗಿದ್ದು, ಈ ಪ್ರಕ್ರಿಯೆಯನ್ನು ವಿಡಿಯೋ ರೆಕಾರ್ಡಿಂಗ್ ಮಾಡಿ ಜಿಲ್ಲಾ ಚುನಾವಣಾಧಿಕಾರಿಗಳಿಗೆ ದಾಖಲೆಗಳನ್ನು ಒಪ್ಪಿಸಲಾಗಿದೆ. ಎಸಿಪಿ ಎಸ್.ಜಿ. ಗಜೇಂದ್ರಪ್ರಸಾದ್, ಜಯಲಕ್ಷ್ಮೀಪುರಂ ಠಾಣೆ ಇನ್ಸ್‌ಪೆಕ್ಟರ್ ವಿನಯ್ ವಾಹನಗಳಿಗೆ ಮತಯಂತ್ರಗಳನ್ನು ಲೋಡ್ ಮಾಡುವ ವೇಳೆ ಉಪಸ್ಥಿತರಿದ್ದು, ಸೂಕ್ತ ಬಂದೋಬಸ್ತ್ ವ್ಯವಸ್ಥೆ ಮಾಡಿದ್ದರು.

ಇಂದು ಬೆಳಗ್ಗೆ ಪಾಲಿಕೆ ಸಿಬ್ಬಂದಿ ಮತ ಎಣಿಕಾ ಕೇಂದ್ರದ ಒಳ ಹಾಗೂ ಹೊರ ಆವರಣ ಸ್ವಚ್ಛಗೊಳಿಸಿದರು. ಅಳವಡಿಸಿದ್ದ ಬ್ಯಾರಿಕೇಡ್‌ಗಳು, ಟೆಂಟ್‌ಗಳು, ಧ್ವನಿವರ್ಧಕಗಳನ್ನು ತೆರವುಗೊಳಿಸುವ ಕಾರ್ಯ ನಡೆಯುತ್ತಿದ್ದು, ನಾಳೆ (ಜೂ. 6)ಯಿಂದ ಮಹಾರಾಣಿ ಕಾಮರ್ಸ್ ಕಾಲೇಜಿನಲ್ಲಿ ತರಗತಿಗಳು ಆರಂಭವಾಗಲಿವೆ.

ಅದೇ ರೀತಿ ಸಂಚಾರ ಪೊಲೀಸರು ಕೇಂದ್ರದ ಸುತ್ತ ನಾಕಾಬಂದಿಗಾಗಿ ಅಳವಡಿಸಿದ್ದ ಬ್ಯಾರಿಕೇಡ್‌ಗಳನ್ನು ಮಂಗಳವಾರ ರಾತ್ರಿಯೇ ತೆರವುಗೊಳಿಸಿ ಸಂಚಾರಕ್ಕೆ ಅನುವು ಮಾಡಲಾಗಿದೆ. ಇವಿಎಂ, ವಿವಿ ಪ್ಯಾಟ್ ನೋಡಲ್ ಅಧಿಕಾರಿಯಾದ ಮುಡಾ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್ ಈ ಪ್ರಕ್ರಿಯೆಯ ನೇತೃತ್ವ ವಹಿಸಿದ್ದರು.

ಸರ್ಕಾರ ರಚನೆ ಚಿಂತನೆ ಕೈಬಿಟ್ಟ ಇಂಡಿಯಾ ಒಕ್ಕೂಟ

ಪ್ರಬಲ ವಿರೋಧ ಪಕ್ಷವಾಗಿ ಕಾರ್ಯನಿರ್ವಹಿಸಲು ತೀರ್ಮಾನ



ನವದೆಹಲಿ: ಲೋಕಸಭಾ ಚುನಾವಣೆಯಲ್ಲಿ ಸರಳ ಬಹುಮತ ಕೊರತೆ ಕಾರಣದಿಂದಾಗಿ ಸರ್ಕಾರ ರಚನೆ ಮಾಡುವ ಚಿಂತನೆಯನ್ನು 'ಇಂಡಿಯಾ' ಮೈತ್ರಿಕೂಟ ಕೈಬಿಟ್ಟಿದೆ.

ಫಲಿತಾಂಶ ಕುರಿತು ಚರ್ಚೆಗೆ ಇಂಡಿಯಾ ಒಕ್ಕೂಟದ ನಾಯಕರು ಸಭೆ ನಡೆಸಿದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಿವಾಸದಲ್ಲಿ ನಾಯಕರ ಸಭೆ ನಡೆಯಿತು. ಬೇರೆಯವರನ್ನು ಸೆಳೆದು, ಅವರ ಅಣತಿಯಂತೆ ಕುಣಿಯುವುದು ಬೇಡ. ಇಂಡಿಯಾ ಮೈತ್ರಿಕೂಟ ಒಗ್ಗಟ್ಟಾಗಿಯೇ ಇರಲಿ, ಬೇರೆಯವರ ಹಸ್ತಕ್ಷೇಪ ಬೇಡ. ಸರ್ಕಾರ ಮಾಡಲು ಸಾಕಷ್ಟು ಸವಾಲುಗಳಿವೆ. ಬಲಿಷ್ಠ ವಿಪಕ್ಷವಾಗಿ ಕಾರ್ಯನಿರ್ವಹಿಸಲು ಇಂಡಿಯಾ ಒಕ್ಕೂಟ ತೀರ್ಮಾನಿಸಿದೆ ಎಂದು ಮೂಲಗಳು ತಿಳಿಸಿವೆ. ಮೋದಿ ಹಾಗೂ ಬಿಜೆಪಿ ವಿರುದ್ಧ ಗಟ್ಟಿ ಧ್ವನಿಯಾಗಿ 2014 ರಿಂದ ಮಾಡಿ ರುವ ತಪ್ಪುಗಳನ್ನು ಒತ್ತಿ ಹೇಳೋಣ. ಮೋದಿಯ ದುರಾಡಳಿತದ ಬಗ್ಗೆ ಜನರಿಗೆ ತಿಳಿಸುವತ್ತ ಕಾರ್ಯ ನಿರ್ವಹಿಸುವುದು. ಸದನದಲ್ಲಿ ಬಿಜೆಪಿಯ ಧ್ವನಿ ಅಡಗಿಸುವ ಕೆಲಸ ಮಾಡಬೇಕು ಎಂದು ಮೈತ್ರಿಕೂಟದ ನಾಯಕರು ಪ್ರತಿಜ್ಞೆ ಮಾಡಿದ್ದಾರೆ ಎನ್ನಲಾಗಿದೆ.

ಜನಾದೇಶ ಬಿಜೆಪಿಗೆ ತಕ್ಕ ಪಾಠ: ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಮ್ಮ ಮೈತ್ರಿಕೂಟಕ್ಕೆ ಸಿಕ್ಕಿರುವ ಅಗಾಧ ಬೆಂಬಲಕ್ಕಾಗಿ ಭಾರತದ ಜನತೆಗೆ ಐಎನ್‌ಡಿಐಎ (ಇಂಡಿಯಾ) ಬಣದ ಕಡೆಯಿಂದ ಧನ್ಯವಾದಗಳು. ಬಿಜೆಪಿ ಮತ್ತು ಅದರ ದ್ವೇಷ, ಭ್ರಷ್ಟಾಚಾರದ ರಾಜಕಾರಣಕ್ಕೆ ಜನಾದೇಶವು ತಕ್ಕ ಪ್ರತ್ಯುತ್ತರ ನೀಡಿದೆ. ಇದು ಭಾರತದ ಸಂವಿಧಾನ ರಕ್ಷಣೆ, ಬೆಲೆ ಏರಿಕೆ, ನಿರುದ್ಯೋಗ ಮತ್ತು ಬಂಡವಾಳಶಾಹಿಯ ವಿರುದ್ಧ ನೀಡಿರುವ ಜನಾದೇಶವಾಗಿದೆ. ಪ್ರಜಾಪ್ರಭುತ್ವವನ್ನು ಉಳಿಸಲು ಐಎನ್‌ಡಿಐಎ ಬಣವು ಮೋದಿ ನೇತೃತ್ವದ ಬಿಜೆಪಿಯ ಫ್ಯಾಸಿಸ್ಟ್ ಆಡಳಿತದ ವಿರುದ್ಧ ಹೋರಾಡುವುದನ್ನು ಮುಂದುವರಿಸುತ್ತದೆ ಎಂದು ಘೋಷಿಸಿದ್ದಾರೆ. ಇದು ನಮ್ಮ ನಿರ್ಧಾರ ಮತ್ತು ನಾವು ಈ ಅಂಶಗಳಿಗೆ ಸಂಪೂರ್ಣವಾಗಿ ಒಪ್ಪಿಗೆ ನೀಡಿದ್ದೇವೆ. ನಾವು ಜನರಿಗೆ ನೀಡಿದ ಭರವಸೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಮುಂದುವರಿಯುತ್ತೇವೆ ಎಂದು ಖರ್ಗೆ ತಿಳಿಸಿದ್ದಾರೆ.

ರಾಜಕೀಯ ಪಾಠ: ಇದಕ್ಕೂ ಮೊದಲು ತಮ್ಮ ನಿವಾಸದಲ್ಲಿ ಸೇರಿದ್ದ ಐಎನ್‌ಡಿಐಎ ಮೈತ್ರಿಕೂಟದ ಸದಸ್ಯ ಪಕ್ಷಗಳನ್ನು ಉದ್ದೇಶಿಸಿ ಮಾತನಾಡಿದ ಮಲ್ಲಿಕಾರ್ಜುನ ಖರ್ಗೆ, ನಾನು ಎಲ್ಲಾ ಐಎನ್‌ಡಿಐಎ ಪಾಲುದಾರರನ್ನು ಸ್ವಾಗತಿಸುತ್ತೇನೆ. ಒಗ್ಗಟ್ಟಿನಿಂದ ಹೋರಾಡಿದ್ದೇವೆ, ಮೋದಿ, ಅವರ ರಾಜಕೀಯದ ಮೂಲತತ್ವ ಮತ್ತು ಶೈಲಿಯ ವಿರುದ್ಧ ನಿರ್ಣಾಯಕ ಜನಾದೇಶ ಬಂದಿದೆ. ಸ್ಪಷ್ಟ ನೈತಿಕ ಸೋಲಿನ ಹೊರತಾಗಿ ವೈಯಕ್ತಿಕವಾಗಿ ಅವರಿಗೆ ಇದು ದೊಡ್ಡ ರಾಜಕೀಯ ಪಾಠ ಎಂದು ಹೇಳಿದ್ದರು.

“ವಿಶ್ವ ಪರಿಸರ ದಿನಾಚರಣೆ: ಮೈಸೂರು ಪರಿಸರ ಪ್ರೇಮಿ ರಾಘವನ್‌ರಿಗೆ ಅರಣ್ಯ ಇಲಾಖೆಯಿಂದ ಸನ್ಮಾನ





ಮೈಸೂರಿನ ವಿಜಯನಗರದ 4ನೇ ಹಂತದಲ್ಲಿರುವ ಔಷಧ ನಿಯಂತ್ರಣಾ ಮಂಡಳಿ ಕಚೇರಿಯಲ್ಲಿ ವಿಶ್ವ ಪರಿಸರ ದಿನದ ಅಂಗವಾಗಿ ಬುಧವಾರ ರಘುಲಾಲ್ ಕಂಪನಿ ಮಾಲೀಕರಾದ 'ಮೈಸೂರು ಪರಿಸರ ಪ್ರೇಮಿ' ರಾಘವನ್ ಅವರನ್ನು ಸನ್ಮಾನಿಸಲಾಯಿತು. (ಬಲಚಿತ್ರ) ಇದಕ್ಕೂ ಮುನ್ನ ಇಲ್ಲಿನ ಹೊರಾವರಣದ ರಸ್ತೆಬದಿಯಲ್ಲಿ ಇಲಾಖೆಯಿಂದ ಗಿಡಗಳನ್ನು ನೆಟ್ಟು ನೀರೆರೆಯಲಾಯಿತು.

ಮೈಸೂರು,ಜೂ.5(ಎಂಟಿವೈ)– ವಿಶ್ವ ಪರಿಸರ ದಿನದ ಅಂಗವಾಗಿ ಅರಣ್ಯ ಇಲಾಖೆಯ ನಗರ ಹಸಿರೀಕರಣದ ವಲಯ ವತಿಯಿಂದ ಮೈಸೂರಿನ ವಿಜಯನಗರದ ನಾಲ್ಕನೇ ಹಂತದಲ್ಲಿ ವನಮಹೋತ್ಸವ ಆಚರಿಸಲಾಯಿತು.

ವಿಜಯನಗರದ ನಾಲ್ಕನೇ ಹಂತದಲ್ಲಿ ರಸ್ತೆ ಬದಿಯಲ್ಲಿ 25ಕ್ಕೂ ಹೆಚ್ಚು ಗಿಡಗಳನ್ನು ನೆಟ್ಟು ನೀರೆರೆಯಲಾಯಿತು. ಇದೇ ವೇಳೆ ಮೈಸೂರಿನ ವಿವಿಧೆಡೆ ನೆಟ್ಟಿರುವ ಗಿಡಗಳಿಗೆ ನೀರುಣಿಸಲು ಹಾಗೂ ಗಿಡಗಳ ರಕ್ಷಣೆಗೆ ಟ್ರೀ ಗಾರ್ಡ್ ಕೊಡುಗೆ ನೀಡಿದ ರಘುಲಾಲ್ ಕಂಪನಿ ಮಾಲೀಕರಾದ 'ಮೈಸೂರು ಪರಿಸರ ಪ್ರೇಮಿ' ರಾಘವನ್ ಅವರನ್ನು ಸನ್ಮಾನಿಸಲಾಯಿತು.

ಇಲ್ಲಿನ ಔಷಧ ನಿಯಂತ್ರಣ ಮಂಡಳಿ ಕಚೇರಿಯಲ್ಲಿ ಶ್ರೀಯುತರನ್ನು ಸನ್ಮಾನಿಸಲಾಯಿತು. ಇದೇ ವೇಳೆ ಆರ್‌ಎಫ್‌ಓ ಧನ್ಯಶ್ರೀ ಮಾತನಾಡಿ, ವಿಶ್ವ ಪರಿಸರ ದಿನದ ಅಂಗವಾಗಿ ಅರಣ್ಯ ಇಲಾಖೆಯ ನಗರ ಹಸಿರೀಕರಣ ವಿಭಾಗದ ವತಿಯಿಂದ ವಿವಿಧೆಡೆ ಗಿಡ ನೆಟ್ಟು ಪೋಷಿಸಲಾಗುತ್ತಿದೆ. ಮೈಸೂರಿನ ಪರಿಸರ ಸಂರಕ್ಷಣೆಯ ಹಿತದೃಷ್ಟಿಯಿಂದ ಪ್ರತಿ ವರ್ಷವೂ ಗುರುತಿಸಲ್ಪಟ್ಟ ಸ್ಥಳಗಳಲ್ಲಿ ಗಿಡ ನೆಟ್ಟು ಪೋಷಿಸಲಾಗುತ್ತಿದೆ. ಇಲಾಖೆಯೊಂದಿಗೆ ರಘುಲಾಲ್ ಕಂಪನಿಯ ರಾಘವನ್ ಅವರು ಹಲವು ವರ್ಷದಿಂದ ಕೈಜೋಡಿಸಿದ್ದು, ವಿವಿಧೆಡೆ ಗಿಡಗಳ ಪೋಷಣೆಗೆ ನೆರವಾಗಿದ್ದಾರೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ವಿಜಯನಗರ, ಸಾತಗಳ್ಳಿ, ಕೆಹೆಚ್‌ಬಿ ಕಾಲೋನಿ, ಕೆಂಚಲಗೂಡು, ರಿಂಗ್‌ರಸ್ತೆ ಹಾಗೂ ವಿವಿಧೆಡೆ ಹಲವು ವರ್ಷದಿಂದ ನೆಟ್ಟಿದ್ದ ಗಿಡಗಳಿಗೆ ನೀರುಣಿಸಲು ರಘುಲಾಲ್ ಕಂಪನಿ ನೆರವು ನೀಡುತ್ತಾ ಬಂದಿದೆ. ರಾಘವನ್ ಅವರು ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಿದ್ದಾರೆ. ಅಲ್ಲದೆ, ನೆಟ್ಟ ಗಿಡಗಳನ್ನು ಸಂರಕ್ಷಿಸಲು ಟ್ರೀ ಗಾರ್ಡ್‌ಗಳನ್ನು ಕೊಡುಗೆ ನೀಡಿದ್ದಾರೆ. ಮೈಸೂರಿನ ಸಸ್ಯ ಸಮೃದ್ಧಿ ಹಾಗೂ ರಕ್ಷಣೆ ಆಗುವುದರಲ್ಲಿ ರಾಘವನ್ ಅವರ ಕೊಡುಗೆ ಅಪಾರವಾದುದು. ಅವರು ನೆಟ್ಟಂತಹ ಸಾವಿರಾರು ಗಿಡಗಳು ಈಗ ಮರಗಳಾಗಿ ಜನರಿಗೆ ಆಸರೆಯಾಗಿವೆ. ವಿಶ್ವಪರಿಸರ ದಿನದ ಅಂಗವಾಗಿ ಇಲಾಖೆ ವತಿಯಿಂದ ಶ್ರೀಯುತ ರಾಘವನ್ ಅವರನ್ನು ಸನ್ಮಾನಿಸಲಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಡಿಆರ್‌ಎಫ್‌ಗಳಾದ ಮಾಲೇಗೌಡ, ಪ್ರಕಾಶ್, ಔಷಧಿ ಸಂಗ್ರಹಾಗಾರ ಇಲಾಖೆಯ ನರ್ಸಿಯಾ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ರಾಷ್ಟ್ರಪತಿಗೆ ಪ್ರಧಾನಿ ಮೋದಿ ರಾಜೀನಾಮೆ; 17ನೇ ಲೋಕಸಭೆ ವಿಸರ್ಜನೆ



ನವದೆಹಲಿ: ಲೋಕಸಭೆ ಫಲಿತಾಂಶ ಪ್ರಕಟವಾದ ನಂತರ ಇಂದು ಬುಧವಾರ ನವದೆಹಲಿಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಕೇಂದ್ರ ಸಚಿವ ಸಂಪುಟ ಸಭೆ ನಡೆದ ನಂತರ 17ನೇ ಲೋಕಸಭೆಯನ್ನು ವಿಸರ್ಜಿಸಲು ಶಿಫಾರಸು ಮಾಡಲಾಯಿತು. ಜೂ. 16ಕ್ಕೆ ಇದರ ಅವಧಿ ಅಂತ್ಯಗೊಳ್ಳಲಿದೆ.

ಬಳಿಕ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಿ ರಾಜೀನಾಮೆ ಸಲ್ಲಿಸಿದ ಪ್ರಧಾನಿ ನರೇಂದ್ರ ಮೋದಿ, ನೂತನ ಸರ್ಕಾರ ರಚನೆಗೆ ಅವಕಾಶ ಕೋರಿದರು. ಪ್ರಧಾನ ಮಂತ್ರಿಗಳು ಹಾಗೂ ಅವರ ಸಂಪುಟ ಸದಸ್ಯರ ರಾಜೀನಾಮೆ ಅಂಗೀಕರಿಸಿದ ರಾಷ್ಟ್ರಪತಿಗಳು ಹೊಸ ಸರ್ಕಾರ ರಚನೆಯಾಗುವವರೆಗೆ ಅಧಿಕಾರದಲ್ಲಿ ಮುಂದುವರಿಯುವಂತೆ ಮನವಿ ಮಾಡಿದರು ಎಂದು ರಾಷ್ಟ್ರಪತಿ ಭವನದ ಪ್ರಕಟಣೆಯಲ್ಲಿ ತಿಳಿಸಿದೆ.

ಇಂದಿನ ಸಂಪುಟ ಸಭೆಯಲ್ಲಿ ಲೋಕಸಭಾ ಚುನಾವಣಾ ಫಲಿತಾಂಶಗಳ ಬಗ್ಗೆ ಅವಲೋಕನ ಮಾಡಲಾಯಿತು. ಮುಂದಿನ ಸರ್ಕಾರ ರಚನೆಗೆ ಸಂಬಂಧಿಸಿದ ವಿಷಯಗಳ ಬಗ್ಗೆಯೂ ಚರ್ಚಿಸಲಾಯಿತು ಎಂದು ಮೂಲಗಳು ತಿಳಿಸಿವೆ.

240 ಸ್ಥಾನಗಳನ್ನು ಪಡೆದು ಬಹುಮತದ ಕೊರತೆ ಎದುರಿಸುತ್ತಿರುವ ಬಿಜೆಪಿ ತನ್ನ ಮಿತ್ರಪಕ್ಷಗಳ ನೆರವಿನೊಂದಿಗೆ ಸರ್ಕಾರ ರಚಿಸಲು ಮುಂದಾಗಿದೆ.

ಯದುವೀರ್‌ಗೆ ಅಭಿನಂದನೆ




ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ನೂತನ ಸಂಸದರಾದ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಬಿಜೆಪಿ ಹಿರಿಯ ಮುಖಂಡ ಗುರುಪಾದಸ್ವಾಮಿ ಅವರು ಭಾರಿ ಗುಲಾಬಿ ಹಾರ ಹಾಕುವ ಮೂಲಕ ಅಭಿನಂದಿಸಿದರು.

ಪರಕಾಲ ಮಠ ಶ್ರೀಗಳಿಂದ ಯದುವೀರ್‌ಗೆ ಆಶೀರ್ವಾದ...



ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ನೂತನ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಬುಧವಾರ ಪರಕಾಲ ಮಠಕ್ಕೆ ಭೇಟಿ ನೀಡಿ, ಮೈಸೂರು ಸಂಸ್ಥಾನದ ರಾಜಗುರುಗಳಾದ ಶ್ರೀ ವಾಗೀಶ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಸ್ವಾಮೀಜಿಗಳ ಆಶೀರ್ವಾದ ಪಡೆದರು.


ಮರು ಮೌಲ್ಯಮಾಪನದಲ್ಲಿ ರಾಜ್ಯಕ್ಕೆ 2ನೇ ಟಾಪರ್



ಮೈಸೂರು, ಜೂ.5– ಮೈಸೂರಿನ ದಿನೇಶ್ ಕೋಚಿಂಗ್ ಸೆಂಟರ್‌ನ ಎನ್.ವಿ.ದಿನೇಶ್ ಮತ್ತು ಡಾ.ಸೌಮ್ಯ ದಂಪತಿಯ ಪುತ್ರಿ ಎಂ.ಡಿ.ಸುದೀಕ್ಷಾ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಮರು ಮೌಲ್ಯಮಾಪನದಲ್ಲಿ 625ಕ್ಕೆ 624 ಅಂಕಗಳನ್ನು ಗಳಿಸುವ ಮೂಲಕ ರಾಜ್ಯಕ್ಕೆ 2ನೇ ಟಾಪರ್ ಆಗಿದ್ದಾರೆ.

ಸುದೀಕ್ಷಾ, ಮೊದಲ ಫಲಿತಾಂಶದಲ್ಲಿ 625ಕ್ಕೆ 600 ಅಂಕಗಳಿಸಿದ್ದರು. ಮರು ಮೌಲ್ಯಮಾಪನದಲ್ಲಿ ಗಣಿತ ವಿಷಯದಲ್ಲಿ 100ಕ್ಕೆ 99(ಮೊದಲ ಫಲಿತಾಂಶದಲ್ಲಿ 94)ಅಂಕಗಳನ್ನು ಪಡೆಯುವ ಮೂಲಕ ರಾಜ್ಯಕ್ಕೆ 2ನೇ ಟಾಪರ್ ಆಗಿದ್ದಾರೆ.

ವಿಜಯೇಂದ್ರರಿಗೆ ಅಭಿನಂದನೆ...



ರಾಜ್ಯದಲ್ಲಿ ಭಾರತೀಯ ಜನತಾಪಕ್ಷದ ಅಭೂತಪೂರ್ವ ಗೆಲುವಿಗೆ ಕಾರಣರಾದ ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಬೆಂಗಳೂರಿನ ಅವರ ನಿವಾಸದಲ್ಲಿ ಮೈಸೂರು ಜಿಲ್ಲಾ ಬಿಜೆಪಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಆತ್ಮೀಯವಾಗಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ನಿಕಟಪೂರ್ವ ಅಧ್ಯಕ್ಷರಾದ ಡಾ.ನಂದೀಶ್ ಹಂಚೆ ಉಪಸ್ಥಿತರಿದ್ದರು.

ಸಂಸದ ಸುನೀಲ್ ಬೋಸ್‌ಗೆ ಅಭಿನಂದನೆ...




ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಗೆಲುವು ಸಾಧಿಸಿರುವ ಸುನೀಲ್ ಬೋಸ್ ಅವರನ್ನು ಕರ್ನಾಟಕ ಪ್ರದೇಶ ಕುರುಬರ ಸಂಘದ ನಿರ್ದೇಶಕ ಯು.ಅಭಿಲಾಷ್, ಕೆಪಿಸಿಸಿ ಹಿಂದುಳಿದ ವರ್ಗಗಳ ರಾಜ್ಯ ಪ್ರಧಾನ ಕಾರ್ಯದರ್ಶಿ ಜಯಸ್ವಾಮಿ, ಮುಖಂಡ ಮೆಲ್ಲಹಳ್ಳಿ ರವಿ ಎನ್.ಗೌಡ ಅಭಿನಂದಿಸಿದರು.

ಪ್ರಥಮ ಸುಧಾಮಂಗಳ ವಿದ್ವತ್ ಸಭೆ ಸಂಪನ್ನ

“ಶಾಸ್ತ್ರ ವಿದ್ಯೆ ಅಧ್ಯಯನ ಮಾಡಿದವರಿಗೆ ಸಮಾಜ ವಿಶೇಷ ಗೌರವ ನೀಡುತ್ತದೆ. ಧರ್ಮ, ಸಂಸ್ಕೃತಿ ಮತ್ತು ಸಂಪ್ರದಾಯ ಪಾಲನೆಗೆ ಬದ್ಧರಾಗಿರುವ ಮಕ್ಕಳನ್ನು ರೂಪಿಸುವ ಹೊಣೆ ನಮಗಿದೆ. ಸನಾತನ ಭಾರತೀಯ ಸಂಸ್ಕೃತಿಯನ್ನು ಉಳಿಸಿ, ಬೆಳೆಸಲು ಸುಧಾಮಂಗಳ ಮಾಡಿದ ಯುವಕರು ಸಿದ್ಧರಾಗಿರುವುದು ಶ್ಲಾಘನೀಯ.

–ಶ್ರೀ ವಿದ್ಯಾಧೀಶ ತೀರ್ಥ ಸ್ವಾಮೀಜಿ, ಉಡುಪಿ ಪಲಿಮಾರು ಮಠ



ಶ್ರೀ ಸತ್ಯಾತ್ಮತೀರ್ಥರು ಪ್ರವಚನ ನೀಡಿದರು. ಸೋಸಲೆ ಶ್ರೀ ವಿದ್ಯಾಶ್ರೀಶ ತೀರ್ಥ ಸ್ವಾಮೀಜಿ ಮತ್ತು ಉಡುಪಿ ಪಲಿಮಾರು ಶ್ರೀ ವಿದ್ಯಾಧೀಶ ತೀರ್ಥ ಸ್ವಾಮೀಜಿ ಉಪಸ್ಥಿತರಿದ್ದರು.

ಮೈಸೂರು, ಜೂ.5– ಸೋಸಲೆ ಶ್ರೀ ವಿದ್ಯಾಶ್ರೀಶತೀರ್ಥ ಶ್ರೀಪಾದಂಗಳವರ ನೇತೃತ್ವದಲ್ಲಿ ನಡೆಯುತ್ತಿರುವ ಶ್ರೀವ್ಯಾಸ ತೀರ್ಥ ವಿದ್ಯಾಪೀಠದ ಪ್ರಥಮ ಸುಧಾ ಮಂಗಳ ಮಹೋತ್ಸವದ ಅಂಗವಾಗಿ ಬುಧವಾರ ವಿದ್ವತ್ ಸಭೆ ಸಂಪನ್ನಗೊಂಡಿತು.

ವ್ಯಾಸತ್ರಯ ಸಹಿತ ಶ್ರೀಮನ್ ನ್ಯಾಯ ಸುಧಾ ಪರೀಕ್ಷಾ ಕಾರ್ಯಕ್ರಮವು ಶ್ರೀಮದ್ ಉತ್ತರಾದಿ ಮಠಾಧೀಶ ಶ್ರೀಸತ್ಯಾತ್ಮತೀರ್ಥ ಶ್ರೀಪಾದಂಗಳವರ ಹಾಗೂ ಪಲಿಮಾರು ಮಠಾಧೀಶರಾದ ಶ್ರೀವಿದ್ಯಾಧೀಶ ತೀರ್ಥರ ಶ್ರೀ ಅದಮಾರು ಮಠಾಧೀಶ ಶ್ರೀ ವಿಶ್ವಪ್ರಿಯ ತೀರ್ಥರ ದಿವ್ಯೋಪಸ್ಥಿತಿಯಲ್ಲಿ ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀವ್ಯಾಸ ತೀರ್ಥ ವಿದ್ಯಾಪೀಠದಲ್ಲಿ ನಡೆಯಿತು.

ಸುಘೋಷ ಎಂಬ ವಿದ್ಯಾರ್ಥಿ ಶ್ರೀಮನ್ನ್ಯಾಯಸುಧಾಗ್ರಂಥದ ಪ್ರಥಮಾಧ್ಯಾಯದ ಪರೀಕ್ಷೆ , ಹಾಗೂ ಶ್ರೀವ್ಯಾಸ ರಾಜರು ರಚಿಸಿದ ಶ್ರೀಮನ್ ನ್ಯಾಯಾಮೃತ ಗ್ರಂಥದ 36 ಪ್ರಕರಣ ಹಾಗೂ ಚಂದ್ರಿಕಾ ಗ್ರಂಥದ ಪ್ರಥಮ ಪಾದದ ಪರೀಕ್ಷೆಯನ್ನು ಎಲ್ಲ ವಿದ್ವಾಂಸರು ಮೆಚ್ಚುವಂತೆ ನೀಡಿದ್ದು ಗಮನ ಸೆಳೆಯಿತು.

ವಿದ್ಯಾರ್ಥಿಗಳ ಪರೀಕ್ಷಾ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಅನುಗ್ರಹಿಸಿದ ಉತ್ತರಾದಿ ಮಠದ ಶ್ರೀಸತ್ಯಾತ್ಮತೀರ್ಥ ಸ್ವಾಮೀಜಿ, ಸುಘೋಷ ಎಂಬ ವಿದ್ಯಾರ್ಥಿ ಸುಧಾ ಮತ್ತು ವ್ಯಾಸತ್ರಯವೆಂಬ ವಿಸ್ತಾರವಾದ ಗ್ರಂಥದ ಭಾಗವನ್ನು ನಿರರ್ಗಳವಾಗಿ, ಸಂಸ್ಕೃತದಲ್ಲಿ ಪುಸ್ತಕ ನಿರಪೇಕ್ಷವಾಗಿ ಅನೇಕ ವಿದ್ವಾಂಸರ ಪ್ರಶ್ನೆಗಳಿಗೆ ಉತ್ತರಿಸುವ ಮೂಲಕ ಪರೀಕ್ಷೆಯನ್ನು ನೀಡಿದ್ದು ಅಭಿನಂದನಾರ್ಹವಾಗಿದೆ ಎಂದರು.

ಸೋಸಲೆ ಶ್ರೀ ವಿದ್ಯಾಶ್ರೀಶತೀರ್ಥ. ಸ್ವಾಮೀಜಿ ಅವರು ಈ ಇಳಿ ವಯಸ್ಸಿನಲ್ಲೂ ನಿರಂತರ ಪಾಠ ಪ್ರವಚನ ಮಾಡುತ್ತಿರುವುದು ಎಲ್ಲರಿಗೂ ಆದರ್ಶವಾಗಿದೆ. ಅದರ ಫಲವನ್ನು ವಿದ್ಯಾರ್ಥಿಗಳ ಪರೀಕ್ಷೆ ಗುಣಮಟ್ಟದಲ್ಲಿ ನಾವು ಕಾಣಬಹುದಾಗಿದೆ ಎಂದು ಅವರು ತಿಳಿಸಿದರು. ಪಲಿಮಾರು ಶ್ರೀಪಾದರನ್ನು ಅಭಿನಂದಿಸಿ ಮಾತನಾಡಿದ ಹಿರಿಯ ವಿದ್ವಾಂಸ ಆನಂದತೀರ್ಥ ನಾಗಸಂಪಿಗೆ ಆಚಾರ್ಯರು, ವಿದ್ಯಾರ್ಥಿ ದೆಸೆಯಲ್ಲಿ ಯಾವ ರೀತಿ ಇರಬೇಕೆಂಬುವುದಕ್ಕೆ ಪಲಿಮಾರು ಶ್ರೀಪಾದರು ಆದರ್ಶರಾಗಿದ್ದಾರೆ. ಅನೇಕ ವರ್ಷಗಳ ಪೂರ್ವದಲ್ಲಿ ಅಧ್ಯಯನ ನಡೆಸಿದ ವಿಷಯಗಳನ್ನು ಇಂದಿಗೂ ತಕ್ಷಣ ನಿರೂಪಿಸುವ ಸಾಮರ್ಥ್ಯವನ್ನು ಅವರು ಹೊಂದಿದ್ದಾರೆ ಎಂದು ಪೂಜ್ಯರ ವಿದ್ವತ್ತನ್ನು ಪರಿಚಯಿಸಿದರು.

ಹಿರಿಯ ವಿದ್ವಾಂಸರಾದ ಮಾಹುಲಿ ವಿದ್ಯಾಸಿಂಹಾಚಾರ್ಯ, ಮಹಾಮಹೋಪಾಧ್ಯಾಯ ಹರಿದಾಸ ಭಟ್, ಬಾಳಗಾರು ರುಚಿರಾಚಾರ್ಯ, ಶೇಷಗಿರಿ ಆಚಾರ್ಯ, ಶ್ರೀನಿವಾಸಮೂರ್ತಿ ಆಚಾರ್ಯ, ಸಗ್ರೀ ಆನಂದತೀರ್ಥಾಚಾರ್ಯ, ಸತ್ತೆಗಿರಿ ಧೀರೇಂದ್ರಾಚಾರ್ಯ. ಬೆಂಗಳೂರು ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠದ ಪ್ರಾಧ್ಯಾಪಕರಾದ ಮಧ್ವೇಶ ಆಚಾರ್ಯ ನೆಡಿಲ್ಲಾಯ, ಮಾತರಿಶ್ವ ಆಚಾರ್ಯ ರಾಮಕೃಷ್ಣ ಭಟ್, ಜಯತೀರ್ಥ ವಿದ್ಯಾಪೀಠದ ಪಂಡಿತ ಪ್ರಹ್ಲಾದ ಆಚಾರ್ಯ, ಹೊನ್ನಾಳಿ ಸತ್ಯಬೋಧ ಆಚಾರ್ಯ, ಬಾದರಾಯಣ ಆಚಾರ್ಯ, ಶ್ರೀವ್ಯಾಸತೀರ್ಥ ವಿದ್ಯಾಪೀಠದ ಗೌರವ ಕಾರ್ಯದರ್ಶಿ ಡಾ. ಡಿ.ಪಿ ಮಧುಸೂದನಾಚಾರ್ಯ, ಡಾ. ಶ್ರೀನಿಧಿಪ್ಯಾಟಿ ಉಪಸ್ಥಿತರಿದ್ದರು.

ಚಾ.ನಗರದಲ್ಲಿ ಸಂಸದರ ಕಚೇರಿ ತೆರೆದು ಜನರ ಸಮಸ್ಯೆ ಆಲಿಸುವೆ

ಪುರಸಭಾ ಮಾಜಿ ಅಧ್ಯಕ್ಷರಿಂದ ಅಭಿನಂದನೆ ಸ್ವೀಕರಿಸಿದ ನೂತನ ಸಂಸದ ಸುನೀಲ್‌ಬೋಸ್ ಭರವಸೆ

ತಿ.ನರಸೀಪುರ, ಜೂ.5– ಚಾಮರಾಜನಗರ ಲೋಕಸಭಾ ಕ್ಷೇತ್ರದ ಕೇಂದ್ರಸ್ಥಾನವಾದ ಚಾಮರಾಜ ನಗರದಲ್ಲಿ ಸಂಸದರ ಕಚೇರಿಯನ್ನು ತೆರೆದು ಜನ ಸಾಮಾನ್ಯರ ಸಮಸ್ಯೆಗಳನ್ನು ಆಲಿಸಿ, ಪರಿಹರಿಸುವ ಮೂಲಕ ಮಾದರಿ ಸಂಸದನಾಗಿ ರೂಪುಗೊಳ್ಳುವೆ ಎಂದು ಚಾಮರಾಜನಗರ ಲೋಕಸಭಾ ಕ್ಷೇತ್ರದ ನೂತನ ಸಂಸದ, ಸಚಿವ ಡಾ.ಹೆಚ್.ಸಿ. ಮಹದೇವಪ್ಪ ನವರ ಪುತ್ರ ಸುನೀಲ್‌ಬೋಸ್ ತಿಳಿಸಿದ್ದಾರೆ.

ಬನ್ನೂರು ಪುರಸಭೆಯ ಮಾಜಿ ಅಧ್ಯಕ್ಷ ಮುನಾವರ್ ಪಾಷಾ ಅವರಿಂದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ನನ್ನನ್ನು ಟೀಕಿಸುತ್ತಿದ್ದವರಿಗೆ ಮತ್ತು ಗೋಬ್ಯಾಕ್ ಸುನೀಲ್‌ಬೋಸ್ ಎನ್ನುತ್ತಿದ್ದವರಿಗೆ ಕ್ಷೇತ್ರದ ಮತದಾರರು ಅಭೂತಪೂರ್ವ ಗೆಲುವು ತಂದು ಕೊಡುವ ಮೂಲಕ ತಕ್ಕ ಉತ್ತರ ನೀಡಿದ್ದಾರೆ ಎಂದರು.

ನನ್ನನ್ನು ಗೆಲ್ಲಿಸಿದ ಮತದಾರರ ಋಣ ತೀರಿಸ ಬೇಕಾಗಿದೆ. ಚಾಮರಾಜನಗರದಲ್ಲಿ ಸುಸಜ್ಜಿತ ಕಚೇರಿಯೊಂದನ್ನು ತೆರೆದು ಕ್ಷೇತ್ರದ ಮತದಾರರು ಮತ್ತು ಮುಖಂಡರೊಂದಿಗೆ ಮುಕ್ತವಾಗಿ ಚರ್ಚಿಸಿ ಸಂಸದರ ನಿಧಿಯನ್ನು ಸಂಪೂರ್ಣವಾಗಿ ಅಭಿವೃದ್ಧಿ


ನೂತನ ಸಂಸದ ಸುನೀಲ್‌ಬೋಸ್ ಅವರನ್ನು ಅಭಿನಂದಿಸುತ್ತಿರುವ ಮುನಾವರ್ ಪಾಷ ಮತ್ತು ಬೆಂಬಲಿಗರು.

ಕಾರ್ಯಗಳಲ್ಲಿ ವಿನಿಯೋಗಿಸಿಕೊಳ್ಳುವೆ ಎಂದು ಅವರು ವಿವರಿಸಿದರು. ಚಾಮರಾಜನಗರ ಹಿಂದುಳಿದ ಗಡಿ ಜಿಲ್ಲೆಯಾಗಿದ್ದು, ಅದರ ಸಮಗ್ರ ಅಭಿವೃದ್ಧಿಗೆ ಶ್ರಮಿಸುವೆ. ಈ ಹಿಂದಿನ ಸಂಸದರು ಉತ್ತಮ ಕೆಲಸಗಳನ್ನು ಮಾಡಿದ್ದು, ನಾನು ಅದನ್ನು ಮುಂದುವರೆಸಿಕೊಂಡು ಹೋಗುವೆ ಎಂದ ಅವರು, ಇದಕ್ಕೆ ಎಲ್ಲರ ಸಹಕಾರ ಅಗತ್ಯವಿದೆ ಎಂದರು.

ಇನ್ನುಳಿದಂತೆ ತಿ.ನರಸೀಪುರ, ನಂಜನಗೂಡು ಸೇರಿದಂತೆ ನನ್ನ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ಎಲ್ಲಾ ತಾಲೂಕುಗಳು ಮತ್ತು ಗ್ರಾಮಗಳಿಗೆ ಭೇಟಿ ನೀಡಿ ಅಲ್ಲಿನ ಸಮಸ್ಯೆಗಳನ್ನು ಆಲಿಸಿ ಅಭಿವೃದ್ಧಿ ಪಡಿಸಲು ಶಕ್ತಿ ಮೀರಿ ಪ್ರಯತ್ನಿಸುವೆ ಎಂದು ತಿಳಿಸಿದ ಸುನೀಲ್‌ಬೋಸ್, ಇದರೊಂದಿಗೆ ನಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ನೂತನ ಉದ್ಯಮಿಗಳಿಗೆ ಅವಕಾಶ ನೀಡಿ ಸ್ಥಳೀಯ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲು ಶ್ರಮಿಸುವೆ ಎಂದರು.

ಇದೇ ಸಂದರ್ಭದಲ್ಲಿ ಪುರಸಭೆಯ ಮಾಜಿ ಅಧ್ಯಕ್ಷ ಮುನಾವರ್ ಪಾಷ ಮಾತನಾಡಿ, ಕ್ಷೇತ್ರ ವ್ಯಾಪ್ತಿಯಲ್ಲಿ ನಿರುದ್ಯೋಗಿ ಯುವ ಸಮುದಾಯಕ್ಕೆ ಉದ್ಯೋಗಾವಕಾಶಗಳನ್ನು ಕಲ್ಪಿಸಲು ಕೈಗಾರಿಕೋದ್ಯಮಗಳನ್ನು ಸ್ಥಾಪಿಸಲು ಆದ್ಯತೆ ನೀಡಬೇಕು ಎಂದು ಸಂಸದರಲ್ಲಿ ಮನವಿ ಮಾಡಿದರು.

ಉದ್ಯೋಗಕ್ಕಾಗಿ ಯುವಕರು–ಯುವತಿಯರು ನೆರೆ ರಾಜ್ಯಗಳಿಗೆ ವಲಸೆ ಹೋಗುತ್ತಿರುವುದು ಕಂಡು ಬಂದಿದೆ. ಸ್ಥಳೀಯವಾಗಿ ಅವರಿಗೆ ಉದ್ಯೋಗ ದೊರಕಿಸಲು ಒಂದು ಪ್ರಾಮಾಣಿಕ ಪ್ರಯತ್ನ ಮಾಡಿ ಕ್ಷೇತ್ರದಲ್ಲಿ ಕೇಂದ್ರದಿಂದ ಬರುವ ಅನುದಾನವನ್ನು ಸಮರ್ಪಕವಾಗಿ ಬಳಸಿ ಅಭಿವೃದ್ಧಿಪಡಿಸೋಣ ಎಂದರು.

ದಿ. ಧ್ರುವನಾರಾಯಣ್ ಅವರು ಈ ಭಾಗದಲ್ಲಿ ಉತ್ತಮ ಕೆಲಸ ಸಂಸದರಾಗಿ ಕೆಲಸ ಮಾಡಿದ್ದಾರೆ. ಅವರ ಅಭಿವೃದ್ಧಿ ಕೆಲಸಗಳು ನಮಗೆ ವರದಾನವಾಗಲಿದೆ. ಅವರ ಹಾಗೆ ನಾವು ಕೂಡ ಉತ್ತಮ ವಾದ ಕೆಲಸವನ್ನು ಮಾಡಬೇಕೆಂದು ಸಲಹೆ ನೀಡಿದರು. ಕಾಂಗ್ರೆಸ್ ಮುಖಂಡರಾದ ಸೋಮು, ಸೋಸಲೆ ಮಹೇಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಪರವಾನಗಿ ಇಲ್ಲದ, ನಿಯಮ ಉಲ್ಲಂಘಿಸಿದ ದ್ವಿಚಕ್ರ ವಾಹನ, ಆಟೋಗಳ ಚಾಲಕರಿಗೆ ಶಾಕ್

ತಪಾಸಣೆ ನಡೆಸಿ ದಂಡ ವಿಧಿಸಿದ ಪೊಲೀಸರು



ಕೆ.ಆರ್.ನಗರ, ಜೂ.5– ಇತ್ತೀಚೆಗೆ ಪರವಾನಗಿ ಇಲ್ಲದ ಮತ್ತು ನಿಯಮ ಉಲ್ಲಂಘಿಸಿ ಚಲಾಯಿಸುತ್ತಿದ್ದ ದ್ವಿಚಕ್ರ ವಾಹನ ಮತ್ತು ಆಟೋಗಳ ಚಾಲಕರಿಗೆ ಸರ್ಕಲ್ ಇನ್ಸ್‌ಪೆಕ್ಟರ್ ಪಿಪಿ ಸಂತೋಷ್ ನೇತೃತ್ವದಲ್ಲಿ ಪೊಲೀಸ್ ಸಿಬ್ಬಂದಿಗಳು ಬಿಸಿ ಮುಟ್ಟಿಸಿದ್ದಾರೆ.

ಪಟ್ಟಣದ ಸಮೀಪ ಹಂಪಾಪುರ ರೈಲ್ವೆ ಟ್ರ್ಯಾಕ್ ಬಳಿ ಕಾರ್ಯಾಚರಣೆಗಿಳಿದ ಪೊಲೀಸ್ ತಂಡ ಪರವಾನಗಿ ಇಲ್ಲದೆ ಮೇಕೆ, ಕುರಿ ಸಾಗಿಸುತ್ತಿದ್ದ ನಾಲ್ಕು ಚಕ್ರದ ಆಟೋಗಳು ಮತ್ತು ಪರವಾನಗಿ ಇಲ್ಲದೆ ದ್ವಿಚಕ್ರ ವಾಹನ ಸವಾರರು ಹಾಗೂ ದ್ವಿಚಕ್ರದಲ್ಲಿ ಮೂರು ಜನ ಸವಾರಿ ಮಾಡುತ್ತಿದ್ದವರನ್ನು ಹಿಡಿದು ದಂಡ ವಿಧಿಸುವ ಜೊತೆಗೆ ಎಚ್ಚರಿಕೆ ನೀಡಿ ಕಳಿಸುತ್ತಿದ್ದರು.

ನಂತರ ಮಾತನಾಡಿದ ಪಿ.ಪಿ. ಸಂತೋಷ್, ಇಲಾಖೆಯ ಆದೇಶದಂತೆ ಕಳ್ಳತನ, ದರೋಡೆ, ಅಪಘಾತ ತಪ್ಪಿಸುವ ಉದ್ದೇಶದಿಂದ ವಾಹನಗಳ ತಪಾಸಣೆ ಮಾಡುತ್ತಿದ್ದು, ವಾಹನಗಳ ದಾಖಲೆ ಸರಿ ಇದ್ದು, ಅಂತ ವಾಹನಗಳಿಗೆ ಯಾವುದೇ ತೊಂದರೆ ನೀಡುವುದಿಲ್ಲ ಹಾಗೂ ಕೆಲವು ದ್ವಿಚಕ್ರ ವಾಹನ ಸವಾರರು ಪರವಾನಗಿ ಇಲ್ಲದೆ ಓಡಿಸುತ್ತಿರುವುದು ಕಂಡು ಬಂದಿದ್ದರಿಂದ ತಪಾಸಣೆ ಮಾಡುತ್ತಿದ್ದೇವೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಪೊಲೀಸ್ ಪೇದೆಗಳಾದ ಮಂಜಣ್ಣ, ಆಲಿ ಸೇರಿದಂತೆ ಇನ್ನಿತರರು ಹಾಜರಿದ್ದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಆಧುನಿಕ ಮೈಸೂರು ನಿರ್ಮಾತೃ

ನಂಜನಗೂಡು, ಜೂ.5– ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಆಧುನಿಕ ಮೈಸೂರು ನಿರ್ಮಾತೃಗಳಾಗಿದ್ದು, ಅವರ ಸಾಧನೆಗಳು ಮತ್ತು ಕೊಡುಗೆಗಳು ಅಪಾರವಾಗಿವೆ ಎಂದು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷೆ ಲತಾ ಮೋಹನ್ ಹೇಳಿದರು.



ಅವರು ಮಂಗಳವಾರ ನಾಲ್ವಡಿ ಕೃಷ್ಣರಾಜ ಒಡೆಯರ್ ರವರ ಜಯಂತ್ಯುತ್ಸವದ ಅಂಗವಾಗಿ ಕನ್ನಡ ಸಾಹಿತ್ಯ ಪರಿಷತ್ ಕಚೇರಿಯಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿದರು.

ನಾಲ್ವಡಿ ಕೃಷ್ಣರಾಜರವರು ಭಾರತ ದೇಶದಲ್ಲಿ ಕೆಲವೇ ದಿನಗಳ ಹಿಡಿತದಲ್ಲಿ ಇದ್ದ ವಿದ್ಯಾಭ್ಯಾಸವನ್ನು ಎಲ್ಲಾ ಜನಾಂಗಗಳಿಗೂ ವಿಸ್ತರಿಸುವ ಮೂಲಕ ಅದರಲ್ಲೂ ಶೋಷಿತ ಸಮುದಾಯಗಳು, ಹಳ್ಳಿಗಾಡಿನ ಜನಗಳಿಗೆ, ಪ್ರಮುಖವಾಗಿ ಹೆಣ್ಣು ಮಕ್ಕಳಿಗೆ ವಿಸ್ತರಿಸಿದ ದೊರೆಯಾಗಿದ್ದರು ಎಂದರು.

ಅಲ್ಲದೆ ಸರ್ಕಾರಿ ಆಸ್ಪತ್ರೆಗಳನ್ನು ಕಟ್ಟಿಸಿ ಬಡವರಿಗೆ ಆರೋಗ್ಯ ಸೇವೆ ಒದಗಿಸಿದ ಧೀಮಂತ ನಾಯಕ, ತಮ್ಮ ಒಡವೆಯನ್ನು ಮಾರಿ ಕಾವೇರಿ ನದಿಗೆ ಕನ್ನಂಬಾಡಿ ಕಟ್ಟೆ ಕಟ್ಟಿಸಿ ರೈತರಿಗೆ ಮತ್ತು ಮೈಸೂರಿನ ಜನತೆಗೆ ಕುಡಿಯುವ ನೀರನ್ನು ಒದಗಿಸಿ ಕೊಟ್ಟ ಆಧುನಿಕ ನಿರ್ಮಾತೃ. ಜೊತೆಗೆ ಮೈಸೂರು ಲ್ಯಾಂಪ್, ಮೈಸೂರು ಸ್ಯಾಂಡಲ್ ಸೋಪ್, ಗಂಧದ ಎಣ್ಣೆ ಕಾರ್ಖಾನೆ, ಮೈಸೂರು ಸಿಲ್ಕ್, ಮೈಸೂರು ಬನಿಯನ್, ಸಕ್ಕರೆ ಕಾರ್ಖಾನೆಗಳನ್ನು ತೆರೆದು ಜನಸಾಮಾನ್ಯರಿಗೆ ಉದ್ಯೋಗ ಒದಗಿಸಿಕೊಟ್ಟವರು. ಅವರು ಪ್ರಜಾಪ್ರಭುತ್ವ ಎಂದರೆ ಹೀಗಿರಬೇಕು ಎಂಬುದನ್ನು ಸ್ವಾತಂತ್ರ್ಯ ಪೂರ್ವದಲ್ಲಿ ಇಡೀ ಪ್ರಪಂಚಕ್ಕೆ ತೋರಿಸಿಕೊಟ್ಟ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದರು. ಇದೇ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಸದಸ್ಯರಾದ ರಂಗಸ್ವಾಮಿ, ಸತೀಶ್ ದಳವಾಯಿ, ಶೋಭಾ, ಮಂಜುಳಾ, ವೆಂಕಟಾಚಲ, ಮುಂತಾದವರು ಉಪಸ್ಥಿತರಿದ್ದರು.

ಆಧುನಿಕ ತಂತ್ರಜ್ಞಾನದಿಂದ ನೆಲ, ಜಲ, ಗಾಳಿ ಮಲಿನ

ತಿ.ನರಸೀಪುರ, ಜೂ.5– ಆಧುನಿಕ ತಂತ್ರಜ್ಞಾನಗಳು ಹೆಚ್ಚಾದಂತೆ ಸಹಜವಾಗಿ ನಿಸರ್ಗದ ಮೇಲಿನ ಒತ್ತಡ ಹೆಚ್ಚುತ್ತಿದೆ. ನೆಲ, ಜಲ, ಗಾಳಿ ಸೇರಿದಂತೆ ಎಲ್ಲವು ಇಂದು ಮಲಿನಗೊಳ್ಳುತ್ತಿವೆ. ಇದನ್ನು ಸರಿದೂಗಿಸಲು ಪರಿಸರದಲ್ಲಿ ಸಮತೋಲನ ಕಾಪಾಡಿಕೊಳ್ಳುವುದು ಬಹುಮುಖ್ಯ ಎಂದು ಎನ್‌ಕೆಎಫ್ ಪಬ್ಲಿಕ್ ಶಾಲೆಯ ಅಧ್ಯಕ್ಷ ಎನ್.ಕೆ.ಫರೀಧ್ ಹೇಳಿದರು.

ಪಟ್ಟಣದ ಚಾಮರಾಜನಗರ ರಸ್ತೆಯಲ್ಲಿರುವ ಎನ್‌ಕೆಎಫ್ ಪಬ್ಲಿಕ್ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಸಸಿ ನೆಡುವ ಕಾರ್ಯಕ್ರಮದಲ್ಲಿ ಮಕ್ಕಳು ಹಾಗು ಶಿಕ್ಷಕಿಯರೊಂದಿಗೆ ಸಸಿ ನೆಟ್ಟು ಅವರು ಮಾತನಾಡಿದರು.

ಕಲುಷಿತಗೊಳ್ಳುತ್ತಿರುವ ನಿಸರ್ಗದ ವಾತಾವರಣವನ್ನು ಸಮತೋಲನವಾಗಿ ಕಾಪಾಡುವ ಜವಾಬ್ದಾರಿ ಎಲ್ಲರ ಮೇಲಿದೆ. ಎಲ್ಲೆಡೆ ಪರಿಸರ ಹಗದಗೆಡುತ್ತಿದೆ. ಶುದ್ಧವಾದ ಕುಡಿಯಲು ನೀರು, ಗಾಳಿ ಇಲ್ಲವಾಗಿದೆ. ಇದರಿಂದ ಮಾನವರ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮದಿಂದ ಅನಾರೋಗ್ಯಕ್ಕೆ ಕಾರಣವಾಗುತ್ತದೆ. ನಿಸರ್ಗದಿಂದ ಏನೆಲ್ಲವನ್ನು ಪಡೆಯುವ ನಾವು ಅದಕ್ಕಾಗಿ ಮರಳಿ ಕೊಡುಗೆ ನೀಡಲು ಗಿಡ, ಮರಗಳನ್ನು ಬೆಳೆಸಿ ಉತ್ತಮ ಪರಿಸರ ಕಾಪಾಡಲು ಮುಂದಾಗಬೇಕೆಂದು ಕರೆ ನೀಡಿದರು.

ಶಾಲೆಯ ಮುಖ್ಯ ಶಿಕ್ಷಕಿ ಹೇಮಾ ಮಾತನಾಡಿ, ಪರಿಸರ ಸಂರಕ್ಷಣೆಯ ಹೊಣೆ ಎಲ್ಲರ ಮೇಲಿದೆ.ಪ್ರತಿಯೊಬ್ಬರು ಒಂದೊಂದು ಗಿಡ ನೆಡುವ ಮೂಲಕ ಪರಿಸರದಲ್ಲಿ ಉಂಟಾಗುತ್ತಿರುವ ಹವಾಮಾನ ವೈಪರೀತ್ಯವನ್ನು ಸ್ವಲ್ಪ ಮಟ್ಟಿಗಾದರೂ ತಡೆಯಲು ಮುಂದಾಗಬೇಕು. ಕೇವಲ ಪರಿಸರ ದಿನಾಚರಣೆಯಂದೇ ಗಿಡ ನೆಡಬೇಕೆಂದಿಲ್ಲ.ನಾವು ಸಾಲು ಮರದ ತಿಮ್ಮಕ್ಕರಷ್ಟು ಸಾಧನೆ ಮಾಡಲು ಸಾಧ್ಯವಲ್ಲದಿದ್ದರೂ ಅವರಿಗಿದ್ದ ಪರಿಸರ ಕಾಳಜಿಗೆ ಗೌರವ ಸಲ್ಲಿಸುವ ಕೆಲಸ ಮಾಡಬೇಕಿದೆ. ಮನುಷ್ಯನಿಗೆ ನೀರು, ಗಾಳಿ, ಬೆಳಕು ಬಹು ಮುಖ್ಯ. ಹಾಗಾಗಿ ಮರಗಳ ಸಂರಕ್ಷಣೆ ಮಾಡಲು ನಾವೆಲ್ಲರೂ ಪಣ ತೊಡಬೇಕಿದೆ ಎಂದರು.


ಅಂತರರಾಷ್ಟ್ರೀಯ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಎನ್.ಕೆ.ಫರೀದ್ ಶಾಲಾವರಣದಲ್ಲಿ ಸಸಿ ನೆಟ್ಟು ನೀರೆರೆದರು.

ಕಾರ್ಯಕ್ರಮದಲ್ಲಿ ಶಾಲೆಯ ಕಾರ್ಯದರ್ಶಿ ಜೋಹಾರ ಸುಲ್ತಾನ, ಕಾಂಗ್ರೆಸ್ ಅಲ್ಪಸಂಖ್ಯಾತರ ವಿಭಾಗದ ಕಾರ್ಯದರ್ಶಿ ಬಿ.ಮನ್ಸೂರ್ ಆಲಿ, ಎಂಡಿಎಂ ಚಿಕನ್ ಸೈಯದ್, ರಿಯಾಜ್ ಅಹಮದ್, ಒಕ್ಕಲಿಗರ ಸಂಘದ ಕಾರ್ಯದರ್ಶಿ ಟಿ.ಎನ್.ಗುರುಪ್ರಸಾದ್, ಮುಖ್ಯ ಶಿಕ್ಷಕಿ ಹೇಮ, ಸಹ ಶಿಕ್ಷಕಿಯರಾದ ಕೆ.ಅಶ್ವಿನಿ, ಗೀತಾ, ಅನಿತಾ, ರಶ್ಮಿ, ಹಾಜಿರಾ ಬೇಗಂ, ರೇಖಾ, ಶೈಲಾ, ಎಸ್.ಶಿಲ್ಪಶ್ರೀ, ರಜಿಯಾ ಸುಲ್ತಾನ, ಎಂ.ಶಿಲ್ಪ, ಭಾನು ಮತಿ, ರಂಜಿತಾ, ರಮ್ಯಶ್ರೀ ಮತ್ತಿತರಿದ್ದರು.

ಕಾವೇರಿ ನೀರು ಕುಡಿಯಬೇಡಿ, ಗೃಹ ಬಳಕೆಗೆ ಮಾತ್ರ ಬಳಸಿ

ಟ್ಯಾಂಕರ್‌ಗಳ ನೀರು ಕುದಿಸಿ, ಆರಿಸಿ ಕುಡಿಯಿರಿ

ಹುಣಸೂರು, ಜೂ.5– ನಗರ ಸಭೆ ವತಿಯಿಂದ ಪೂರೈಸುತ್ತಿರುವ ಕಾವೇರಿ ನೀರನ್ನು ಕುಡಿಯಲು ಉಪಯೋಗಿಸದೆ, ಗೃಹೋಪಯೋಗಿ ಬಳಕೆಗೆ ಮಾತ್ರ ಉಪಯೋಗಿಸುವಂತೆ ನಗರಸಭೆಯ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶರ್ಮಿಳಾ ತಿಳಿಸಿದ್ದಾರೆ.




ಪಟ್ಟಣಕ್ಕೆ ಸರಬರಾಜಾಗುತ್ತಿರುವ ಕಾವೇರಿ ನೀರು ಕುಡಿಯಲು ಯೋಗ್ಯವಲ್ಲ ಎಂಬ ಕಾರಣದಿಂದ ನಿಲ್ಲಿಸಲಾಗಿತ್ತು. ನಗರದಲ್ಲಿ ನೀರಿನ ಅವಶ್ಯಕತೆ ತುಂಬಾ ಇರುವುದರಿಂದ ಮತ್ತೆ ನೀರನ್ನು ಬಿಡಲಾಗುತ್ತಿದ್ದು, ಅದನ್ನು ಕೇವಲ ಗೃಹಬಳಕೆಗೆ ಅಂದರೆ ಪಾತ್ರೆ, ಬಟ್ಟೆ ತೊಳೆಯಲು, ಸ್ನಾನ ಮಾಡಲು ಹಾಗೂ ನಿತ್ಯ ಕರ್ಮಗಳಿಗೆ ಮಾತ್ರ ಬಳಸಲು ಸೂಚಿಸಿ ಬಿಡುಗಡೆ ಮಾಡಲಾಗುತ್ತಿದೆ

ಕುಡಿಯಲು ಈಗಾಗಲೇ ಟ್ಯಾಂಕರ್‌ಗಳಿಂದ ಬೋರ್‌ವೆಲ್ ನೀರನ್ನು ಪೂರೈಸುತ್ತಿದ್ದು, ಈ ನೀರನ್ನು ಕುದಿಸಿ, ಆರಿಸಿ ಅಡುಗೆ ಹಾಗೂ ಕುಡಿಯಲು ಬಳಸಲು ಅವರು ತಮ್ಮ ಪತ್ರಿಕಾ ಹೇಳಿಕೆ ಮೂಲಕ ಮನವಿ ಮಾಡಿದ್ದಾರೆ.

ಮರಿಓಬಮ್ಮ ನಿಧನ

ಸರಗೂರು, ಜೂ.5– ಪಟ್ಟಣದ ಪತ್ರಕರ್ತ ದಾಸೇಗೌಡರ ತಾಯಿ ಮರಿಓಬಮ್ಮ (80) ಬುಧವಾರ ಬೆಳಗಿನ ಜಾವ 3 ಗಂಟೆ ಸಮಯದಲ್ಲಿ ಅನಾರೋಗ್ಯದಿಂದ ಮೃತಪಟ್ಟಿದ್ದಾರೆ. ಮೃತರಿಗೆ ಪುತ್ರ ಇದ್ದಾರೆ. ಇವರ ಅಂತ್ಯಕ್ರಿಯೆ ಆರ್ಯ ಈಡಿಗ ಸಮಾಜದ ರುದ್ರ ಭೂಮಿಯಲ್ಲಿ ನಡೆಯಿತು.



ವಿದ್ಯುತ್ ಸ್ಪರ್ಶದಿಂದ ಹಸು ಸಾವು

ಬೆಟ್ಟದಪುರ, ಜೂ.5– ಹೈಮಾಸ್ಟ್ ವಿದ್ಯುತ್ ಕಂಬದಿಂದ ವಿದ್ಯುತ್ ಸ್ಪರ್ಶಗೊಂಡು ಹಸುವೊಂದು ಸಾವನ್ನಪ್ಪಿದೆ. ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಸಂತೆ ಮೈದಾನದಲ್ಲಿ ಹೈಮಾಸ್ಟ್ ವಿದ್ಯುತ್ ಕಂಬವನ್ನು ಹಾಕಲಾಗಿತ್ತು. ಇಂದು ಮಧ್ಯಾಹ್ನ ಬೆಟ್ಟದಪುರ ಗ್ರಾಮದ ನಂದೀಶ್ ಶೆಟ್ಟಿ ಎಂಬ ರೈತನ ಸುಮಾರು 60,000 ಬೆಲೆ ಬಾಳುವ ಹಸು ಈ ವಿದ್ಯುತ್ ಕಂಬದ ಹತ್ತಿರ ಹೋದಾಗ ವಿದ್ಯುತ್ ಸ್ಪರ್ಶಗೊಂಡು ಸ್ಥಳದಲ್ಲೇ ಸಾವನ್ನಪ್ಪಿದೆ.



ಈ ಕುರಿತು ಬೆಟ್ಟದಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಸ್ಥಳಕ್ಕೆ ಬೆಟ್ಟದಪುರ ವಿದ್ಯುತ್ ಇಲಾಖೆಯ ಸಹಾಯಕ ಕಾರ್ಯಪಾಲಕ ಪ್ರಶಾಂತ್ ಕುಮಾರ್ ಹಾಗೂ ಬೆಟ್ಟದಪುರದ ಗ್ರಾಮ ಪಂಚಾಯತಿ ಪಿಡಿಓ ಮಂಜುನಾಥ್ ಹಾಗೂ ಪಶು ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ, ಸ್ಥಳ ಪರಿಶೀಲಿಸಿ ರೈತನಿಗೆ ಸರ್ಕಾರದಿಂದ ಬರುವ ಸಹಾಯಧನ ಮತ್ತು ಪರಿಹಾರವನ್ನು ನೀಡಲು ವರದಿ ಕೊಡುವು ದಾಗಿ ವಿದ್ಯುತ್ ಇಲಾಖೆಯ ಹಾಗೂ ಗ್ರಾಮ ಪಂಚಾಯತಿ ಹಾಗೂ ಪಶು ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಮರಣೋತ್ತರ ಪರೀಕ್ಷೆ ನಂತರ ರೈತನಿಗೆ ಹಸುವನ್ನು ನೀಡಲಾ ಯಿತು. ರೈತನ ಜಮೀನಿನಲ್ಲಿ ಅಂತ್ಯಕ್ರಿಯೆ ಮಾಡಲಾಯಿತು.

ಸುನೀಲ್ ಬೋಸ್ ಗೆಲುವು ಹೆಚ್.ಡಿ.ಕೋಟೆ

ಕ್ಷೇತ್ರದ ಅಭಿವೃದ್ಧಿಗೆ ಮತ್ತಷ್ಟು ಬಲ

ಹೆಚ್.ಡಿ.ಕೋಟೆ, ಜೂ.5– ಸುನಿಲ್ ಬೋಸ್ ಗೆಲುವು ನನ್ನ ಕ್ಷೇತ್ರದಲ್ಲಿ ಹೆಚ್ಚಿನ ಅಭಿವೃದ್ಧಿ ಕೆಲಸ ಮಾಡಲು ಮತ್ತಷ್ಟು ಹೆಚ್ಚಿನ ಬಲ ಬಂದಿದೆ ಎಂದು ಶಾಸಕ ಅನಿಲ್ ಚಿಕ್ಕಮಾದು ಬಣ್ಣಿಸಿದ್ದಾರೆ.

ಸುನಿಲ್ ಬೋಸ್ ಅವರು ಗೆಲುವು ಸಾಧಿಸುತ್ತಿದ್ದಂತೆ ಪಕ್ಷದ ಮುಖಂಡರು, ಕಾರ್ಯಕರ್ತರೊಂದಿಗೆ ಶುಭ ಕೋರಿ ವಿಜಯೋತ್ಸವ ಆಚರಿಸಿದ ನಂತರ ಮಾತನಾಡಿದ ಅವರು, ತಾಲೂಕಿನ ಮತದಾರರು ಅತಿ ಹೆಚ್ಚು ಮತಗಳನ್ನು ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಸುನಿಲ್ ಬೋಸ್‌ಗೆ ನೀಡಿ ಸಂಸದರನ್ನಾಗಿ ಆಯ್ಕೆ ಮಾಡಿದ್ದಾರೆ ಎಂದರು.

ತಾಲೂಕಿನಲ್ಲಿ ಬಿಜೆಪಿ ಮತ್ತು ಜಾ.ದಳದ ಮೈತ್ರಿ ಅಭ್ಯರ್ಥಿ ಬಾಲರಾಜ್ ಅವರಿಗಿಂತ ನಮ್ಮ ಪಕ್ಷದ ಅಭ್ಯರ್ಥಿ, ಸುನಿಲ್ ಬೋಸ್ ಅವರಿಗೆ 25 ಸಾವಿರಕ್ಕೂ ಅಧಿಕ ಮತಗಳನ್ನು ಕ್ಷೇತ್ರದ ಜನತೆ ನೀಡಿ ಆಶೀರ್ವದಿಸುವ ಮೂಲಕ ನನಗೂ ಶಕ್ತಿ ತುಂಬಿದ್ದಾರೆ ಎಂದರು.

ಕೇಂದ್ರ ಸರ್ಕಾರದ ಯೋಜನೆಗಳು ಮತ್ತು ರಾಜ್ಯ ಸರ್ಕಾರದ ಕಾರ್ಯಕ್ರಮಗಳನ್ನು ಶಾಸಕರಾಗಿ ನಾನು ಮತ್ತು ಸಂಸದರಾಗಿ ಸುನಿಲ್ ಬೋಸ್ ಅವರು ಅನುಷ್ಠಾನಗೊಳಿಸಿ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡಲಿದ್ದೇವೆ ಎಂದರು.


ಸುನೀಲ್ ಬೋಸ್ ಅವರು ಗೆಲುವು ಸಾಧಿಸುತ್ತಿದ್ದಂತೆ ಶಾಸಕ ಅನಿಲ್ ಚಿಕ್ಕಮಾದು ಸೇರಿದಂತೆ ಪಕ್ಷದ ಮುಖಂಡರು, ಕಾರ್ಯಕರ್ತರು ಶುಭಕೋರಿದರು.

ಇದೇ ಸಂದರ್ಭದಲ್ಲಿ ಜಯಕರ್ನಾಟಕ ರಾಜ್ಯ ಉಪಾಧ್ಯಕ್ಷ ಸತೀಶ್ ಗೌಡ, ಮೈಮುಲ್ ನಿರ್ದೇಶಕ ಈರೇಗೌಡ, ನಂಜನಗೂಡು ಕೆಪಿಸಿಸಿ ಉಸ್ತುವಾರಿ ಸೋಮೇಶ್, ಯೂತ್ ಕಾಂಗ್ರೆಸ್ ಅಧ್ಯಕ್ಷ ಹೋಂಡಾ ನಯಾಜ್, ಪುರಸಭಾ ಸದಸ್ಯ ಹೆಚ್.ಸಿ. ನರಸಿಂಹ ಮೂರ್ತಿ, ನಾಗನಹಳ್ಳಿ ಪ್ರದೀಪ, ಸಿಂಡಿಕೇಟ್ ಸದಸ್ಯ ಕ್ಯಾತನಹಳ್ಳಿ ನಾಗರಾಜ್, ಜಯರಾಮ್, ರಾಜು, ಗಣೇಶ್, ರವಿ, ಬಾಲಯ್ಯ, ಪ್ರಕಾಶ್, ಆಸಿಫ್, ಮಂಜುನಾಥ್, ಪರಶಿವ ಮೂರ್ತಿ, ರಾಜೇಗೌಡ, ಸುರೇಶ್, ಕೆಂಡಗಣ್ಣೆ ಗೌಡ, ಸ್ವಾನಿ, ಸ್ವಾಮಿ, ವಡ್ಡರಗುಡಿ ರವಿ, ದಿನೇಶ್, ವನಸಿರಿ ಉಮೇಶ್, ಶಂಕರ, ಶಶಿ, ನಟರಾಜ್, ಜಿನ್ನಹಳ್ಳಿ ರಾಜನಾಯಕ, ಇನ್ನು ಮುಂತಾದವರು ಹಾಜರಿದ್ದರು.

> ಚುನಾವಣೆ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಡಾ:ಎಚ್.ಸಿ.ಮಹದೇವಪ್ಪ ಅವರಿಗೆ ನೀಡಿದ ಮಾತಿನಂತೆ ಕ್ಷೇತ್ರದಲ್ಲಿ ನಾನು ಮತ್ತು ಕಾರ್ಯಕರ್ತರು, ಮುಖಂಡರು ಹಗಲಿರುಳು ಎನ್ನದೆ ಕೆಲಸ ನಿರ್ವಹಿಸಿ ಸರ್ಕಾರದ ಯೋಜನೆಗಳು, ಗ್ಯಾರಂಟಿ ಯೋಜನೆಗಳು, ಕ್ಷೇತ್ರದಲ್ಲಿನ ಅಭಿವೃದ್ಧಿ ಕೆಲಸಗಳು ಹಾಗೂ ನನ್ನ ನಾಯಕತ್ವದಿಂದ ಜನಸಾಮಾನ್ಯರ ಮನಸ್ಸನ್ನು ಗೆದ್ದು ಸುನಿಲ್ ಬೋಸ್ ಅವರ ಗೆಲುವಿಗೆ ಶ್ರಮಿಸಿ ತಾಲೂಕಿನಲ್ಲಿ ಕಾಂಗ್ರೆಸ್ ಬಲಿಷ್ಠವಾಗಿರುವುದನ್ನು ತೋರಿಸಿದ್ದೇವೆ. ನಮ್ಮ ಕ್ಷೇತ್ರದಲ್ಲಿ ನನಗೆ ದಿ. ಆರ್. ಧ್ರುವನಾರಾಯಣ್, ನನ್ನ ತಂದೆ ದಿ. ಚಿಕ್ಕಮಾದು ಹಾಗೂ ಕ್ಷೇತ್ರದ ಜನತೆಯ ಸಂಪೂರ್ಣ ಆಶೀರ್ವಾದವಿದೆ.
> -ಅನಿಲ್ ಚಿಕ್ಕಮಾದು, ಶಾಸಕ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಗಂ ಗಂ ಗಣೇಶ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಗ್ಯಾಂಗ್ಸ್ ಆಫ್ ಗೋಧಾವರಿ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕ್ರೂ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಅರನ್‌ಮನೆ (ತ)	4 ಪ್ರದರ್ಶನಗಳು
ಗಾಯಿತ್ರಿ	
ಜಡ್ಜ್‌ಮೆಂಟ್ (ಕ)	4 ಪ್ರದರ್ಶನಗಳು
ರಾಜಕಮಲ್	
ಹಿಟ್‌ಲಿಸ್ಟ್ (ತ)	4 ಪ್ರದರ್ಶನಗಳು
ಸಂಗಂ	
ಗರುಡನ್ (ತ)	4 ಪ್ರದರ್ಶನಗಳು
ಲಿಡೋ	
ಅಂಜನೀಪುತ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ನೈಟ್ ಕರ್ಫ್ಯೂ (ಕ)	4 ಪ್ರದರ್ಶನಗಳು
ಪ್ರಭಾ	
ಕೃಷ್ಣಾ ನೀ ಬೇಗನೆ ಬಾರೋ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಥಾಲವನ್ (ಮ): ಬೆ.11.15ಕ್ಕೆ, ಗಾರ್ಫೀಲ್ಡ್ ಮೂವಿ (3ಡಿ)(ಇಂ): ಮ.2ಕ್ಕೆ, ಹಿಟ್ ಲಿಸ್ಟ್ (ತ): ಸಂ.4.15ಕ್ಕೆ, ಗ್ಯಾಂಗ್ಸ್ ಆಫ್ ಗೋಧಾವರಿ (ತೆ): ರಾ.7ಕ್ಕೆ, ಗಂ ಗಂ ಗಣೇಶ (ತೆ): ರಾ.9.55ಕ್ಕೆ
ಸ್ಕ್ರೀನ್ 2	ಗರುಡನ್ (ತ): ಬೆ.11ಕ್ಕೆ, ಮ.1.45ಕ್ಕೆ, ಭಜೆ ವಾಯು ವೇಗಂ (ತೆ): ಸಂ.4.35ಕ್ಕೆ, ಮಂದಾಕಿನಿ (ಮ): ರಾ.7.20ಕ್ಕೆ, ಅರನ್‌ಮನೈ 4 (ಹಿಂ): ರಾ.10ಕ್ಕೆ
ಸ್ಕ್ರೀನ್ 3	ಭೋಟಾ ಭೀಮ್ ಅಂಡ್ ದಿ ಕರ್ಸ್ (ಹಿಂ): ಬೆ.10.35ಕ್ಕೆ, ಸಂ.4.25ಕ್ಕೆ, ಟರ್ಬೋ (ಮ): ಮ.1.25ಕ್ಕೆ, ದಿ ಜಡ್ಜ್‌ಮೆಂಟ್ (ಕ): ರಾ.7.05ಕ್ಕೆ, ಒನ್ಸ್ ಅಪೋನ್ ಎ ಟೈಂ ಇನ್ ಕೊಚ್ಚಿ (ಮ): ರಾ.10ಕ್ಕೆ.
ಸ್ಕ್ರೀನ್ 4	ಮಿಸ್ಟರ್ ಅಂಡ್ ಮಿಸಸ್ ಮಹಿ (ಹಿಂ): ಬೆ.10.35ಕ್ಕೆ, ಮ.1.25ಕ್ಕೆ, ಸಂ.4.15ಕ್ಕೆ, ರಾ.7.05ಕ್ಕೆ, ರಾ.9.55ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಗಾರ್ಫೀಲ್ಡ್ ಮೂವಿ (3ಡಿ)(ಇಂ): ಬೆ.10.40ಕ್ಕೆ, ಮ.1ಕ್ಕೆ, ಸಂ.6.10ಕ್ಕೆ, ರಾ.8.30ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಮ.3.20ಕ್ಕೆ.
ಸ್ಕ್ರೀನ್ 2	ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ರಾ.7.05ಕ್ಕೆ, ಶ್ರೀಕಾಂತ್ (ಹಿಂ): ಮ.1.05ಕ್ಕೆ, ರಾ.10.10ಕ್ಕೆ,
ಸ್ಕ್ರೀನ್ 3	ಇಂಗ ನಾನ್ ಥಾನ್ ಕಿಂಗು (ತ): ಬೆ.11.05ಕ್ಕೆ, ಇಫ್ 2024 (ಇಂ): ಮ.1.55ಕ್ಕೆ, ರಾ.7.35ಕ್ಕೆ, A (ಕ): ಸಂ.4.20ಕ್ಕೆ, ಗುರುವಾಯೂರ್ ಅಂಬಲನಾಡಿಯಿಲ್ (ಮ): ರಾ.10ಕ್ಕೆ.
ಸ್ಕ್ರೀನ್ 4	ರಾಮನ ಅವತಾರ (ಕ): ಮ.12.45ಕ್ಕೆ, ಕೃಷ್ಣ ನೀ ಬೇಗನೇ ಬಾರೋ (ಕ): ಮ.3.40ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಸಂ.6.55ಕ್ಕೆ, ಅರಮನೈ 4 (ತ): ರಾ.9.45ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಎವಿಡೆನ್ಸ್ (ಕ): ಬೆ.11.15ಕ್ಕೆ, ಅರನ್‌ಮನೈ 4 (ತ): ಮ.1.15ಕ್ಕೆ, ಟರ್ಬೋ (ಮ): ಸಂ.4ಕ್ಕೆ, ಮೂರನೇ ಕೃಷ್ಣಪ್ಪ (ಕ): ಸಂ.6.40ಕ್ಕೆ, ದಿ ಜಡ್ಜ್‌ಮೆಂಟ್ (ಕ): ರಾ.9.30ಕ್ಕೆ.
ಸ್ಕ್ರೀನ್ 2	ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ): ಬೆ.10.20ಕ್ಕೆ, ಸಂ.4.05ಕ್ಕೆ, ಟರ್ಬೋ (ಮ): ಮ.1.05ಕ್ಕೆ, ಸಂ.6.50ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ದಿ ಜಡ್ಜ್‌ಮೆಂಟ್ (ಕ): ಬೆ.10.40ಕ್ಕೆ, ಮ.3.55ಕ್ಕೆ, 3ದೇವಿ (ಕ): ಮ.1.30ಕ್ಕೆ, ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ): ಸಂ.6.45ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಗರುಡ ಮಾಲ್,

1ನೇ ಮಹಡಿ, ಮೊ.ನಂ: 9901373210

ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1.15ಕ್ಕೆ, ಮ.3.40ಕ್ಕೆ, ರಾ.7.15ಕ್ಕೆ, ರಾ.10ಕ್ಕೆ, ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10.05ಕ್ಕೆ, ಮ.12ಕ್ಕೆ, ಮ.3.10ಕ್ಕೆ, ಸಂ.6.20ಕ್ಕೆ, ರಾ.9.30ಕ್ಕೆ, ಸ್ಟಾರ್ (ತ): ಮ.1ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, 4N6 (ಕ): ಮ.1.05ಕ್ಕೆ, ಅಂಜನೀಪುತ್ರ (ಕ): ಸಂ.4.15ಕ್ಕೆ, ಕೃಷ್ಣಮ್ಮ (ತೆ): ಸಂ.4.20ಕ್ಕೆ, ರಾ.10.15ಕ್ಕೆ, ಪವರ್ (ಕ): ಸಂ.6.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ನಂಜನಗೂಡು ತಾಲೂಕಿನಲ್ಲಿ ಪರಿಸರ ದಿನಾಚರಣೆ



ಮೈಸೂರು, ಜೂ.5– ಮ್ಯಾಜಿಕ್ ಬಸ್ ಮತ್ತು ನೆಸ್ಲೆ ಸಹಯೋಗದೊಂದಿಗೆ ನಂಜನಗೂಡು ತಾಲೂಕಿನ ಮೂರು ಶಾಲೆಗಳಲ್ಲಿ ಪರಿಸರ ದಿನವನ್ನು ವಿಭಿನ್ನವಾಗಿ ಆಚರಿಸಲಾಯಿತು.

ಮೂಡಲಹಳ್ಳಿ ಶಾಲೆ ಮುಂಭಾಗ ಹಾಗೂ ಶಾಲೆಯ ರಸ್ತೆಯನ್ನು ಸ್ವಚ್ಛಗೊಳಿಸಲಾಯಿತು. ಹುಳಿಮಾವು ಮತ್ತು ಮರಳೂರಿನಲ್ಲಿ ಶಾಲಾ ವಿದ್ಯಾರ್ಥಿಗಳು 'ಪರಿಸರ ರಕ್ಷಣೆ ನಮ್ಮೆಲ್ಲರ ಹೊಣೆ', 'ಕಾಡು ಬೆಳೆಸಿ ನಾಡು ಉಳಿಸಿ', 'ಹಸಿರೇ ಉಸಿರು', 'ಮನೆಗೊಂದು ಮರ ಊರಿಗೊಂದು ವನ' ಮುಂತಾದ ಘೋಷವಾಕ್ಯಗಳುಳ್ಳ ಫಲಕ ಹಿಡಿದು ಜಾಥಾ ನಡೆಸುವ ಮೂಲಕ ಗ್ರಾಮಸ್ಥರಲ್ಲಿ ಪರಿಸರ ಜಾಗೃತಿ ಮೂಡಿಸಿದರು. ಅಲ್ಲದೆ, ನೂರಕ್ಕೂ ಹೆಚ್ಚು ಗಿಡ ನಡೆಸಲಾಯಿತು.

ಈ ಕಾರ್ಯಕ್ರಮದಲ್ಲಿ 30ಕ್ಕೂ ಹೆಚ್ಚು ಯುವಕರು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಾದ ಮಹದೇವಸ್ವಾಮಿ, ಆಶಾ, ಮುಖ್ಯ ಶಿಕ್ಷಕರಾದ ರಂಗಸ್ವಾಮಿ, ಲಕ್ಷ್ಮೀದೇವಿ, ಡಾ. ಸುಜಾತಾ, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಪುಟ್ಟ ಅನಿತಾ, ಆಶಾ, ಅಂಗನವಾಡಿ ಕಾರ್ಯಕರ್ತರಾದ ಲೋಲಾಕ್ಷಿ, ಭಾಗ್ಯಮ್ಮ, ಉಮಾವತಿ, ನೇಗಿಲಯೋಗಿ ಸಂಸ್ಥೆ ಅಧ್ಯಕ್ಷ ನಟರಾಜು, ಗ್ರಂಥಪಾಲಕ ಮಹದೇವು, ಮ್ಯಾಜಿಕ್ ಬಸ್ ಜಿಲ್ಲಾ ವ್ಯವಸ್ಥಾಪಕ ವೆಂಕಟೇಶ್, ಸಿಬ್ಬಂದಿಗಳಾದ ಕೆ. ದೀಪು, ಅನಿಲ್, ಸಂಧ್ಯಾ, ರಶ್ಮಿ, ಅಶ್ವಿನಿ, ಸವಿತಾ ಭಾಗವಹಿಸಿದ್ದರು.



ಗಗನ್‌ದೀಪ್
ನಿಖಿಲೇಶ್ ಎಂ ಎಂ
ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ
ನೂತನ ಸಂಸದರಾಗಿ ಚುನಾಯಿತರಾದ
ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್
ಅವರಿಗೆ
ಅಭಿನಂದನೆಗಳು
ಶುಭಕೋರುವವರು
ಪವನ್‌ಗೌಡ